بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 05

ಸಂಚಿಕೆ: 31–32

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

01–08 ಆಗಸ್ಟ್ 2024, 01–08 ಝುಹೂರ್ 1402 ಹಿಜರಿ ಶಮ್‌ಸಿ,
25–02 ಸಫರ್ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

مَا كَانَ مُحَمَّدٌ اَبَآ اَحَدٍ مِّنْ رِّجَالِكُمْ
وَلٰكِنْ رَّسُوْلَ اللّٰهِ وَخَاتَمَ النَّبِيّٖنَ ؕ
وَكَانَ اللّٰهُ بِكُلِّ شَيْءٍ عَلِيْمًا


**(ಅಲ್‌ಅಹ್‌ಝಾಬ್: 41)**

ಅಂದರೆ: ಮುಹಮ್ಮದ್ ನಿಮ್ಮ ಪೈಕಿ ಯಾವನೇ ಪುರುಷನ ಪಿತ ಅಲ್ಲ. ಆದರೆ ಅವರು ಅಲ್ಲಾಹನ ಸಂದೇಶವಾಹಕರೂ ಪ್ರವಾದಿಗಳ ಮುದ್ರೆಯೂ ಆಗಿದ್ದಾರೆ. ಎಲ್ಲ ವಿಚಾರಗಳ ಬಗ್ಗೆ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ.

# ಸೀರತುನ್ನಬೀ(ಸಲ್ಲಲ್ಲಾಹು ಅಲೈಹಿವಸಲ್ಲಮ್) ವಿಷೇಶ ಸಂಚಿಕೆ

**ನಿಸ್ಸಂಶಯವಾಗಿ ನಮ್ಮ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಧ್ಯಾತ್ಮಿಕತೆಯನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿ ದ್ವಿತೀಯ ಆದಮ್ (ಆದಮ್ ಸಾನೀ) ಆಗಿದ್ದರು. ವಾಸ್ತವಿಕವಾಗಿರುವ ಆದಮ್ ಅವರೇ ಆಗಿದ್ದರು. ಅವರ ಮೂಲಕವೇ ಮನುಷ್ಯನ ಎಲ್ಲ ಅನುಗ್ರಹಗಳು ಪರಿಪೂರ್ಣತೆಗೆ ತಲಪಿದುವು. ಮನುಷ್ಯನ ಎಲ್ಲ ಒಳ್ಳೆಯ ಶಕ್ತಿ ಸಾಮೃರ್ಥ್ಯಗಳು ತಮ್ಮ ಕೆಲಸ ಮಾಡತೊಡಗಿದವು. ಮನುಷ್ಯರ ಪ್ರಕೃತಿಯ ಯಾವುದೇ ಶಾಖೆ ನಿಷ್ಕ್ರಿಯವಾಗಿ ಉಳಿಯಲಿಲ್ಲ. ಖತ್‌ಮೆ ನುಬುವ್ವತ್ ಅವರಲ್ಲಿ ಕಾಲದ ಕೊನೆಯ ಭಾಗದ ಕಾರಣದಿಂದ ಮಾತ್ರವಲ್ಲ ನುಬುವ್ವತ್‌ಗೆ ಸಂಬಂಧಿಸಿದ ಎಲ್ಲ ಪರಿಪೂರ್ಣತೆಗಳು ಅವರಲ್ಲಿ ಸಮಾವೇಶಗೊಂಡು ಪರಿಪೂರ್ಣಗೊಂಡ ಕಾರಣವೂ ಆಗಿತ್ತು.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು



ನಮ್ಮ ಪ್ರವಾದಿ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸತ್ಯದ ಪ್ರಕಟಣೆಗೆ ಒಬ್ಬ ಮುಜದ್ದಿದೆ ಅಅ್‌ಝಮ್ (ಅತ್ಯುನ್ನತ ಸುಧಾರಕ) ಆಗಿದ್ದರು. ಅವರು ಕಳೆದು ಹೋದ ಸತ್ಯವನ್ನು ಲೋಕಕ್ಕೆ ಪುನಃ ತಂದರು. ಈ ಹೆಮ್ಮೆಯಲ್ಲಿ ನಮ್ಮ ಪ್ರವಾದಿಯವರೊಂದಿಗೆ ಬೇರೆ ಯಾವ ಪ್ರವಾದಿಯೂ ಸಹಭಾಗಿಯಾಗಿಲ್ಲ. ಅವರು ಲೋಕವನ್ನೆಲ್ಲಾ ಅಂಧಕಾರದಲ್ಲಿರುವುದಾಗಿ ಕಂಡರು. ಅವರ ಆಗಮನದ ಮೂಲಕ ಆ ಅಂಧಕಾರ ತೊಲಗಿ ಪ್ರಕಾಶಭರಿತವಾಯಿತು. ಅವರು ಯಾವ ಜನಾಂಗದಲ್ಲಿ ಜನಿಸಿದರೋ ಆ ಜನಾಂಗದವರು ಅವರು ಮೃತರಾಗುವ ಮೊದಲು ಬಹುದೇವಾರಾಧನೆಯ ನಿಲುವಂಗಿಯನ್ನು ಕಳಚಿ ಏಕದೇವ ವಿಶ್ವಾಸದ (ತೌಹೀದಿನ) ಪೋಷಾಕು ಧರಿಸಿದರು. ಇಷ್ಟು ಮಾತ್ರವಲ್ಲ ಆ ಜನರು ಅತ್ಯುನ್ನತ ಮಟ್ಟದ ವಿಶ್ವಾಸವನ್ನು ಹೊಂದಿದವರಾದರು. ಅವರ ಮೂಲಕ ಸತ್ಯ, ನಿಷ್ಠೆ ಮತ್ತು ದೃಢನಂಬಿಕೆಯಿಂದ ಭರಿತವಾದ ಎಂತಹ ಕೆಲಸಗಳು ನಡೆದುವು ಎಂದರೆ ಅವುಗಳಿಗೆ ಸಮಾನವಾದ ಉದಾಹರಣೆ ಲೋಕದ ಯಾವ ಭಾಗದಲ್ಲಿಯೂ ಕಾಣಿಸಲಾರದು. ಇಂತಹ ಜಯ, ಇಷ್ಟು ಜಯ, ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೊರತು ಬೇರೆ ಯಾವ ಪ್ರವಾದಿಗೂ ಲಭಿಸಲಿಲ್ಲ. ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಂತಹ ಕಾಲಘಟ್ಟದಲ್ಲಿ ನಿಯೋಜಿತರಾದರೆಂದರೆ ಆ ಕಾಲಘಟ್ಟ ಅತ್ಯಂತ ಅಂಧಕಾರಭರಿತವಾಗಿತ್ತು. ಆ ಕಾಲಘಟ್ಟ ಒಬ್ಬ ವೈಭವಶಾಲಿ ಸುಧಾರಕನನ್ನು ಸಹಜವಾಗಿ ಆವಶ್ಯಪಡುತ್ತಿತ್ತು. ಅವರು ಎಂತಹ ಕಾಲದಲ್ಲಿ ಲೋಕ ಬಿಟ್ಟು ಹೋದರೆಂದರೆ ಅವರ ಮೂಲಕ ಲಕ್ಷಗಟ್ಟಲೆ ಜನರು ಬಹುದೇವಾರಾಧನೆಯನ್ನೂ ವಿಗ್ರಹಾರಾಧನೆಯನ್ನೂ ತ್ಯಜಿಸಿ ಏಕದೇವ ವಿಶ್ವಾಸವನ್ನು ಮತ್ತು ಸತ್ಯ ಸಂಧತೆಯನ್ನು ಅವಲಂಬಿಸಿದ್ದರು. ಇದು ಅವರ ಪ್ರವಾದಿತ್ವಕ್ಕೆ ಬಹಳ ದೊಡ್ಡ ಸಾಕ್ಷ್ಯಾಧಾರವಾಗಿದೆ. ವಾಸ್ತವಿಕವಾಗಿ ಈ ಪರಿಪೂರ್ಣ ಸುಧಾರಣೆ ಅವರಿಂದಲೇ ವಿಶಿಷ್ಟವಾಗಿ ನಡೆಸಲ್ಪಡುವುದಾಗಿತ್ತು. ಅವರು ಮೃಗೀಯ ಸ್ವಭಾವದ ಜನರಿಗೆ ಮಾನವೀಯ ಸ್ವಭಾವಗಳನ್ನು ಕಲಿಸಿದರು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಅವರು ಮೃಗಗಳನ್ನು ಮನುಷ್ಯರನ್ನಾಗಿ ಮಾಡಿದರು. ಅನಂತರ ಮನುಷ್ಯರನ್ನು ವಿದ್ಯಾವಂತರನ್ನಾಗಿ ಮಾಡಿದರು. ಅನಂತರ ವಿದ್ಯಾವಂತರಾದ ಮನುಷ್ಯರನ್ನು ದೇವ ಸಾಮೀಪ್ಯ ಗಳಿಸಿದ ಮನುಷ್ಯರನ್ನಾಗಿ ಮಾಡಿದರು. ಅವರೊಳಗೆ ಆಧ್ಯಾತ್ಮಿಕಯನ್ನು ಊದಿದರು. ಮತ್ತು ಸತ್ಯದೇವನೊಂದಿಗೆ ಅವರ ಸಂಬಂಧ ಸ್ಥಾಪಿಸುವಂತೆ ಮಾಡಿದರು. ಅವರು ಸುಧಾರಣೆ ಮಾಡಿದ ಜನರು ಆಡುಗಳ ಹಾಗೆ ವಧಿಸಲ್ಪಟ್ಟರು. ಅವರು ಇರುವೆಗಳ ಹಾಗೆ ಜನರ ಪಾದಗಳಡಿಯಲ್ಲಿ ತುಳಿಯಲ್ಪಟ್ಟರು. ಆದರೆ ಅವರು ತಮ್ಮ ವಿಶ್ವಾಸವನ್ನು ಕೈಬಿಡಲಿಲ್ಲ. ಅವರು ಪ್ರತಿಯೊಂದು ಕಷ್ಟ ಸಹಿಸಿ ಮುಂದೆ ಸಾಗಿದರು. ನಿಸ್ಸಂಶಯವಾಗಿ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಧ್ಯಾತ್ಮಿಕತೆಯನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿ ದ್ವಿತೀಯ ಆದಮ್ (ಆದಮ್ ಸಾನೀ) ಆಗಿದ್ದರು. ವಾಸ್ತವಿಕವಾಗಿರುವ ಆದಮ್ ಅವರೇ ಆಗಿದ್ದರು. ಅವರ ಮೂಲಕವೇ ಮನುಷ್ಯನ ಎಲ್ಲ ಅನುಗ್ರಹಗಳು ಪರಿಪೂರ್ಣತೆಗೆ ತಲಪಿದುವು. ಮನುಷ್ಯನ ಎಲ್ಲ ಒಳ್ಳೆಯ ಶಕ್ತಿ ಸಾಮೃರ್ಥ್ಯಗಳು ತಮ್ಮ ಕೆಲಸ ಮಾಡತೊಡಗಿದವು. ಮನುಷ್ಯರ ಪ್ರಕೃತಿಯ ಯಾವುದೇ ಶಾಖೆ ನಿಷ್ಕ್ರಿಯವಾಗಿ ಉಳಿಯಲಿಲ್ಲ. ಖತ್‌ಮೆ ನುಬುವ್ವತ್ ಅವರಲ್ಲಿ ಕಾಲದ ಕೊನೆಯ ಭಾಗದ ಕಾರಣದಿಂದ ಮಾತ್ರವಲ್ಲ ನುಬುವ್ವತ್‌ಗೆ ಸಂಬಂಧಿಸಿದ ಎಲ್ಲ ಪರಿಪೂರ್ಣತೆಗಳು ಅವರಲ್ಲಿ ಸಮಾವೇಶಗೊಂಡು ಪರಿಪೂರ್ಣಗೊಂಡ ಕಾರಣವೂ ಆಗಿತ್ತು. ಅವರು ಅಲ್ಲಾಹನ ಗುಣಗಳನ್ನು ಪರಿಪೂರ್ಣವಾಗಿ ಪ್ರಕಟ ಗೊಳಿಸುವವರಾಗಿದ್ದುದರಿಂದ ಅವರು ತಂದ ಶರೀಅತ್ ಜಬಾಲಿಯ್ಯ (ಉಗ್ರ) ಗುಣಗಳಿಂದಲೂ ಜಮಾಲಿಯ (ಸೌಮ್ಯ) ಗುಣಗಳಿಂದಲೂ ತುಂಬಿತ್ತು. ಅವರ ಹೆಸರು ಮುಹಮ್ಮದ್ ಮತ್ತು ಅಹ್‌ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಇದೇ ಉದ್ದೇಶದಿಂದಾಗಿತ್ತು. ಅವರ ಸರ್ವ ಸಾಮಾನ್ಯ ನುಬುವ್ವತ್‌ನಲ್ಲಿ ಯಾವುದೇ ಭಾಗದ ಕೊರತೆ ಇರಲಿಲ್ಲ. ಅವರ ನುಬುವ್ವತ್ ಆರಂಭದಿಂದಲೇ ಸರ್ವಲೋಕಗಳಿಗಾಗಿತ್ತು.

**(ಲೆಕ್ಚರ್ ಸಿಯಾಲ್ಕೋಟ್, ರೂಹಾನಿ ಖಝಾಇನ್, ಸಂಪುಟ–20, ಪುಟ–206)**

ಕನ್ನಡ ವಾರಪತ್ರಿಕೆ ಬದರ್ "ಸೀರತುನ್ನಬೀ(ಸ) ವಿಷೇಶ ಸಂಚಿಕೆ"

ವಿಷಯ ಸೂಚಿಕೆ


| | ವಿಷಯ | ಪುಟ |
|---|---|---|
| * | ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು | 1 |
| * | ವಿಷಯ ಸೂಚಿಕೆ ಮತ್ತು ಸಂಪಾದಕೀಯ | 2 |
| * | ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್(ಅತಬಿಅ)ರವರ ಖುತ್‌ಬ ಜುಮುಅ | 3 |
| * | ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹಜ್ಜತುಲ್ ವಿದಾಅ್ ಭಾಷಣದ ಬೆಳಕಿನಲ್ಲಿ ಮಾನವರ ಸಮಾನತೆ ಬಗ್ಗೆ ಪ್ರತಿಪಾದನೆ | 08 |
| * | ಹಝ್ರತ್ ಉಸ್ಮಾನ್(ರ) ಮತ್ತು ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್(ರ) ರವರ ಜೀವನಚರಿತ್ರೆ | 13 |
| * | ಹಝ್ರತ್ ಪೈಗಂಬರ್(ಸ)ರ ಮಹಿಳೆ ಸಹಾಬೀಯರ ಅಪ್ರತಿಮ ತ್ಯಾಗಗಳು. | 17 |


## ಸಯ್ಯಿದುನಾ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರ ಉತ್ತುಂಗ ಸ್ಥಾನಮಾನ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬರಹಗಳ ಬೆಳಕಿನಲ್ಲಿ

ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ, ವಾಗ್ದತ್ತ ಮಸೀಹ್ ಮತ್ತು ಮಹದಿ ಅಲೈಹಿಸ್ಸಲಾಮ್ ಅವರು ತಮ್ಮ ಸರದಾರರಾದ ಸಯ್ಯಿದುನಾ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಸ್ಥಾನಮಾನವನ್ನು ಗುರುತಿಸಿಕೊಂಡ ರೀತಿಯಲ್ಲಿ ಬೇರೆ ಯಾರು ಗುರುತಿಸಲಿಲ್ಲ. ಸಯ್ಯಿದುನಾ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಸರ್ವಶ್ರೇಷ್ಠ ಸ್ಥಾನ ಮತ್ತು ಸ್ಥಾನಮಾನದ ಜ್ಞಾನವು ನಿಮಗೆ ಅನುಗ್ರಹಿಸಲ್ಪಟ್ಟಿದ ರೀತಿಯಲ್ಲಿ ಬೇರೆ ಯಾರಿಗೂ ನೀಡಲಿಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಅವರ ಸಯ್ಯಿದ್ನಾ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರ ಮೇಲಿನ ಪ್ರೀತಿ ಮತ್ತು ವಾತ್ಸಲ್ಯವು ಬೇರೆ ಯಾರೂ ಮಾಡಲಿಲ್ಲ. ಇದು ಕೇವಲ ವಾದವಲ್ಲ ಬದಲಿಗೆ ಇದು ನೈಜ ಸಂಗತಿಯಾಗಿದೆ, ಯಾರೂ ಅದನ್ನು ನಿರಾಕರಿಸಲು ಸಾಧ್ಯವಾಗದಂತಹ ದೃಢ ಸತ್ಯ ಸಂಗತಿಯಾಗಿದೆ. ಇದು ತಪ್ಪು ಎಂದು ಸಾಬೀತುಪಡಿಸಲು ಯಾರಿಹೂ ಸಾಧ್ಯವಿಲ್ಲ. ಸಯ್ಯಿದುನಾ ಹಝ್ರತ್ ಮುಹಮ್ಮದ್ ಮುಸ್ತಫಾ(ಸ.ಅ) ಅವರ ಲೇಖನಿಯಿಂದ ಪದ್ಯ ಮತ್ತು ಗದ್ಯ ರೂಪದಲ್ಲಿ ಹೊರಹೊಮ್ಮಿದ ಪ್ರೀತಿ ಮತ್ತು ವಾತ್ಸಲ್ಯದ ಬರಹಗಳು ಬೇರೆಲ್ಲೂ ಕಾಣಸಿಗುವುದಿಲ್ಲ. ಅವುಗಳಲ್ಲಿ ಎಂತಹ ಅಭಿರುಚಿ ಇದೆ ಎಂದರೆ ನಿಮ್ಮ(ಅ) ಶತ್ರುಗಳು ಸಹ ಆ ಪದಗಳನ್ನು ಮತ್ತು ಬರಹಗಳನ್ನು ಪಠಿಸಲು ತಮ್ಮನ್ನು ಸ್ವತಃ ತಡೆಯಲು ಸಾಧ್ಯವಿಲ್ಲ. ನಮ್ಮ ದಾವೆಯನ್ನು ಯಾರಾದರೂ ತಪ್ಪಾಗಿ ಅರ್ಥೈಸಿಕೊಂಡರೆ, ನಮ್ಮ ದಾವೆಯ ಸತ್ಯಾಂಶವನ್ನು ಸಾಬೀತುಪಡಿಸಲು ನಾವು ಸಿದ್ಧರಿದ್ದೇವೆ. ಮತ್ತು ಹಝ್ರತ್ ಪೈಗಂಬರ್(ಸ)ರ ಧರ್ಮದ ರಕ್ಷಣೆಯನ್ನು ಎಂತಹ ಮಹಿಮೆ ಮತ್ತು ವೈಭವದಿಂದ ಹಝ್ರತ್ ಮಸೀಹ್ ಮೌಊದ್(ಅ)ರು ಮಾಡಿದರು ಅಂತಹ ವೈಭವದಿಂದ ಮಾಡಲು ಕಳೆದ ಹದಿನಾಲ್ಕು ನೂರು ವರ್ಷಗಳಲ್ಲಿ ಯಾರಿಂದಲು ಮಾಡಲು ಸಾಧ್ಯವಿಲ್ಲ ಮತ್ತು ಆಗುವುದೂ ಇಲ್ಲ, ಮತ್ತು ಈ ಸ್ಥಾನವನ್ನು ಬೇರೆಯವರು ಪಡೆಯಲು ಸಾಧ್ಯವಿಲ್ಲ. ಏಕೆಂದರೆ ಪವಿತ್ರ ಖುರ್‌ಆನ್ ಮತ್ತು ಹದೀಸ್ ಪ್ರಕಾರ, ಈ ಸ್ಥಾನಮಾನವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಮಾತ್ರ ಇತ್ತು. ಪವಿತ್ರ ಖುರ್‌ಆನ್‌ನ ವಚನ **ಲಿಯುಝ್‌ಹಿರಹು ಅಲದ್ದೀನಿ ಕುಲ್ಲಿಹೀ** ಎಂಬುದರ ವ್ಯಾಖ್ಯಾನದಲ್ಲಿ ವಿದ್ವಾಂಸರು ಹೀಗೆ ಹೇಳಿರುವರು: ಇಸ್ಲಾಮ್ ಧರ್ಮಕ್ಕೆ ಜಾಗತಿಕ ವಿಜಯವು ಮಹದಿಯ ಕಾಲದಲ್ಲಿ ಲಭಿಸುವುದು. ಆದ್ದರಿಂದ, ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಅವರು ಹಝ್ರತ್ ಮುಹಮ್ಮದ್ ಮುಸ್ತಫಾ(ಸ)ರು ನುಡಿದಿರುವ ಭವಿಷ್ಯವಾಣಿ: ಅವರು (ಇಮಾಮ್ ಮಹದಿ) ಆಗಮಿಸಿದಾಗ ಅವರು ಈಮಾನ್ ಅನ್ನು ಭೂಮಿಯ ಮೇಲೆ ಮರುಸ್ಥಾಪಿಸುವರು. ಇದರ ಪ್ರಕಾರ ವಾಗ್ದತ್ತ ಮಸೀಹ್ ಹಾಗೂ ಮಹದಿಯ ದಾವೆಯಾಗಿದೆ. ಹೀಗಾಗಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹಝ್ರತ್ ಪೈಗಂಬರ್(ಸ)ರ ಧರ್ಮವನ್ನು ರಕ್ಷಿಸಿದ ರೀತಿಯಲ್ಲಿ ಬೇರೇ ಯಾರಿಗೂ ಮಾಡಲು ಸಾಧ್ಯವಿಲ್ಲ, ಸ್ನೇಹಿತರು ಮತ್ತು ಶತ್ರುಗಳು ಎಲ್ಲರೂ ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹದಿನಾಲ್ಕು ನೂರು ವರ್ಷಗಳಲ್ಲಿ ಇಸ್ಲಾಂ ಧರ್ಮವನ್ನು ಬೆಂಬಲಿಸಿ ಬರೆದ ಪುಸ್ತಕಗಳು ಬೇರೆ ಯಾರೂ

لا إله إلا الله محمد رسول الله

ಬರೆದಿಲ್ಲ ಎಂದು ಒಪ್ಪಿಕೊಳ್ಳುತ್ತಾರೆ. ಮತ್ತು ನಾವು ಹೇಳಿದಂತೆ, ಯಾರೂ ಸಹ ಬರೆಯಲು ಸಾಧ್ಯವಾಗಲಿಲ್ಲ ಏಕೆಂದರೆ ಈ ಉತ್ತುಂಗ ಸ್ಥಾನವನ್ನು ನಿಮಗೆ ಸರ್ವಶಕ್ತನಾದ ಅಲ್ಲಾಹನು ಮತ್ತು ಅವನ ಸಂದೇಶವಾಹಕರಿಂದ ಮಾತ್ರ ನೀಡಲಾಗಿದೆ. ಪ್ರಸ್ತುತ ಕಾಲದ ಇಮಾಮ್ ಮಹದಿ ಹಾಗೂ ವಾಗ್ದತ್ತ ಮಸೀಹ್ ಮತ್ತು ಇಸ್ಲಾಂ ಧರ್ಮದ ಶ್ರೇಷ್ಠತೆಯನ್ನು ಹೊಂದಿರುವ ಮಹದಿಯನ್ನು ನಂಬಲು ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮರಿಗೆ ಬುದ್ಧಿವಂತಿಕೆ ಮತ್ತು ತಿಳುವಳಿಕೆಯನ್ನು ನೀಡಲಿ. ಹಝ್ರತ್ ಪೈಗಂಬರ್(ಸ) ಅವರ ಶ್ರೇಷ್ಠತೆಯ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕೆಲವು ಅಧ್ಯಾಪನೆಗಳನ್ನು ನಾವು ಕೆಳಗೆ ಪ್ರಸ್ತುತಪಡಿಸುತ್ತೇವೆ.

**ಹಝ್ರತ್ ಪೈಗಂಬರ್(ಸ) ಅವರ ಮಹಾನ್ ದೃಢತೆ ಮತ್ತು ತಾಳ್ಮೆ.**

ಹಝ್ರತ್ ಪೈಗಂಬರ್(ಸ) ರ ಸತ್ಯವನ್ನು ಸ್ಥಾಪಿಸಲು ಈ ಗ್ರಂಥದಲ್ಲಿ ಬರೆದ ಎಲ್ಲಾ ಪುರಾವೆಗಳು ಮತ್ತು ವಾದಗಳನ್ನು ಸಮಂಜಸ ಮತ್ತು ಪ್ರಾಮಾಣಿಕ ವ್ಯಕ್ತಿಯು ನಿರ್ಲಕ್ಷಿಸಿದರೂ ಅವನು ಅವರ ಜೀವನದ ಘಟನೆಗಳ ಮೇಲೆ ಮಾತ್ರ ಗಮನಹರಿಸಿದರೆ, ಪ್ರವಾದಿಯ ಹಕ್ಕುಗಳಿಗೆ ಅವನು ನಿಜನೆಂಬ ದೃಢ ನಿಶ್ಚಯವು ಅವನ ಹೃದಯವನ್ನು ತುಂಬುತ್ತದೆ. (ಪವಿತ್ರ ಪ್ರವಾದಿಯವರ ಜೀವನದಲ್ಲಿ ನಡೆದ ಘಟನೆಗಳು) ಸತ್ಯ ಮತ್ತು ಪವಿತ್ರತೆಯಿಂದ ತುಂಬಿವೆ, ಮತ್ತು ಸತ್ಯವನ್ನು ಹುಡುಕುವವರ ಹೃದಯಗಳು ಅವರನ್ನು ಎದುರಿಸಲಾಗದಂತೆ ಸೆಳೆಯುತ್ತವೆ. ಅಸಂಖ್ಯಾತ ಅಪಾಯಗಳು, ಅನೇಕ ಶತ್ರುಗಳು, ವಿರೋಧಿಗಳು ಮತ್ತು ಬೆದರಿಕೆಗಳ ನಡುವೆಯೂ ಪ್ರವಾದಿ(ಸ) ಅವರು ಪ್ರವಾದಿಯವರ ಹಕ್ಕನ್ನು ಹೇಗೆ ದೃಢವಾಗಿ ಮತ್ತು ಧೈರ್ಯದಿಂದ ಉಳಿಸಿಕೊಂಡಿದ್ದಾರೆಂದು ಯೋಚಿಸಿ. ಅವರು ಅನುಭವಿಸಿದ ಕಿರುಕುಳಗಳು ಮತ್ತು ಕಷ್ಟಗಳು ಯಶಸ್ಸಿನ ಎಲ್ಲಾ ಸಾಧ್ಯತೆಗಳಿಗೆ ಅಡ್ಡಿಯುಂಟುಮಾಡುತ್ತಿದ್ದವು ಮತ್ತು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದವು. ಅವುಗಳನ್ನು ಸಹಿಸಿಕೊಂಡು ಯಾವುದಾದರೂ ಲೌಕಿಕ ಲಾಭಗಳಿಸಬಹುದು ಎಂದು ಊಹಿಸುವುದು ಸಹ ಅಸಾಧ್ಯವಾಗಿತ್ತು. ಇದಕ್ಕೆ ತದ್ವಿರುದ್ಧವಾಗಿ, ಅವರು ಪ್ರವಾದಿ ಎಂದು ಘೋಷಿಸಿದ ಕ್ಷಣ, ಅವರು ಈಗಾಗಲೇ ಹೊಂದಿದ್ದ ಅಲ್ಪಸ್ವಲ್ಪ ಬೆಂಬಲವನ್ನು ಸಹ ಕಳೆದುಕೊಂಡರು. ಒಂದೇ ಘೋಷಣೆಯೊಂದಿಗೆ, ಅವರು ಅಸಂಖ್ಯಾತ ಶತ್ರುಗಳನ್ನು ಸೃಷ್ಟಿಸಿದರು ಮತ್ತು ಅಸಂಖ್ಯಾತ ನೋವುಗಳನ್ನು ಬರಮಾಡಿಕೊಂಡರು. ಅವರು ಬಲವಂತವಾಗಿ ಊರು ಬಿಡಬೇಕಾಯಿತು. ರಕ್ತಪಿಪಾಸು ಶತ್ರುಗಳು ಹಿಂಬಾಲಿಸಿದರು, ಅವರ ಮನೆ ಮತ್ತು ಭೂಮಿ ನಾಶವಾಯಿತು, ಮತ್ತು ಅವರಿಗೆ ವಿಷವನ್ನು ಕೊಡಲಾಯಿತು. ಒಂದು ಸಮಯದಲ್ಲಿ ಅವರ ಹಿತೈಷಿಗಳು ಅವರ ವಿರುದ್ಧ ತಿರುಗಿಬಿದ್ದರು, ಮತ್ತು ವರ್ಷಗಳ ಕಾಲ ಸ್ನೇಹಿತರಾಗಿದ್ದವರು ವೈರಿಗಳಾದರು. ಅವರು ದೀರ್ಘಕಾಲ ಈ ಕಹಿಗಳನ್ನೆಲ್ಲ ಅನುಭವಿಸಬೇಕಾಯಿತು. ಇವುಗಳನ್ನೆಲ್ಲಾ ಸಹಿಸಿ ತಮ್ಮ ವಾದದಲ್ಲಿ ಸ್ಥಿರತೆಯಿಂದ ಇದ್ದುದು ಯಾವುದೇ ಕಪಟ ಅಥವಾ ಮೋಸಗಾರನ ಕೃತ್ಯವಾಗಿರಲು ಸಾಧ್ಯವಿಲ್ಲ. ಕೊನೆಯದಾಗಿ, ಇಸ್ಲಾಂ ಧರ್ಮವು ವಿಜಯಶಾಲಿಯಾದಾಗ ತನ್ನ ಆರಾಮ ಮತ್ತು ಸಮೃದ್ಧಿಯ ಸಮಯವನ್ನು ಪಡೆದಾಗ, ಅವರು ಯಾವುದೇ ಸಂಪತ್ತನ್ನು ಸಂಗ್ರಹಿಸಲಿಲ್ಲ, ಸ್ವತಃ ಯಾವುದೇ ಕೋಟೆಗಳು ಅಥವಾ ಮಹಲುಗಳನ್ನು ನಿರ್ಮಿಸಲಿಲ್ಲ, ಐಷಾರಾಮಿ ಮತ್ತು ರಾಜಮನೆತನದ ಜೀವನಕ್ಕಾಗಿ ಯಾವುದೇ ಸಂಪತ್ತನ್ನು ಸಂಗ್ರಹಿಸಲಿಲ್ಲ ಮತ್ತು ಯಾವುದೇ ವೈಯಕ್ತಿಕ ಸ್ವಾಧೀನಗಳನ್ನು ಮಾಡಲಿಲ್ಲ. ಬದಲಾಗಿ, ಅವರು ಅನಾಥರಿಗೆ, ನಿರ್ಗತಿಕರಿಗೆ, ವಿಧವೆಯರಿಗೆ ಮತ್ತು ಸಾಲದ ಹೊರೆಯಿಂದ ಬಳಲುತ್ತಿರುವವರಿಗೆ ಎಲ್ಲವನ್ನೂ ನೀಡಿದರು, ಆದರೆ ಅವರು ಎಂದಿಗೂ ಹೊಟ್ಟೆ ತುಂಬಾ ಊಟವನ್ನು ಮಾಡಲಿಲ್ಲ. ಎಲ್ಲಾ ಜನರು ಮತ್ತು ಬುಡಕಟ್ಟು ಜನಾಂಗದವರ ವಿರುದ್ಧ ದ್ವೇಷ ಸಾಧಿಸುವ ವೆಚ್ಚದಲ್ಲಿಯೂ ಸಹ ತೌಹಿದ್ (ದೇವನ ಏಕತೆ) ಯನ್ನು ಘೋಷಿಸಲು ಅವರು ಹಿಂಜರಿಯಲಿಲ್ಲ. ವಿಗ್ರಹಗಳನ್ನು ಪೂಜಿಸುವುದನ್ನು ನಿಷೇಧಿಸಿದಾಗ ವಿಗ್ರಹಾರಾಧಕರ ಇಡೀ ಜಗತ್ತು. ಅವರ ಸ್ವಂತ ಸಂಬಂಧಿಕರು ಮತ್ತು ಮೊದಲು ಬಂದುಗಳು ಅವರನ್ನು ವಿರೋಧಿಸಿದರು. ಯಹೂದಿ ಸಮುದಾಯವು ಅವರ ಕಟು ಶತ್ರುವಾಯಿತು ಮತ್ತು ಅವರು ವಿವಿಧ ರೀತಿಯ ಸೃಷ್ಟಿ –ಪೂಜೆ, ಸಂತರ ಕುರುಡು ಅನುಸರಣೆ, ವಿವಿಧ ರೀತಿಯ ದುಷ್ಕೃತ್ಯಗಳು ಮತ್ತು ಮಸೀಹ್ (ಯೇಸುವಿನ) ವಿರುದ್ಧ ದೂಷಿಸುವುದರಿಂದ ದೂರವಿರಲು ಪ್ರಯತ್ನಿಸಿದಾಗ ಅವರನ್ನು ಹತ್ಯೆ ಮಾಡಲು ಸಂಚು ರೂಪಿಸಿದರು ತಮ್ಮ ನಂಬಿಕೆಗಳಿಗೆ ವಿರುದ್ಧವಾಗಿ, ಯೇಸು ದೇವನಲ್ಲ

*(ಪುಟ 22 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಇಸ್ಲಾಮ್ ಮತ್ತು ಹಝ್ರತ್ ಪೈಗಂಬರ್(ಸ)ರ ವಿರುದ್ಧ ಆಕ್ಷೇಪ ಮಾಡುವವರು ತಿಳಿದುಕೊಳ್ಳಬೇಕಾದ ಸಂಗತಿಯೆಂದರೆ,.... ಅಂತಹ ಯಹೂದಿಯರನ್ನು ಹಿಡಿಗೂಡಬಹುದಾಗಿತ್ತು. ಹಾಗಿದ್ದರೂ ಹಝ್ರತ್ ಪೈಗಂಬರ್(ಸ)ರು ಶಾಂತಿ ಪ್ರಿಯರೂ ಸೌಹಾರ್ದವನ್ನು ಇಚ್ಛಿಸುವವರೂ ಕಾರುಣ್ಯಭರಿತರೂ ಮಾನವರ ಬಗ್ಗೆ ವಾತ್ಸಲ್ಯದ ಅದ್ಭುತ ವೈಭವಶಾಲಿ ಸುಸ್ವಭಾವ ಪ್ರಕಟಿಸುವವರೂ ಆಗಿದ್ದುದರಿಂದ ಅವರು ಆ ಯಹೂದಿಯರನ್ನು ಶಾಂತಿಯಿಂದ ಸುರಕ್ಷಿತರಾಗಿ ಹೊರಟು ಹೋಗಲು ಅನುಮತಿಸಿದರು. ಆಯುಧಗಳನ್ನು ಹೊರತುಪಡಿಸಿ ಉಳಿದ ಎಲ್ಲ ಸಾಮಗ್ರಿಗಳನ್ನು ಒಯ್ಯಲು ಅನುಮತಿಸಿದುದು ಹಝ್ರತ್ ಪೈಗಂಬರ್(ಸ)ರ ಕಾರುಣ್ಯ ಭರಿತ ನಡೆವಳಿಕೆಯ ಪ್ರತೀಕವಾಗಿದೆ.

ಪಾಕಿಸ್ಥಾನದ ಅಹ್ಮದಿಯರಿಗೋಸ್ಕರ, ಪಾಕಿಸ್ಥಾನದಲ್ಲಿ ಸಾಮಾನ್ಯ ಶಾಂತಿ ಮತ್ತು ಸಂರಕ್ಷೆಯ ಸ್ಥಾಪನೆಗೋಸ್ಕರ ಮತ್ತು ಲೋಕದ ಎಲ್ಲ ಮುಸ್ಲಿಮರಿಗೋಸ್ಕರ ಲೋಕದ ಸಾಮಾನ್ಯ ಸ್ಥಿತಿ ಉತ್ತಮಗೊಳ್ಳಲಿಕ್ಕೋಸ್ಕರ ಪ್ರಾರ್ಥಿಸಿರಿ.

ಹಝ್ರತ್ ಸಅದ್ ಬಿನ್ ಉಬಾದ(ರ) ಮತ್ತು ಹಝ್ರತ್ ಸಅದ್ ಬಿನ್ ಮುಆಝ್(ರ) ಹೇಳಿದರು: ಮುಹಾಜಿರುಗಳ ಸ್ವಾಧೀನದಲ್ಲಿರುವ ನಮ್ಮ ಸ್ವತ್ತು ಅವರ ಬಳಿಯಲ್ಲೇ ಇರಲಿ ಹಾಗೂ ಬನೂ ನದೀರ್‌ನಿಂದ ಗಳಿಸಿದ ಸಂಪತ್ತು ಸಹ ಮುಹಾಜಿರ್ ಸಹೋದರರಿಗೆ ಹಂಚಿಕೊಡಿರಿ. ಇದನ್ನು ಆಲಿಸಿದ ತಕ್ಷಣ ಮುಹಾಜಿರ್‌ಗಳಿಂದ ಹೀಗೆ ಶಬ್ದ ಕೇಳಿಸಿತು. ಅವರು ಹೇಳಿದರು: **ರಝೀನಾ ವ ಸಲ್ಲಮ್‌ನಾ ಯಾ ರಸೂಲಲ್ಲಾಹ್(ಸ)** ಅಂದರೆ: ಹೇ ಅಲ್ಲಾಹನ ರಸೂಲರೇ ನಾವು ನಿಮ್ಮ ತೀರ್ಮಾನದ ಬಗ್ಗೆ ಸಂತೋಷಪಡುತ್ತೇವೆ. ನಾವು ಅದನ್ನು ಅಂಗೀಕರಿಸುತ್ತೇವೆ.

**ಬನೂ ನಝೀರ್ ಯುದ್ಧ ಹಾಗೂ ಅದರ ಪರಿಣಾಮವಾಗಿ ಆದ ಬನೀನಝೀರರ ಗಡಿಪಾರಿ ಘಟನೆಗಳ ವಿವರಾತ್ಮಕ ಪ್ರಸ್ತಾವನೆ**

ಹಝ್ರತ್ ಪೈಗಂಬರ್(ಸ)ರು ಅನ್‌ಸಾರ್‌ಗಳ ತ್ಯಾಗ ಮನೋಭಾವವನ್ನು ನೋಡಿ ಸಂತೋಷಗೊಂಡು ಹೇಳಿದರು: **ಅಲ್ಲಾಹುಮ್ಮರ್‌ಹಮಿಲ್ ಅನ್ಸಾರ ವ ಅಬ್ನಾ ಅಲ್ ಅನ್ಸಾರ್** ಅಂದರೆ: ಹೇ ಅಲ್ಲಾಹ್ ಅನ್‌ಸಾರ್‌ಗಳ ಮೇಲೆಯೂ ಅವರ ಮಕ್ಕಳ ಮೇಲೆಯೂ ಕರುಣೆ ದೋರು.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **28–06–2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಬನೂ ನದೀರ್ ವಿರುದ್ಧ ಯುದ್ಧದ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು. ಇದಕ್ಕೆ ಸಂಬಂಧಿಸಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆದಿದ್ದಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬನೂ ನದೀರ್ ಗೋತ್ರದ ಕೋಟೆಯ ಕಡೆಗೆ ಹೊರಟಾಗ ಮದೀನದಲ್ಲಿ ತಮ್ಮ ಅನುಪಸ್ಥಿತಿಯಲ್ಲಿ ಅಬ್ದುಲ್ಲಾ ಬಿನ್ ಮಕ್‌ತೂಮ್(ರ)ರನ್ನು ಇಮಾಮುಸ್ಸಲಾತ್ ಆಗಿ ನೇಮಿಸಿದ್ದರು. ಹಝ್ರತ್ ಪೈಗಂಬರ್(ಸ) ಸ್ವತಃ ಸಹಾಬರ ಒಂದು ಗುಂಪಿನೊಂದಿಗೆ ಮದೀನದಿಂದ ಹೊರಟು ಬನೂ ನದೀರ್ ಗೋತ್ರದ ಕೋಟೆಗೆ ಮುತ್ತಿಗೆ ಹಾಕಿದರು. ಆ ಕಾಲದ ಯುದ್ಧ ರೀತಿ ಪ್ರಕಾರ ಬನೂ ನದೀರ್ ತಮ್ಮ ಕೋಟೆಯೊಳಗೆ ಇದ್ದರು. ಆ ಸಂದರ್ಭದಲ್ಲಿ ಅಬ್ದುಲ್ಲಾ ಬಿನ್ ಉಬಯ್ ಬಿನ್ ಸುಲೂಲ್ ಮತ್ತು ಇತರ ಮದೀನದ ಕಪಟ ವಿಶ್ವಾಸಿಗಳು ಬನೂ ನದೀರ್‌ನ ಮುಖಂಡರಿಗೆ ಹೀಗೆ ತಿಳಿಸಿದ್ದರು. ನೀವು ಮುಸ್ಲಿಮರ ಎದುರಿಗೆ ಶರಣಾಗಬೇಡಿರಿ. ನಾವು ನಿಮಗೆ ಬೆಂಬಲ ನೀಡುವೆವು ಮತ್ತು ನಿಮ್ಮೊಂದಿಗೆ ಸೇರಿ ಹೋರಾಡುವೆವು. ಆದರೆ ಯುದ್ಧ ಪ್ರಾರಂಭವಾದಾಗ ಕಪಟವಿಶ್ವಾಸಿಗಳು ಹಝ್ರತ್ ಪೈಗಂಬರ್(ಸ)ರ ವಿರುದ್ಧ ಯುದ್ಧ ಕ್ಷೇತ್ರದಲ್ಲಿ ಪ್ರವೇಶಿಸಲು ಧೈರ್ಯ ಹೊಂದಲಿಲ್ಲ. ಬನೂ ಖುರೈಝ ಎಂಬ ಯಹೂದಿ ಗೋತ್ರ ಸಹ ಮುಸ್ಲಿಮರ ವಿರುದ್ಧ ಬನೂ ನದೀರ್‌ಗೆ ಸಹಾಯಕರಾಗಿ ಹೋರಾಟಕ್ಕಿಳಿಯಲು ಧೈರ್ಯಪಡಲಿಲ್ಲ. ಬನೂ ನದೀರ್ ಗೋತ್ರದವರು ಕೋಟೆಯಿಂದ ಹೊರಗೆ ಬಂದು ಹೋರಾಡಲು ಸಿದ್ಧರಾಗದೆ ಕೋಟೆಯೊಳಗೆಯೇ ಇದ್ದರು. ಅವರ ಕೋಟೆ ಆ ಕಾಲಕ್ಕೆ ಅನುಸಾರವಾಗಿ ಬಹಳ ಬಲಿಷ್ಠವಾಗಿತ್ತು. ಆದುದರಿಂದ ಅವರಿಗೆ ಧೈರ್ಯವಿತ್ತು ಮುಸ್ಲಿಮರು ತಮಗೆ ಹಾನಿಯನ್ನುಂಟುಮಾಡಲು ಶಕ್ತರಾಗಲಾರರು ಹಾಗೂ ಕೋಟೆಯೊಳಗೆ ನುಗ್ಗಲು ಸಾಧ್ಯವಾಗದೆ ಮುಸ್ಲಿಮರು ಮುತ್ತಿಗೆಯಿಂದ ಹಿಂದೆ ಸರಿಯುವರು ಎಂದು ಅವರು ಭಾವಿಸಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ಮುತ್ತಿಗೆಯನ್ನು ಮುಂದುವರಿಸಿದರು.

(ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಸಾಹಿಬ್ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–526)

ಆದಾಗ್ಯೂ, ಹಝ್ರತ್ ಪೈಗಂಬರ್(ಸ) ಅಲ್ಲಿಗೆ ಹೋದರು. ಮತ್ತು ಮುತ್ತಿಗೆಯನ್ನು ಮುಂದುವರಿಸಿದರು. ಈ ಮುತ್ತಿಗೆಯು ಆರು ದಿನಗಳ ತನಕ ಮುಂದುವರಿಯಿತು ಎಂದೂ ಇನ್ನೊಂದು ವರದಿ ಪ್ರಕಾರ ಹದಿನೈದು ದಿನಗಳ ತನಕ ಮುಂದುವರಿಯಿತು ಎಂದೂ ಮತ್ತೊಂದು ವರದಿ ಪ್ರಕಾರ 20–23 ದಿನಗಳ ವರೆಗೆ ಮುಂದುವರಿಯಿತೆಂದೂ ಹೇಳಲಾಗಿದೆ. ಕೆಲವು ದಿನಗಳ ನಂತರ ಹಝ್ರತ್ ಪೈಗಂಬರ್(ಸ) ಕೋಟೆಯ ಹೊರಗಿದ್ದ ಖರ್ಜೂರದ ಮರಗಳಲ್ಲಿ ಕೆಲವು ಮರಗಳನ್ನು ಕಡಿದು ಹಾಕಲು ಆಜ್ಞಾಪಿಸಿದರು. ಅದು ಲೀನ ಎಂಬ ಭಕ್ಷ್ಯ ಯೋಗ್ಯವಲ್ಲದ ಖರ್ಜೂರದ ಮರಗಳಾಗಿದ್ದುವು. ಯಹೂದಿಯರು ಆ ಮರಗಳನ್ನು ತಮಗೆ ಮರೆಯಾಗುವಂತೆ ಮಾಡಿ ಕೋಟೆಯ ಗೋಡೆಗಳ ಮೇಲಿನಿಂದ ಬಾಣಗಳನ್ನೂ ಕಲ್ಲುಗಳನ್ನೂ ವರ್ಷಿಸುತ್ತಿದ್ದರು. ಆದುದರಿಂದ ಹಝ್ರತ್ ಪೈಗಂಬರ್(ಸ)ರು ಆ ಮರಗಳನ್ನು ಕಡಿಯಲು ಅಬೂಲೈಲಾ ಮಾಝುನೀ ಮತ್ತು ಅಬ್ದುಲ್ಲಾ ಬಿನ್ ಸಲಾಮ್ ಅವರಿಗೆ ಆಜ್ಞೆ ನೀಡಿದರು. ಇದನ್ನು ಯುದ್ಧ ಅಥವಾ ರಕ್ಷಣಾತ್ಮಕ ಅಗತ್ಯಕ್ಕಾಗಿ ಮಾಡಲಾಗಿದೆ ಉದ್ಯಾನವನ್ನು ತೆರವುಗೊಳಿಸಲು ಮಾಡಲಿಲ್ಲ. ಇಸ್ಲಾಮ್ ಧರ್ಮದಲ್ಲಿ ಮರಗಳನ್ನು ಕಡಿಯುವುದನ್ನು ನಿಷೇಧಿಸಲಾಗಿದೆ. ಅಲ್ಲಿ ಅಬು ಲೈಲಾ ಮಾಝುನೀ ಆ ಅಜ್ವಾ ಖರ್ಜೂರದ ಮರಗಳಿಗೆ ಬೆಂಕಿ ಹಚ್ಚುತ್ತಿದ್ದರೆಂದು ಮತ್ತು ಅಬ್ದುಲ್ಲಾ ಬಿನ್ ಸಲಾಮ್ ಅಜ್ವಾವನ್ನು ಹೊರತುಪಡಿಸಿ ಇತರ ಖರ್ಜೂರದ ಮರಗಳನ್ನು ಸುಡುತ್ತಿದ್ದರೆಂದು ಬರೆಯಲಾಗಿದೆ, ಆದರೆ ವರದಿಗಳಲ್ಲಿ ಕೀಳು ವಿಧದ ಖರ್ಜೂರದ ಮರಗಳನ್ನು ಸುಡಲಾಗಿದೆ ಎಂದು ಹೇಳಲಾಗಿದೆ. ನಾನು ಅದನ್ನು ನಂತರ ವಿವರವಾಗಿ ವಿವರಿಸುತ್ತೇನೆ. ಆದರೆ, ಈ ವರದಿಯಲ್ಲಿ ಬರೆದದ್ದು ಏನೆಂದರೆ, ಹಝ್ರತ್ ಅಬು ಲೈಲಾ ಅವರು ಈ ಮರಗಳು ಅವರ ಅಮೂಲ್ಯವಾದ ಬಂಡವಾಳವಾಗಿದೆ, ಅವುಗಳನ್ನು ಸುಡುವುದರಿಂದ ಅವರಿಗೆ ಹೆಚ್ಚು ನೋವುಂಟು ಮಾಡುತ್ತದೆ ಎಂದು ಹೇಳಿದರು. ಯಹೂದಿಗಳಿಗೆ ಬಹಳ ವಿಷಾಧಿಸುತ್ತಾರೆ ಏಕೆಂದರೆ ಇದು ಅವರ ಬಂಡವಾಳವಾಗಿದೆ. ಹಝ್ರತ್ ಅಬ್ದುಲ್ಲಾ ಬಿನ್ ಸಲಾಮ್

ಹೇಳಿದರು: ಸರ್ವಶಕ್ತನಾದ ಅಲ್ಲಾಹನು ಅವರ ಆಸ್ತಿಯನ್ನು ಪ್ರವಾದಿಯವರಿಗೆ ಯುದ್ಧ ಸಂಪತ್ತನ್ನಾಗಿ ಮಾಡುತ್ತಾನೆ. ಅಬ್ದುಲ್ಲಾ ಬಿನ್ ಸಲಾಮ್ ಅವರ ಈ ಹೇಳಿಕೆಯಿಂದ ತಿಳಿದುಬರುವುದರಿಂದ ಅವರು ಉಪಯುಕ್ತ ಮರಗಳಾದ ಅಜ್ವಾ ಖರ್ಜೂರ ಮರಗಳನ್ನು ಸುಡಲಿಲ್ಲ, ಬದಲಿಗೆ ಇತರ ಮರಗಳನ್ನು ಸುಟ್ಟುಹಾಕಿದರು. ಅವರು ಅಜ್ವವೇ ಶ್ರೇಷ್ಠ ಸಂಪತ್ತು, ಮತ್ತು ಇದು ಪ್ರವಾದಿವರ್ಯರಿಗೆ ಉಪಯುಕ್ತವಾಗಲಿದೆ ಎಂದರು. ಯಹೂದಿಯರು ಈ ಮರಗಳು ಬೆಂಕಿಯಲ್ಲಿ ಉರಿಯುತ್ತಿರುವುದನ್ನು ನೋಡಿದಾಗ, ಅವರ ಮಹಿಳೆಯರು ತಮ್ಮ ಕುತ್ತಿಗೆಯನ್ನು ಉಸಿರುಕಟ್ಟಿಕೊಳ್ಳಲು ಪ್ರಾರಂಭಿಸಿದರು, ತಮ್ಮ ಮುಖಗಳನ್ನು ಹೊಡೆದು ಅಳಲು ಪ್ರಾರಂಭಿಸಿದರು. ಆಗ ಯಹೂದಿಗಳು ತಕ್ಷಣವೇ ಸಂದೇಶವನ್ನು ಕಳುಹಿಸಿದರು. ಓ ಮುಹಮ್ಮದ್(ಸ)! ನೀವು ಬಹಳ ಗೌರವಾನ್ವಿತರು ಮತ್ತು ಘನತೆಯುಳ್ಳವರಾಗಿದ್ದೀರಿ. ನೀವು ಪಿತೂರಿಯನ್ನು ನಿಷೇಧಿಸುತ್ತೀರಿ ಮತ್ತು ಯಾವುದೇ ರೀತಿಯ ಪಿತೂರಿಯನ್ನು ಇಷ್ಟಪಡುವುದಿಲ್ಲ. ಈಗ ನೀವೇ ಸ್ವತಃ ಇದನ್ನು ಮಾಡುತ್ತಿದ್ದೀರಿ, ಆದರೆ ಮೊದಲೇ ಹೇಳಿದ ಹಾಗೆ ಈ ಮರಗಳು ಅವರಿಗಾಗಿ ಹೊಂಚುದಾಳಿಯಾಗಿ ಕಾರ್ಯನಿರ್ವಹಿಸುತ್ತಿದ್ದವು, ಆದುದರಿಂದ ಹಝ್ರತ್ ಪೈಗಂಬರ್(ಸ)ರು ಆ ಮರಗಳನ್ನು ಕಡಿಯಲು ಆಜ್ಞೆ ನೀಡಿದರು. ಆ ಮೂಲಕ ಯಹೂದಿಯರು ಪ್ರಭಾವಿತರಾಗಿ ಕೋಟೆಯ ಬಾಗಿಲು ತೆರೆಯಲಿ ಎಂದು ಉದ್ದೇಶಿಸಲಾಗಿತ್ತು. ಕೆಲವು ಮರಗಳನ್ನು ಕಡಿದು ಹಾಕುವುದರಿಂದ ಅನೇಕ ಜನರ ಜೀವ ಹಾನಿಯನ್ನು ತಡೆಯುವುದು ಮತ್ತು ದೇಶದಲ್ಲಿ ಅಸ್ತವ್ಯಸ್ತತೆ ಮತ್ತು ಕಲಹಗಳನ್ನು ನಿವಾರಿಸುವುದು ಹಝ್ರತ್ ಪೈಗಂಬರ್(ಸ)ರ ಉದ್ದೇಶವಾಗಿತ್ತು. ಅಲ್ಲಾಹನ ವಿಶಿಷ್ಟ ಸಂದೇಶವಾಣಿಯ ಪ್ರಕಾರ ಹಝ್ರತ್ ಪೈಗಂಬರ್(ಸ)ರು ಆ ಮರಗಳನ್ನು ಕಡಿಯಲು ಆಜ್ಞೆನೀಡಿದ್ದಾರೆಂದು ತಿಳಿಯುತ್ತದೆ. ಆದ್ದರಿಂದ ಸರ್ವಶಕ್ತನಾದ ಅಲ್ಲಾಹನು ಯಹೂದಿಯರ ಈ ಆರೋಪಕ್ಕೆ ಹೀಗೆ ಉತ್ತರಿಸಿದನು **ಮಾ ಖತಅ್‌ತುಮ್ ಮಿಂಲೀನತಿನ್ ತರಕ್ತುಮೂಹಾ ಖಾಯಿಮತನ್ ಅಲಾ ಉಸೂಲಿಹಾ ಫಬಿಇಝ್‌ನಿಲ್ಲಾಹಿ ವಲಿಯುಖ್‌ಝಿಯಲ್ ಫಾಸಿಖೀನ್** (ಅಲ್‌ಹಶರ್:06) ನೀವು ಯಾವ ಖರ್ಜೂರ ಮರಗಳನ್ನು ಕಡಿದು ಹಾಕಿದ್ದೀರೋ ಅಥವಾ ಅವುಗಳ ಬುಡಗಳಲ್ಲೇ ಅವುಗಳನ್ನು ನಿಲ್ಲಲು ಬಿಟ್ಟಿರುವಿರೋ ಅದು ಅಲ್ಲಾಹನ ಆಜ್ಞಾನುಸಾರವಾಗಿದೆ ಹಾಗೂ ಹದ್ದುಮೀರಿ ವರ್ತಿಸುವವರನ್ನು ಅಪಮಾನಿಸಲಿಕ್ಕೋಸ್ಕರವಾಗಿದೆ.

ಕೆಲವು ಹದೀಸ್‌ಗಳ ವರದಿಗಳಲ್ಲಿ ಹೀಗಿದೆ: ಹಝ್ರತ್ ಪೈಗಂಬರ್(ಸ) ಅವರು ಮುತ್ತಿಗೆಯ ಸಮಯದಲ್ಲಿಯೂ ಯಹೂದಿಯರನ್ನು ಮತ್ತೊಮ್ಮೆ ಕ್ಷಮಿಸಲು ಹೊಸ ಒಪ್ಪಂದವನ್ನು ಮಾಡಿಕೊಳ್ಳಲು ಆಜ್ಞಾಪಿಸಿದರು. ಆದ್ದರಿಂದ ಹಝ್ರತ್ ಪೈಗಂಬಂಬರ್(ಸ) ಯಹೂದೀಯರಿಗೆ ಹೇಳಿದರು: **ಇನ್ನಕುಮ್ ವಲ್ಲಾಹಿ ಲಾ ತಅ್‌ಮನೂನ ಇಂದೀ ಇಲ್ಲಾ ಬಿಅಹದಿನ್ ತುಆಹಿದೂನೀ ಅಲೈಹಿ-** ನೀವು ಹೊಸದಾಗಿ ನನ್ನೊಂದಿಗೆ ದೃಢವಾದ ಒಪ್ಪಂದವನ್ನು ಮಾಡುವುದನ್ನು ಹೊರತುಪಡಿಸಿ ನನಗೆ ನಿಮ್ಮ ಮೇಲೆ ವಿಶ್ವಾಸವಿಲ್ಲ. ಆದರೆ ಅವರು ಒಪ್ಪಂದ ಮಾಡಿಕೊಳ್ಳಲು ನಿರಾಕರಿಸಿದರು. ಯಹೂದಿಗಳು ಸಂಪತ್ತಿನ ಮೇಲೆ ಅತ್ಯಂತ ದುರಾಸೆಯುಳ್ಳವರಾಗಿರುತ್ತಾರೆ. ಅವರ ಅಮೂಲ್ಯ ಮರಗಳನ್ನು ಸುಟ್ಟುಹೋದಾಗ, ಅವರು ತಕ್ಷಣವೇ ಮಂಡಿಯೂರಿದರು ಮತ್ತು ಅವರು ಪ್ರದೇಶವನ್ನು ತೊರೆಯಲು ಒಪ್ಪಿಕೊಂಡರು. (ದಾಎರಾ ಮುಆರಿಫ್, ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ-7, ಪುಟ 183-185, ಬಿಜ್ಮ್ ಇಕ್ಬಾಲ್, ಲಾಹೋರ್, 2022)

ನಾನು ಒಂದು ಜೀವನಚರಿತ್ರೆಯ ಪುಸ್ತಕದ ಉಲ್ಲೇಖವನ್ನು ನೀಡಿದ್ದೇನೆ. ಈಗ ನಾನು ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರ ಜೀವನ ಚರಿತ್ರೆಯ ಪುಸ್ತಕದ ಬಗ್ಗೆ ಮಾತನಾಡುತ್ತಿದ್ದೇನೆ. ಅವರು(ರ) ಬರೆಯುತ್ತಾರೆ: "ಮುಸ್ಲಿಮರು ಹಲವಾರು ದಿನಗಳವರೆಗೆ ಮುತ್ತಿಗೆ ಹಾಕಿದ್ದರು. ಆದರೆ ಯಾವುದೇ ಫಲಿತಾಂಶವು ಹೊರಬರಲಿಲ್ಲ. ಮುತ್ತಿಗೆಯಲ್ಲಿ ಕೆಲವು ದಿನಗಳು ಕಳೆದರೂ ಯಾವುದೇ ಫಲಿತಾಂಶಬರಲಿಲ್ಲ ಮತ್ತು ಬನುನಝೀರ್ ಹೋರಾಟವನ್ನು ಮುಂದುವರೆಸಿದಾಗ, ಹಝ್ರತ್ ಪೈಗಂಬರ್(ಸ) ಅವರು ಕೆಲವು ದಿನಗಳ ನಂತರ ಕೋಟೆಯ ಹೊರಗಿದ್ದ ಖರ್ಜೂರದ ಮರಗಳಲ್ಲಿ ಕೆಲವು ಮರಗಳನ್ನು ಕಡಿದು ಹಾಕಲು ಆಜ್ಞಾಪಿಸಿದರು. ಅದು ಲೀನ ಎಂಬ ಭಕ್ಷ್ಯ ಯೋಗ್ಯವಲ್ಲದ ಖರ್ಜೂರದ ಮರಗಳಾಗಿದ್ದುವು. ಅದರ ಹಣ್ಣನ್ನು ಸಾಮಾನ್ಯವಾಗಿ ಮಾನವ ಬಳಕೆಗೆ ಬಳಸಲಾಗುವುದಿಲ್ಲ, ಮತ್ತು ಈ ಆದೇಶದ ಉದ್ದೇಶವೆಂದರೆ ಮರಗಳನ್ನು ಕಡಿಯುವುದನ್ನು ನೋಡಿ ಬನುನಝೀರ್‌ನವರು ತಮ್ಮ ಕೋಟೆಗಳ ಬಾಗಿಲುಗಳನ್ನು ತೆರೆಯುವುದಾಗಿತ್ತು ಹೀಗೆ ಕೆಲವು ಮರಗಳ ನಷ್ಟದಿಂದಾಗಿ ಅನೇಕ ಮಾನವ ಜೀವಗಳನ್ನು ಕಳೆದುಕೊಳ್ಳುವುದು ಮತ್ತು ದೇಶದ ಪಿತೂರಿಯನ್ನು ತಡೆಯಬಹುದಾಗಿತ್ತು. ಹಾಗಾಗಿ ಈ ಕ್ರಮದಿಂದ ಪ್ರಯೋಜನವಾಯಿತು. ಆರು ಮರಗಳನ್ನು ಕಡಿದಾಗ ಬನೂ ನದ್ವೀರ್ ಪ್ರಾಯಶಃ ಯೋಚಿಸಿದರು ಮುಸ್ಲಿಮರು ಎಲ್ಲ ಮರಗಳನ್ನೂ ಕಡಿಯುವರು ಎಂದು. ಆ ಮರಗಳ ಪೈಕಿ ಭಕ್ಷ್ಯ ಯೋಗ್ಯ ಖರ್ಜೂರದ ಮರಗಳೂ ಇದ್ದುವು. ಆಗ ಯಹೂದಿಯರು ಬೊಬ್ಬೆ ಹಾಕಲು ಪ್ರಾರಂಭಿಸಿದರು. ಆದಾಗ್ಯೂ, ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಿದಂತೆ, ಕೆಲವು ಮರಗಳನ್ನು ಮಾತ್ರ ಕಡಿಯಲು ಅನುಮತಿಸಲಾಗಿತ್ತು ಮತ್ತು ಅದು ಕೂಡ ಲೀನ ಎಂಬ ಭಕ್ಷ್ಯ ಯೋಗ್ಯವಲ್ಲದ ಖರ್ಜೂರದ ಮರಗಳಾಗಿದ್ದವು ಮತ್ತು ಉಳಿದ ಮರಗಳನ್ನು ಸುರಕ್ಷಿತವಾಗಿಡಲು ಆದೇಶಿಸಲಾಯಿತು ಸಾಮಾನ್ಯ ಪರಿಸ್ಥಿತಿಯಲ್ಲಿ ಶತ್ರುಗಳ ಫಲ ನೀಡುವ ಮರಗಳನ್ನು ಕಡಿಯಲು ಮುಸ್ಲಿಮರಿಗೆ ಅನುಮತಿ ಇರಲಿಲ್ಲ. ಆದಾಗ್ಯೊ, ಬನೂ ನದ್ವೀರ್ ವಿಚಲಿತರಾಗಿ ಹದಿನೈದು ದಿನಗಳ ಮುತ್ತಿಗೆಯ ನಂತರ ಹೀಗೆ ಹೇಳಿದರು: ನಮ್ಮನ್ನು ಕೋಟೆಯಿಂದ ನಮ್ಮ ಸಾಮಗ್ರಿಗಳೊಂದಿಗೆ ಶಾಂತಿಯಿಂದ ಹೋಗಲು ಅನುಮತಿಸುವುದಾದರೆ ನಾವು ಕೋಟೆಯ ಬಾಗಿಲನ್ನು ತೆರೆಯುವೆವು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರು ಈ ಹಿಂದೆ ಮಂಡಿಸಿದ ಅದೇ ಷರತ್ತು ಮತ್ತು ಅವರ ಉದ್ದೇಶ ಶಾಂತಿ ಸ್ಥಾಪನೆಯಾಗಿರುವುದರಿಂದ, ಅವರು (ಸ) ಮುಸ್ಲಿಮರ ನೋವು ಮತ್ತು ಈ ಅಭಿಯಾನದಲ್ಲಿ ಅವರು ಭರಿಸಬೇಕಾದ ವೆಚ್ಚವನ್ನು ನಿರ್ಲಕ್ಷಿಸಿದರು. ಅವರು ಷರತ್ತನ್ನು ಒಪ್ಪಿಕೊಂಡರು ಮತ್ತು ಮುಹಮ್ಮದ್ ಬಿನ್ ಮುಸ್ಲಿಮಾ(ರ) ಅವರ ಮೇಲ್ವಿಚಾರಣೆಯಲ್ಲಿ ಬನುನಝೀರ್ ಅವರನ್ನು ಮದೀನಾದಿಂದ ಕಳುಹಿಸಲು ನೇಮಿಸಿದರು. (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-526-527)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಉತ್ತಮ ಗುಣಮಟ್ಟದ ಖರ್ಜೂರವನ್ನು ಕತ್ತರಿಸಲಿಲ್ಲ ಎಂದು ಬರೆದಿದ್ದಾರೆ. ಅಂತೆಯೇ ಬುಖಾರಿಯ ಒಂದು ಶರಹ್‌ದಲ್ಲಿಯೂ ಬರೆಯಲಾಗಿದೆ, ಅದರ ವರದಿ ಹೀಗಿದೆ: ಅದರ ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ, ನಾವು ವರದಿಗಳ ವಿವರಗಳಿಗೆ ಹೋದರೆ, ಮೊದಲನೆಯದಾಗಿ, ಸುಡಲಾದ ಖರ್ಜೂರಗಳು ಉತ್ತಮ ಗುಣಮಟ್ಟದ ಖರ್ಜೂರಗಳಾಗಿರಲಿಲ್ಲ ಬದಲಿಗೆ ಜನರು ಆಹಾರವಾಗಿ ಬಳಸದ ಸಾಮಾನ್ಯ ಮತ್ತು ಹಾಳಾದ ಖರ್ಜೂರಗಳಾಗಿದ್ದವು ಎಂದು ಬರೆಯಲಾಗಿದೆ. (ನಿಮತುಲ್ ಬಾರಿ ಫೀ ಶರಹ್ ಸಹೀಹ್ ಬುಖಾರಿ, ಸಂಪುಟ-7, ಪುಟ-343, ಹದೀಸ್-4031, ರೂಮಿ ಪಬ್ಲಿಕೇಷನ್ಸ್ ಲಾಹೋರ್) ಮತ್ತು ಸೀರತ್ ಖಾತಮನ್ನಬೀಯೀನ್(ಸ) ನಲ್ಲಿ ಉಲ್ಲೇಖಿಸಿದಂತೆ ಕೇವಲ ಆರು ಮರಗಳನ್ನು ಸುಡಲಾಗಿತ್ತು.

ಯಹೂದಿಯರ ಬಲಹೀನತೆ ಮತ್ತು ಅವರು ಸ್ವತಃ ದೇಶಬಿಟ್ಟು ಹೋಗಲು ಅನುಮತಿ ಯಾಚಿಸಿದುದರ ಬಗ್ಗೆ ಹೀಗೆ ಬರೆಯಲಾಗಿದೆ: ಮುಸ್ಲಿಮರು ಅವರ ಮರಗಳನ್ನು ಸುಟ್ಟು ಅವರು ಹೆಚ್ಚು ಗಾಬರಿಗೊಳ್ಳುವಂತೆ ಮಾಡಿದ್ದರು. ಅಲ್ಲಾಹನು ಅವರ ಹೃದಯಗಳಲ್ಲಿ ಹೆದರಿಕೆಯನ್ನು ತುಂಬಿಸಿದನು. ಅವರು ಶರಣಾಗತಿ ಪ್ರಕಟಿಸಲು ನಿರ್ಬಂಧಿತರಾದರು. ದೇಶಬಿಟ್ಟು ಹೋಗಲು ಅನುಮತಿಸಬೇಕೆಂಬ ಯಹೂದಿಯರ ಬೇಡಿಕೆ ಬಗ್ಗೆ ಹಝ್ರತ್ ಪೈಗಂಬರ್(ಸ)ರು ಹೀಗೆ ಆಜ್ಞಾಪಿಸಿದರು: ನೀವು ಮದೀನದಿಂದ ಹೊರಗೆ ಹೋಗುವುದಾದರೆ ನಿಮ್ಮ ಜೀವ ಸುರಕ್ಷಿತವಾಗಿರುವುದು. ನಿಮ್ಮ ಒಂಟೆಗಳನ್ನು ಮತ್ತು ಇತರ ಸಾಮಗ್ರಿಗಳನ್ನು ತೆಗೆದು ಹೋಗಬಹುದು. ಆದರೆ ಆಯುಧಗಳನ್ನು ಸಾಗಿಸಬಾರದು.

ಇಸ್ಲಾಮ್ ಮತ್ತು ಹಝ್ರತ್ ಪೈಗಂಬರ್(ಸ)ರ ವಿರುದ್ಧ ಆಕ್ಷೇಪ ಮಾಡುವವರು ತಿಳಿದುಕೊಳ್ಳಬೇಕಾದ ಸಂಗತಿಯೆಂದರೆ, ಯಹೂದಿಯರು ಒಪ್ಪಂದವನ್ನು ಭಂಗ ಮಾಡುವವರೂ ಸರಕಾರದ ಮುಖ್ಯಾಧಿಕಾರಿಯಾಗಿದ್ದ ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಅನೇಕ ಸಾರಿ ಗೂಢಾಲೋಚನೆಗಳನ್ನೂ ಪ್ರಯತ್ನಗಳನ್ನೂ ಮಾಡಿದವರೂ ಆಯುಧಧಾರಿಗಳಾಗಿ ವಿದ್ರೋಹವನ್ನು ಮಾಡಲು ಸನ್ನದ್ಧರಾದವರೂ ಶಾಂತಿಯ ಪ್ರಸ್ತಾಪವನ್ನು ದುರಹಂಕಾರದಿಂದ ತಿರಸ್ಕರಿಸಿದವರೂ ಆಗಿದ್ದರು. ಅಂತಹ ಯಹೂದಿಯರನ್ನು ಹಿಡಿಗೂಡಬಹುದಾಗಿತ್ತು. ಹಾಗಿದ್ದರೂ ಹಝ್ರತ್ ಪೈಗಂಬರ್(ಸ)ರು ಶಾಂತಿ ಪ್ರಿಯರೂ ಸೌಹಾರ್ದವನ್ನು ಇಚ್ಚಿಸುವವರೂ ಕಾರುಣ್ಯಭರಿತರೂ ಮಾನವರ ಬಗ್ಗೆ ವಾತ್ಸಲ್ಯದ ಅದ್ಭುತ ವೈಭವಶಾಲಿ ಸುಸ್ವಭಾವ ಪ್ರಕಟಿಸುವವರೂ ಆಗಿದ್ದುದರಿಂದ ಅವರು ಆ ಯಹೂದಿಯರನ್ನು ಶಾಂತಿಯಿಂದ ಸುರಕ್ಷಿತರಾಗಿ ಹೊರಟು ಹೋಗಲು ಅನುಮತಿಸಿದರು. ಆಯುಧಗಳನ್ನು ಹೊರತುಪಡಿಸಿ ಉಳಿದ ಎಲ್ಲ ಸಾಮಗ್ರಿಗಳನ್ನು ಒಯ್ಯಲು ಅನುಮತಿಸಿದುದು ಹಝ್ರತ್ ಪೈಗಂಬರ್(ಸ)ರ ಕಾರುಣ್ಯ ಭರಿತ ನಡೆವಳಿಕೆಯ ಪ್ರತೀಕವಾಗಿದೆ.

ಆದುದರಿಂದ ಮುಂದೆ ವಿವರಣೆಯೂ ಬರುತ್ತದೆ ಯಹೂದಿಗಳು ಈ ಉಪಕಾರದ ಲಾಭವನ್ನು ಪಡೆದುಕೊಂಡು ತಮ್ಮ ಮನೆಗಳ ಬಾಗಿಲುಗಳನ್ನು ಸಹ ತೆಗೆದುಕೊಂಡು ಆರು ನೂರು ಒಂಟೆಗಳ ಮೇಲೆ ಸರಕುಗಳನ್ನು ತುಂಬಿ ತೆಗೆದುಕೊಂಡು ಹೋದರು ಮತ್ತು ಅವರು ಸಾಗಿಸಲು ಸಾಧ್ಯವಾಗದ ಸರಕುಗಳನ್ನು ಸಂಪೂರ್ಣ ಪ್ರಯತ್ನದಿಂದ ಹಾಳು ಮಾಡುವ ರೀತಿಯಲ್ಲಿ ತಮ್ಮ ಸ್ವಭಾವವನ್ನು ವ್ಯಕ್ತಪಡಿಸಿದರು. ಅವರು ತಮ್ಮ ಬಳಿಯಿದ್ದ ಮನೆಗಳ ಮೇಲ್ಛಾವಣಿ ಮತ್ತು ಗೋಡೆಗಳನ್ನು ಮುಸ್ಲಿಮರು ಬಳಸದಂತೆ ಕೆಡವಿದರು. ಮನೆಗಳನ್ನು ಸಹ ಕೆಡವಿದರು. ಬನೂನಝೀರ್‌ನ ಗಡಿಪಾರಿನ ಷರತ್ತುಗಳನ್ನು ನಿಗದಿಪಡಿಸಲಾಯಿತು. ಈ ಷರತ್ತುಗಳಲ್ಲಿ ಬಗ್ಗೆ ಈ ವಿಷಯಗಳನ್ನು ಉಲ್ಲೇಖಿಸಲಾಗುತ್ತದೆ.

1) ಬನೂ ನಧೀರ್ ಗೋತ್ರದ ಯಹೂದಿಯರು ಮದೀನದಿಂದ ಹೊರಗೆ ತಮಗೆ ಇಷ್ಟವಿರುವಲ್ಲಿಗೆ ಹೋಗಬಹುದು. 2) ಆಯುಧಗಳನ್ನು ತೆಗೆದುಕೊಂಡು ಹೋಗಬಾರದು. 3) ತಮಗೆ ಎಷ್ಟು ಸಾಧ್ಯವೋ ಅಷ್ಟೆಲ್ಲ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಬಹುದು. 4) ಯಹೂದಿಯರು ತೆಗೆದುಕೊಂಡು ಹೋಗಲು ಸಾಧ್ಯವಾಗದೆ ಬಿಟ್ಟುಹೋದ ಸ್ಥಿರ–ಚರ ಸ್ವತ್ತುಗಳು ಮುಸ್ಲಿಮರ ಅಧೀನಕ್ಕೆ ಬರುವುವು.

ಗಡಿಪಾರುವಿನ ಕಾರ್ಯದ ವೇಲ್ವಿಚಾರಣೆ ಮತ್ತು ಯಹೂದೀಯರು ಮನ್ನಿಸುವ ಮತ್ತು ಮನ್ನಿಸುವ ವಿವರಣೆಯೂ ಇದೆ. ಬನುನಝೀರ್ ಅವರನ್ನು ಮದೀನಾದಿಂದ ಗಡಿಪಾರು ಮಾಡುವ ಜವಾಬ್ದಾರಿಯನ್ನು ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮಾ(ರ) ಅವರಿಗೆ ವಹಿಸಲಾಗಿತ್ತು. ಆ ಸಮಯದಲ್ಲಿ, ಯಹೂದಿಗಳು ಇಲ್ಲಿ ಅನೇಕ ಜನರು ನಮಗೆ ಸಾಲಗಾರರಾಗಿದ್ದಾರೆ ಎಂದು ಮತ್ತೊಂದು ನೆಪ ಹೇಳಿದರು. ನಿಗದಿತ ಅವಧಿಯ ನಂತರ ಅವರು ಆ ಸಾಲವನ್ನು ಪಾವತಿಸಬೇಕು, ಅದರ ಬಗ್ಗೆ ಏನಾಗುತ್ತದೆ? ಅವರ ಉದ್ದೇಶ ಮದೀನಾದಲ್ಲಿ ಅವರಿಗೆ ಇನ್ನಷ್ಟು ಕಾಲವಕಾಶ ನೀಡಬೇಕು ಎಂದಾಗಿತ್ತು. ಹಝ್ರತ್ ಪೈಗಂಬರ್(ಸ) ಹೇಳಿದರು, ನೀವು ಬಡ್ಡಿಯನ್ನು ತೆಗೆದುಹಾಕುವ ಮೂಲಕ ಅತೀ ಶೀಘ್ರ ಸಾಲದ ಪ್ರಮಾಣವನ್ನು ಕಡಿಮೆ ಮಾಡಿ. ಸರಿ, ನೀವು ನಿಮ್ಮ ಸಾಲದ ಮೊತ್ತವು ಪಡೆಯುತ್ತೀರಿ ಅದಕ್ಕೆ ಷರತ್ತೇನೆಂದರೆ ನೀವು ಬಡ್ಡಿಯನ್ನು ತೆಗೆದುಹಾಕಬೇಕು ಆದರೆ ಬೇಗನೆ ಇಲ್ಲಿಂದ ಹೊರಹೋಗಿ. ಅಬು ರಾಫೆ ಸಲ್ಲಾಮ್ ಬಿನ್ ಅಬಿ ಹುಖೈಖ್ ಅವರು ಹಝ್ರತ್ ಉಸೈದ್ ಬಿನ್ ಹುದೈರ್ ಅವರಿಂದ ನೂರ ಇಪ್ಪತ್ತು ದಿನಾರ್‌ಗಳನ್ನು ಪಡೆಯಬೇಕಾಗಿತ್ತು. ಆದ್ದರಿಂದ ಅವರು ನಲವತ್ತು ದಿನಾರ್‌ಗಳ ಬಡ್ಡಿಯನ್ನು ಕಡಿತಗೊಳಿಸಿ ಎಂಭತ್ತು ದಿನಾರ್‌ಗಳ ಅಸಲು ಮೊತ್ತವನ್ನು ಪಡೆದರು. (ಸೀರತ್ ಇನ್ಸೈಕ್ಲೋಪೀಡಿಯಾ, ಸಂಪುಟ–7, ಪುಟ–54, ದಾರುಸ್ಸಲಾಮ್ ರಿಯಾದ್ 1435ಹಿಜರಿ) ಹೀಗೆ, ಇಂತಹವರು ಅನೇಕ ಜನರಿದ್ದರು.

ಹಝ್ರತ್ ಪೈಗಂಬರ್(ಸ) ಅವರು ಗಡಿಪಾರಿನ ಷರತ್ತುಗಳನ್ನು ವಿಧಿಸಿದಾಗ, ಅಬು ರಾಫೆ ಸಲ್ಲಾಮ್ ಬಿನ್ ಅಬಿ ಹುಖೈಖ್ ಅವರು ಹುಯ್ಯ್ ಬಿನ್ ಅಖ್ತಾಬ್ ಅವರಿಗೆ ಹೇಳಿದರು: 'ನಿನಗೆ ಹಾನಿಯುಂಟಾಗಲಿ' ನಿನಗೆ ಭವಿಷ್ಯದಲ್ಲಿ ಇನ್ನಷಗಟು ನಷ್ಟ ಅನುಭವಿಸುವುದಕ್ಕಿಂತ ಮೊದಲು ಇಸ್ಲಾಮ್ ಧರ್ಮವನ್ನು ಸ್ವೀಕರಿಸು. ಹುಯ್ ಹೇಳಿದನು ಇದಕ್ಕಿಂತ ಕೆಟ್ಟದ್ದು ಏನು? ಅಬೂರಾಫೆ ಹೇಳಿದರು, ನಮ್ಮ ಮಕ್ಕಳನ್ನು ಬಂಧಿಸಲಾಘುವುದು, ನಮ್ಮ ವೀರರನ್ನು ಕೊಲ್ಲಲಾಗುವುದು ಮತ್ತು ನಮ್ಮ ಆಸ್ತಿಯನ್ನು ಮುಸ್ಲಿಮರು ವಶಪಡಿಸಿಕೊಳ್ಳುತ್ತಾರೆ. ಇಂದು ಆಸ್ತಿಯನ್ನು ತ್ಯಜಿಸುವ ಮೂಲಕ ಜೀವ ಉಳಿಸುವುದು ಸುಲಭವಾಗಿದೆ. ನಾವು ಯಾವುದೇ ಪ್ರಲೋಭನೆಯನ್ನು ಸೃಷ್ಟಿಸಿದರೆ, ಅದು ಮರಣ ಮತ್ತು ಬಂಧನದ ಶಿಕ್ಷೆಗೆ ಕಾರಣವಾಗುತ್ತದೆ. ಹುಯ್‌ನ ಈ ನಿರ್ಧಾರದ ಬಗ್ಗೆ ಒಂದೆರಡು ದಿನ ಯೋಚಿಸಿದನು. ಯಾಮಿನ್ ಬಿನ್ ಉಮೈರ್ ಮತ್ತು ಅಬು ಸಅದ್ ಬಿನ್ ವಹ್ಬ್ ಅವರು ಅವನ ಈ ಗೊಂದಲವನ್ನು ನೋಡಿದಾಗ, ಅವರಲ್ಲಿ ಒಬ್ಬರು ಇನ್ನೊಬ್ಬರಿಗೆ ಹೇಳಿದರು, "ಮುಹಮ್ಮದ್(ಸ) ಅವರು ಅಲ್ಲಾಹನ ಸಂದೇಶವಾಹಕರು ಎಂದು ನಿಮಗೆ ನಿಸ್ಸಂದೇಹವಾಗಿ ತಿಳಿದಿದೆ. ಮತ್ತೆ ನೀವು ಯಾವುದಕ್ಕಾಗಿ ಕಾಯುತ್ತಿರುವೆ? ನಾವು ಮುಸ್ಲಿಮರಾಗೋಣ. ನಮಗೆ ತಿಳಿದಿದೆ. ನಮ್ಮ ಪುಸ್ತಕಗಳು ಇದನ್ನು ಸಾಬೀತುಪಡಿಸುತ್ತವೆ, ಆದ್ದರಿಂದ ಈಗ ಮುಸ್ಲಿಮರಾಗುವುದು ಉತ್ತಮ. ಇದರಿಂದ ನಮ್ಮ ಆಸ್ತಿ ಮತ್ತು ಜೀವ ಸುರಕ್ಷಿತವಾಗಿರುತ್ತವೆ. ಆದ್ದರಿಂದ ಅವರು ರಾತ್ರಿಯ ಕತ್ತಲೆಯಲ್ಲಿ ತಮ್ಮ ಕೋಟೆಗಳಿಂದ ಹೊರಬಂದು ಇಸ್ಲಾಮಿನ ಸೈನ್ಯವನ್ನು ಸೇರಿದರು. ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು ಮತ್ತು ಅವರ ಜೀವನ ಮತ್ತು ಸಂಪತ್ತನ್ನು ಉಳಿಸಿಕೊಂಡರು. ಹೀಗೆ ಇವರಿಬ್ಬರು ಮುಸ್ಲಿಮರಾದರು.

(ಸೀರತ್ ಇನ್ಸೈಕ್ಲೊಪೀಡಿಯಾ, ಸಂಪುಟ–7, ಪುಟ–55, ದಾರುಸ್ಸಲಾಮ್ ರಿಯಾದ್, 1435 ಹಿಜರಿ)

ಯಾಮಿನ್ ಬಿನ್ ಉಮೈರ್ ನಂತರ ಅತ್ಯಂತ ಪ್ರಾಮಾಣಿಕ ಸಹಾಬಿ ಎಂದು ಸಾಬೀತಾಯಿತು, ಬದಲಿಗೆ ಆ ದಿನಗಳಲ್ಲಿ, ಹಝ್ರತ್ ಪೈಗಂಬರ್(ಸ) ಅವರ ಪ್ರೀತಿಯು ಅವರ ಹೃದಯದಲ್ಲಿ ಎಷ್ಟು ಆಳವಾಗಿ ಮಾರ್ಪಟ್ಟಿತ್ತು ಎಂದರೆ ಬನುನಝೀರ್‌ನ ಯಹೂದಿ ಅಮ್ರೊ ಬಿನ್ ಜಹಾಶ್ ಹಝ್ರತ್ ಪೈಗಂಬರ್(ಸ) ಅವರನ್ನು ವಧಿಸಲು ಪ್ರಯತ್ನಿಸಿದ್ದನು. ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಅದೇ ಯಾಮಿನ್ ಬಿನ್ ಉಮೈರ್ ಅವರ ಸೋದರಸಂಬಂಧಿಯಾಗಿದ್ದನು, ಆದರೂ ಈ ಪ್ರಾಮಾಣಿಕ ನವ ಮುಸ್ಲಿಮರು ವ್ಯಕ್ತಿಯೊಬ್ಬನ ಮೂಲಕ ಅಮ್ರೊ ಬಿನ್ ಜಹಾಶ್‌ನನ್ನು ವಧಿಸಿದರು. ಹಝ್ರತ್ ಪೈಗಂಬರ್(ಸ) ಅವರ ಪ್ರಾಮಾಣಿಕತೆ ಮತ್ತು ಪ್ರೀತಿಯ ಬಗ್ಗೆ ತಿಳಿದಾಗ, ಅವರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

(ಸಬ್ಲುಲ್ ಹುದಾ ವಲ್–ರಶಾದ್, ಭಾಗ–4, ಪುಟ–323, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, 1993) (ಅಲ್–ಬದಾಯಾ ವನ್ನಹಾಯ, ಭಾಗ–5, ಪುಟ–538, ದಾರುಲ್ ಹಜರ್ 1997)

ಇದು ಇತಿಹಾಸ ಪುಸ್ತಕದ ಉಲ್ಲೇಖವಾಗಿದೆ. ಯಹೂದಿಗಳು ಗಡಿಪಾರು ಆದ ಸಮಯದಲ್ಲಿ ಯಹೂದಿಗಳು ತಮ್ಮ ಒಂಟೆಗಳ ಮೇಲೆ ಮಹಿಳೆಯರನ್ನು ಮತ್ತು ಮಕ್ಕಳನ್ನು ಹೊರತುಪಡಿಸಿ ಒಂಟೆಗಳು ಹೊತ್ತೊಯ್ಯುವ ಸರಕುಗಳನ್ನು ಹೊತ್ತೋಯಿದರು ಎಂದು ಬರೆಯಲಾಗಿದೆ. ಆಯುಧಗಳು ಮಾತ್ರ ಉಳಿದಿದ್ದವು. ಅವರ ಬಳಿ ಒಟ್ಟು ಆರುನೂರು ಒಂಟೆಗಳಿದ್ದವು. ಪ್ರತಿಯೊಬ್ಬ ವ್ಯಕ್ತಿಯು ತನ್ನ ಸ್ವಂತ ಮನೆಯನ್ನು ಕೆಡವಿದನು ಮತ್ತು ಅದರ ಬಾಗಿಲುಗಳು ಮತ್ತು ಕಿಟಕಿಗಳಂತಹ ಮರಗಳನ್ನು ತೆಗೆದುಕೊಂಡು ಒಂಟೆಗಳ ಮೇಲೆ ಹೇರಿದನು. ಈ ಜನರು ತಮ್ಮ ಮನೆಗಳ ಕಂಬಗಳು ಮತ್ತು ಛಾವಣಿಗಳನ್ನು ಸಹ ಒಡೆಯುವ ವರದಿ ಇದೆ. ಅವರು ತಮ್ಮ ಒಲೆಗಳನ್ನು, ಬಾಗಿಲುಗಳಾಗಿದ್ದ ಹಲಗೆಗಳನ್ನು ಹೊರತೆಗೆದರು. ಅವರು ಗಡಿಪಾರು ಆದನಂತರ ಮುಸ್ಲಿಮರು ಈ ಮನೆಗಳಲ್ಲಿ ನೆಲೆಸಬಾರದು ಎಂದು ಕೇವಲ ಅಸೂಯೆ ಮತ್ತು ಕೋಪದಿಂದ ತಮ್ಮ ಮನೆಗಳ ಗೋಡೆಗಳನ್ನು ಕೆಡವಿದರು. (ಸಿರತ್ ಹಲಾಬಿಯಾಹ್, ಸಂಪುಟ–2, ಪುಟ–361, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, ಲೆಬನಾನ್, 2008)

ಯಹೂದಿಗಳು ತಮ್ಮ ಮಕ್ಕಳನ್ನು ಮತ್ತು ಮಹಿಳೆಯರನ್ನು ಸವಾರಿ ಒಂಟೆಗಳ ಮೇಲೆ ಕೂರಿಸಿ ಉಳಿದ ಒಂಟೆಗಳಿಗೆ ಸರಕುಗಳನ್ನು ತುಂಬಲು ಪ್ರಾರಂಭಿಸಿದಾಗ, ಅವರ ಎದೆಯು ಬೆಂಕಿಯಿಂದ ಮಾಡಲ್ಪಟ್ಟಿತ್ತು ಅವರಿಗೆ ಗಡಿಪಾರಾಗುವ ಬಗ್ಗೆ ಯಾವುದೇ ಆತಂಕ ಅಥವಾ ವಿಷಾದ ಇರಲಿಲ್ಲ ಎಂಬುದು ಅವರ ನಡವಳಿಕೆಯಿಂದ ಸ್ಪಷ್ಟವಾಗಿತ್ತು. ಅವರ ಎದೆಯಲ್ಲಿ ಬೆಂಕಿ ಹೊತ್ತಿಕೊಂಡಿದ್ದರೂ ಅವರಿಗೆ ಯಾವುದೇ ಚಿಂತೆಯಿಲ್ಲ ಎಂಬಂತೆ ನಟಿಸುತ್ತಿದ್ದರು. ಆದರೂ ನೆಮ್ಮದಿಯಿಂದ ಇಲ್ಲಿಂದ ಹೊರಡುತ್ತಿದ್ದೇವೆ ಎಂಬ ಭಾವನೆಯನ್ನು ಜನರಿಗೆ ನೀಡುತ್ತಿದ್ದರು. ಈ ಜನರು ಮೊದಲು ಬನೂ ಹಾರಿಸ್ ಬಿನ್ ಖಝ್‌ರಜ್ ಪ್ರದೇಶದ ಮೂಲಕ ಹಾದು ಹೋದರು ಮತ್ತು ಜಿಸ್ರ್ ಪ್ರದೇಶವನ್ನು ದಾಟಿದರು. ನಂತರ ಅವರು ಮದೀನಾದ ಮಾರುಕಟ್ಟೆಗಳ ಮೂಲಕ ಹಾದುಹೋದರು. ಜಿಸ್ರ್ ಮದೀನಾದಲ್ಲಿ ಮಾರುಕಟ್ಟೆಯಾಗಿತ್ತು. ಆದಾಗ್ಯೂ, ಅವರು ತಮ್ಮ ಮಹಿಳೆಯರನ್ನು ಅಲಂಕರಿಸಿ ಅವರನ್ನು ಹೊದಜ್‌ಗಳ ಮೇಲೆ ಕೂರಿಸಿದ್ದರು. ಅವರು ಒಂಟೆಗಳ ಮೇಲೆ ಸವಾರಿ ಮಾಡಿಸಿದ್ದರು ಮತ್ತು ಅವರ ದಾಸಿಯರೂ ಸಂಗೀತಕ್ಕೆ ನೃತ್ಯ ಮಾಡುತ್ತಿದ್ದರು. ಜನರು ಅಸೂಯೆಪಡುವಂತೆ ಈ ಜನರು ತಮ್ಮ ಸಂಪತ್ತನ್ನು ಜನರಿಗೆ ತೋರಿಸುತ್ತಿದ್ದರು. ಅಬು ರಾಫೆ ಅವನ ಬಳಿ ಚಿನ್ನ ಮತ್ತು ಬೆಳ್ಳಿ ತುಂಬಿದ ಚರ್ಮದ ಚೀಲವಿತ್ತು. ಅವನು ಅದನ್ನು ಮೇಲಕ್ಕೆ ಹಾರಿಸುತ್ತಾ 'ನಾ ಇದೇ ಪರಿಸ್ಥಿತಿಯಲ್ಲಿ ಹೋರಾಡಲು ಮತ್ತು ವಿಜಯಶಾಲಿಯಾಗಲು ಈ ಹಣವನ್ನು ಸಂಗ್ರಹಮಾಡಿಟಿದ್ದೇವೆ ಎಂದು ಹೇಳುತ್ತಿದ್ದನು. ಅವರ ನಿರ್ಗಮನದ ಸ್ಥಿತಿಯೆಂದರೆ ಹಾಡುಗಳು ಶೈಲಿಯಿಂದ ಹೊರಗುಳಿಯುತ್ತಿದ್ದವು. ಶೆಹ್‌ನಾಯಿಗಳು ಊದಲಾಗುತ್ತಿದ್ದವು. ಪ್ರಚೋದನಕಾರಿ ಸಾಹಿತ್ಯವು ನಾಲಿಗೆಯ ಮೇಲೆ ಇತ್ತು ಮತ್ತು ನೃತ್ಯವನ್ನು ಮಾಡಲಾಗುತ್ತಿತ್ತು, ಆದರೆ ಹಝ್ರತ್ ಪೈಗಂಬರ್(ಸ)ರು ಅವರ ಸೀಮಿತ ಆಲೋಚನೆಗಳನ್ನು ಬಹಳ ನಮ್ರತೆಯಿಂದ ನಿರ್ಲಕ್ಷಿಸಿದರು. ಇದನ್ನು ಕಂಡರೂ ಅವರತ್ತ ಗಮನ ಹರಿಸಲಿಲ್ಲ. ಹೀಗೆ ಅವರು ಬೇರೆ ಯಾವುದಾದರು ಸಮುದಾಯಕ್ಕೆ ಸಂಬಂಧಿಸಿದ್ದರೆ, ಅವರು ತಮ್ಮನ್ನು ಮುಚ್ಚಿಕೊಳ್ಳಲು ಬಟ್ಟೆಯನ್ನು ಸಹ ನೀಡದಿರಬಹುದು. (ದಾಏರಾ ಮುಆರಿಫ್ ಸೀರತ್ ಮುಹಮ್ಮದ್ ರಸುಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ಸಂಪುಟ–7, ಪುಟ–187, ಬಝ್ಮ್ ಇಕ್ಬಾಲ್, ಲಾಹೋರ್, 2022) (ಪ್ರಬಂಧಗಳು ಮದೀನಾ ಮುನವ್ವರಾ, ಪುಟ–142, ಮುಹಮ್ಮದ್ ಫೈಝ್ ಅಹ್ಮದ್ ಉವೈಸಿ, ಇಮಾಮ್ ಅಹ್ಮದ್ ರಝಾ ಲೈಬ್ರರಿ)

ಅವರು ಮಾಡಿದ ಸ್ಥಿತಿ, ಅವರು ಅಳವಡಿಸಿಕೊಂಡ ವರ್ತನೆ, ಅದನ್ನೆಲ್ಲ ಪರಿಗಣಿಸಿದರೆ ಯಾವುದನ್ನೂ ತೆಗೆದು ಹೋಗದಂತೆ ಶಿಕ್ಷಿಸಬೇಕಾಗಿತ್ತು, ಆದರೆ ಹಝ್ರತ್ ಪೈಗಂಬರ್(ಸ) ಕ್ಷಮಿಸುವ ಮತ್ತು ಕರುಣಾಮಯಿಯಾಗಿದ್ದರು. ಈ ವಿಷಯಗಳ ಬಗ್ಗೆ ಕಾಳಜಿ ವಹಿಸಲಿಲ್ಲ.

ಬನೂನಝೀರ್ ಅವರ ಹೊಸದಾಗಿ ತಮ್ಮ ವಸತಿಸ್ಥಳ ಎಲ್ಲಿ ಮಾಡಿದರು? ಇದರ ಬಗ್ಗೆ ಹೀಗೆ ಬರೆಯಲಾಗಿದೆ: ಬನೂನಝೀರ್‌ಗೆ ಗಡಿಪಾರು ಮಾಡಲು ಆದೇಶಿಸಿದಾಗ, ಅವರು ಇಡೀ ಅರೇಬಿಯನ್ ಪರ್ಯಾಯ ದ್ವೀಪವನ್ನು ತೊರೆಯುವ ಅಗತ್ಯವಿರಲಿಲ್ಲ ಬದಲಿಗೆ, ಅವರು ಮದೀನಾವನ್ನು ಮಾತ್ರ ತೊರೆಯುವುದು ಅಗತ್ಯವಾಗಿತ್ತು. ಅವರನ್ನು ಮದೀನಾದಿಂದ ಮಾತ್ರ ಹೊರಹಾಕಲಾಯಿತು, ಅವರು ಬಯಸಿದಲ್ಲೆಲ್ಲಾ ನೆಲೆಸಬಹುದಾಗಿತ್ತು. ಆದ್ದರಿಂದ, ಅವರಲ್ಲಿ ಕೆಲವರು ಸೀರಿಯಾದ ಪ್ರದೇಶವಾದ ಅಝ್ರಿಯಾತ್‌ಗೆ ಹೋದರು ಮತ್ತು ಹೆಚ್ಚಿನವರು ಖೈಬರ್‌ಗೆ ಹೋದರು. ಖೈಬರ್ ಮದೀನಾದಿಂದ ತೊಂಬತ್ತಾರು ಮೈಲುಗಳಷ್ಟು ದೂರದಲ್ಲಿದೆ ಮತ್ತು ಅರೇಬಿಯನ್ ಪೆನಿನ್ಸುಲಾದಲ್ಲಿ ನಿರಾಶ್ರಿತರ ಯಹೂದಿಗಳ ಒಂದು ದೊಡ್ಡ ಕೇಂದ್ರವಾಗಿತ್ತು, ಅದು ಹತ್ತು ಸಾವಿರ ಸಶಸ್ತ್ರ ಯೋಧರನ್ನು ಹೊಂದಿತ್ತು. ಇದಲ್ಲದೆ, ಅಲ್ಲಿ ಯಹೂದೀಯರ ಅನೇಕ ಕೋಟೆಗಳಿದ್ದವು ಮತ್ತು ಈ ಪ್ರದೇಶವು ಕೃಷಿ ಸಂಪತ್ತಿನಿಂದ ಸಮೃದ್ಧವಾಗಿತ್ತು. ಅರೇಬಿಯನ್ ಪೆನಿನ್ಸುಲಾದ ಎಲ್ಲಾ ಯಹೂದಿಗಳು ಬನುನಝೀರ್ ಅವರ ಶ್ರೇಷ್ಠತೆ ಮತ್ತು ನಾಯಕತ್ವವನ್ನು ಮನವರಿಕೆ ಮಾಡಿದರು ಏಕೆಂದರೆ ಅವರು ಹಝ್ರತ್ ಹಾರೂನ್ ಅಲೈಹಿಸ್ಸಲಾಮ್‌ರ ವಂಶಸ್ಥರು ಎಂದು ಹೇಳಿಕೊಂಡಿದ್ದರು. ಅದಲ್ಲದೆ ಅವರು ಶ್ರೀಮಂತರಾಗಿದ್ದರೊಂದಿಗೆ ಬನುನಝೀರ್‌ನ ಈ ಜನರು ಬಹಳ ದೃಢ ಮನಸ್ಥಿತಿಯನ್ನು ಹೊಂದಿದ್ದರು. ಆದ್ದರಿಂದ, ಬನುನಝೀರ್‌ನ ಯಹೂದಿಗಳು ಖೈಬರ್‌ಗೆ ಹೋದಾಗ, ಅಲ್ಲಿ ಯಹೂದಿಗಳ ಶಕ್ತಿ ಹೆಚ್ಚಾಯಿತು. ಅವರಲ್ಲಿ ಬನೂ ನಝೀರ್‌ನ ಹಿರಿಯರಾದ ಹುಯ್ ಬಿನ್ ಅಖ್ತಬ್, ಸಲ್ಲಾಮ್ ಬಿನ್ ಅಬೀ ಹುಖೈಖ್ ಮತ್ತು ಕಿನಾನ ಬಿನ್ ರಬೀ ಮುಂತಾದವರು ಇದ್ದರು. ಖೈಬರ್‌ನ ಯಹೂದಿಗಳು ಯುದ್ಧ ಸಾಮರ್ಥ್ಯ ಮತ್ತು ಕೌಶಲ್ಯಗಳಲ್ಲಿ ವಿಶಿಷ್ಟ ಮತ್ತು ಶ್ರೇಷ್ಠರಾಗಿದ್ದರು. ಯುದ್ಧದ ವಿಷಯದಲ್ಲಿ, ಖೈಬರ್‌ನ ಜನರು ಬಹಳ ನುರಿತರಾಗಿದ್ದರು, ಆದರೆ ಬನುನಝೀರ್‌ನ ಯಹೂದಿಗಳು ಯುದ್ಧಕ್ಕಿಂತ ರಾಜಕೀಯ ಒಳನೋಟದಲ್ಲಿ ಹೆಚ್ಚು ಮುಂದುವರಿದಿದ್ದರು. ರಾಜಕೀಯವಾಗಿ ಬನುನಝೀರ್ ಜನರು ಬಹಳ ಬುದ್ಧಿವಂತರಾಗಿದ್ದರು. ಅವರು ಖೈಬರ್‌ಗೆ ಕಾಲಿಟ್ಟ ತಕ್ಷಣ, ಅವರು ಅಂದರೆ ಬನುನಝೀರ್‌ನ ಜನರು ಸುಲಭವಾಗಿ ನಾಯಕತ್ವದ ಸ್ಥಾನದಲ್ಲಿ ತಮ್ಮನ್ನು ತಾವು ಸ್ಥಾಪಿಸಿಕೊಂಡರು ಮತ್ತು ಪರಿಣಾಮವಾಗಿ, ಖೈಬರ್ ಮುಸ್ಲಿಮರಿಗೆ ಪ್ರಮುಖ ಯುದ್ಧರಂಗವಾಯಿತು.

(ಸೀರತ್ ಇನ್ಸೈಕ್ಲೋಪೀಡಿಯಾ, ಸಂಪುಟ-7, ಪುಟ-57-58, ದಾರುಸ್ಸಲಾಮ್ ರಿಯಾದ್ 1435 ಹಿಜರಿ)

ಬನುನಝೀರ್‌ನ ಯಹೂದಿಗಳೊಂದಿಗೆ ಅನ್ಸಾರ್‌ಗಳ ಪುತ್ರರು ನಿರ್ಗಮಿಸಿದ ಬಗ್ಗೆ ಹೀಗೆ ಉಲ್ಲೇಖವಿದೆ: ಬನುನಝೀರ್‌ನ ಕೆಲವು ಜನರು ಮದೀನವನ್ನು ತೊರೆದು ಸೀರಿಯಾದ ಅಝ್ರಿಯಾತ್ ಪ್ರದೇಶಕ್ಕೆ ಹೋದರು. ಈ ಯಹೂದಿಗಳಲ್ಲಿ, ಅನ್ಸಾರಿ ಮುಸ್ಲಿಮರ ಪುತ್ರರೂ ಸಹ ಇದ್ದರು, ಕಾರಣವೇನೆಂದರೆ, ಅನ್ಸಾರಿ ಮಹಿಳೆಗೆ ಜೀವಂತವಾಗಿ ಮಕ್ಕಳಿಲ್ಲದಿದ್ದರೆ, ಇಸ್ಲಾಂ ಧರ್ಮವನ್ನು ಸ್ವೀಕರಿಸುವ ಮೊದಲು ಅವರಲ್ಲಿ ಸಂಪ್ರದಾಯವಿತ್ತು, ಅವರಲ್ಲಿ ಆ ಮಹಿಳೆ ತನ್ನ ವ್ರತ ಜೀವಂತವಾಗಿ ಇದ್ದರೆ ಆಕೆ ಅವನನ್ನು ಯಹೂದಿಯನ್ನಾಗಿ ಮಾಡುತ್ತಾಳೆ ಎಂದು ಹರಕೆ ಹೊತ್ತುತ್ತಿದ್ದಳು. ಆದ್ದರಿಂದ, ಅವರಲ್ಲಿ ಅನೇಕ ಮಕ್ಕಳು ಅನ್ಸಾರರ ಮಕ್ಕಳಾಗಿದ್ದರು ಆದರೆ ಅವರನ್ನು ಯಹೂದಿಗಳಾಗಿ ಪರಿವರ್ತಿಸಲಾಗಿತ್ತು. ಬನುನಝೀರ್‌ನ ಜನರು ವಲಸೆ ಹೋಗಲು ಪ್ರಾರಂಭಿಸಿದಾಗ, ಈ ಹುಡುಗರ ತಂದೆ ನಾವು ನಮ್ಮ ಮಕ್ಕಳನ್ನು ಅವರೊಂದಿಗೆ ಹೋಗಲು ಬಿಡುವುದಿಲ್ಲ ಎಂದು ಹೇಳಿದರು. ಅದಕ್ಕೆ ಸರ್ವಶಕ್ತನಾದ ಅಲ್ಲಾಹನು ಈ ಜನರಿಗೆ ಈ ದೈವವಾಣಿ ಅವತರಿಸಿದನು. ಸೀರತ್ ಹಲಬೀಯಾದಲ್ಲಿ ಹೀಗೆ ಬರೆಯಲಾಗಿದೆ: ಸರ್ವಶಕ್ತನಾದ ಅಲ್ಲಾಹನು **ಲಾ ಇಕ್ರಾಹ ಫಿದ್ದೀನ್** (ಅಲ್‌ಬಖರಃ:257) ಅಂದರೆ ಧರ್ಮದಲ್ಲಿ ಯಾವುದೇ ಬಲವಂತವಿಲ್ಲ ಎಂದು ಹೇಳಿದ್ದಾನೆ. (ಸೀರತ್ ಹಲಾಬಿಯಾ, ಸಂಪುಟ-2, ಪುಟ-362, ದಾರುಲ್-ಕುತುಬ್ ಇಲ್‌ಮಿಯಾ, ಬೈರುತ್, ಲೆಬನಾನ್, 2008)

ಹಝ್ರತ್ ಬಶೀರ್ ಅಹ್ಮದ್ ಸಾಹಿಬ್(ರ) ಯಹೂದಿಯರು ಮದೀನ ಬಿಟ್ಟು ಹೊರಟು ಹೋದ ಘಟನೆಯ ಬಗ್ಗೆ ಹೀಗೆ ಬರೆದಿದ್ದಾರೆ: ಬನೂ ನಧೀರ್ ತಮ್ಮ ಮನೆಗಳನ್ನು ಕೆಡವಿ ಹಾಕಿ ಅದರ ಬಾಗಿಲು, ಕಿಟಕಿ ಮೊದಲಾದವುಗಳನ್ನೂ ತೆಗೆದುಕೊಂಡು ಹೋದರು. ಅವರು ಮದೀನದಿಂದ ಹೊರಡುವಾಗ ಹಾಡುತ್ತಾ ಡೋಲು ಬಡಿಯುತ್ತಾ ಮದುವೆ ಮೆರವಣಿಗೆಯ ಹಾಗೆ ಸಂಭ್ರಮದಿಂದ ಹೊರಟಿದ್ದರು. ಆದರೆ ಅವರ ಆಯುಧಗಳು ಮತ್ತು ಸ್ಥಿರ ಸೊತ್ತುಗಳಾದ ತೋಟಗಳು ಮೊದಲಾದುವು ಮುಸ್ಲಿಮರ ಅಧೀನಕ್ಕೆ ಬಂದುವು. ಆ ಸಂಪತ್ತು ಯಾವುದೇ ಯುದ್ಧ ಮಾಡದೆ ಗಳಿಸಿದುದು ಆಗಿದ್ದುದರಿಂದ ಇಸ್ಲಾಮೀ ಶರೀಅತ್ ಪ್ರಕಾರ ಅದನ್ನು ಹಂಚುವ ಅಧಿಕಾರ ಪೂರ್ಣವಾಗಿ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿತ್ತು. ಹಝ್ರತ್ ಪೈಗಂಬರ್(ಸ)ರು ಆ ಸ್ವತ್ತಿನ ಬಹಳ ಹೆಚ್ಚಿನ ಭಾಗ ಬಡ ಮುಹಾಜಿರ್‌ಗಳಿಗೆ ಹಂಚಿದರು. ಅದುವರೆಗೆ ಅವರ ಜೀವನಾಧಾರ ಅನ್‌ಸಾರ್‌ಗಳ ಸ್ವತ್ತನ್ನು ಅವಲಂಬಿಸಿ ಇದ್ದುದರಿಂದ ಪರೋಕ್ಷವಾಗಿ ಅನ್‌ಸಾರ್‌ಗಳಿಗೂ ಆ ಯಹೂದಿಯರಿಂದ ಗಳಿಸಿದ ಸ್ವತ್ತಿನ ಲಾಭ ಲಭ್ಯವಾಯಿತು.

ಬನೂ ನಧೀರ್ ಗೋತ್ರದ ಯಹೂದಿಯರು ಮುಹಮ್ಮದ್ ಬಿನ್ ಮುಸ್ಲಿಮ(ರ) ಎಂಬ ಸಹಾಬಿಯ ಮೇಲ್ವಿಚಾರಣೆಗೆ ಪಾತ್ರರಾಗಿ ಮದೀನದಿಂದ ಹೊರಗೆ ಹೊರಟಾಗ ಹಿಂದೆ ಅನ್‌ಸಾರ್‌ಗಳ ಮಕ್ಕಳಾಗಿದ್ದ ಕೆಲವರು ಹರಕೆ ಪ್ರಕಾರ ಯಹೂದಿಯರಾಗಿ ಪರಿವರ್ತಿತರಾಗಿದ್ದುದರಿಂದ ಆ ನವ ಯಹೂದಿಯರನ್ನು ತಡೆಯಲು ಕೆಲವು ಅನ್‌ಸಾರ್‌ಗಳು ಇಚ್ಛಿಸಿದರು. ಆದರೆ ಅನ್‌ಸಾರ್‌ಗಳ ಈ ಅಪೇಕ್ಷೆ **ಲಾ ಇಕ್ರಾಹ ಫಿದ್ದೀನ್** (ಧರ್ಮದಲ್ಲಿ ಯಾವುದೇ ಬಲವಂತವಿಲ್ಲ) ಎಂಬ ಪವಿತ್ರ ಖುರ್‌ಆನಿನ ಆಜ್ಞೆಗೆ ವಿರುದ್ಧವಾಗಿತ್ತು. ಹಝ್ರತ್ ಪೈಗಂಬರ್(ಸ)ರು ಮುಸ್ಲಿಮರಿಗೆ ವಿರುದ್ಧವಾಗಿ ಮತ್ತು ಯಹೂದಿಯರ ಪರವಾಗಿ ತೀರ್ಪು ನೀಡಿ ಹೇಳಿದರು ಯಹೂದಿಯಾಗಿರುವವನು ಅವರ ಜೊತೆ ಹೋಗಲು ಇಚ್ಛಿಸುವುದಾದರೆ ನಾವು ತಡೆಯುವುದಿಲ್ಲ. ಆದರೆ ಬನೂ ನಧೀರ್ ಗೋತ್ರದಿಂದ ಇಬ್ಬರು ತಮ್ಮ ಸ್ವಂತ ಇಷ್ಟಪ್ರಕಾರ ಮುಸ್ಲಿಮರಾಗಿ ಮದೀನದಲ್ಲಿ ನಿಂತರು.

ಒಂದು ವರದಿಯಲ್ಲಿ ಹೀಗೆ ಹೇಳಲಾಗಿದೆ: ಹಝ್ರತ್ ಪೈಗಂಬರ್(ಸ)ರು ಬನೂ ನಧೀರ್ ಬಗ್ಗೆ ಹೀಗೆ ತೀರ್ಪು ನೀಡಿದ್ದರು, ಅವರು ಸಿರಿಯಾ ದೇಶದ ಕಡೆಗೆ ಹೋಗಬೇಕೆಂದು. ಆದರೆ ಅವರ ನಾಯಕರಾಗಿದ್ದ ಸಲಾಮ್ ಬಿನ್ ಅಬಿಲ್ ಹಖೀಖ್, ಕಿನಾನ ಬಿನ್ ರಬೀಅ್, ಹುಬಯ್ಯಿ ಬಿನ್ ಅಖ್‌ತಬ್ ಮೊದಲಾದವರು ಹಾಗೂ ಇತರ ಕೆಲವರು ಹಿಜಾಝಿನ ಉತ್ತರ ಭಾಗದಲ್ಲಿರುವ ಯಹೂದಿಯರ ಖೈಬರ್ ಎಂಬ ಪ್ರಸಿದ್ಧ ಪಟ್ಟಣಕ್ಕೆ ಹೋಗಿ ವಾಸಿಸಲು ತೊಡಗಿದರು. ಖೈಬರಿನವರು ಅವರನ್ನು ಸ್ವಾಗತಿಸಿದರು. ಈ ಜನರು ಕೊನೆಗೆ ಮುಸ್ಲಿಮರ ವಿರುದ್ಧ ಪಿತೂರಿ ಮತ್ತು ರೊಚ್ಚಿಗೆಬ್ಬಿಸುವ ಯುದ್ಧಕ್ಕೆ ಕಾರಣವಾದರು.

(ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಸಾಹಿಬ್ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ-527-528)

ಬನುನಝೀರ್‌ನಿಂದ ಪಡೆದ ಸಂಪತ್ತನ್ನು ಯುದ್ಧ ಸಂಪತ್ತು ಎಂದು ಕರೆಯಲಾಗುತ್ತದೆ. ಅದನ್ನು ಹೇಗೆ ವಿತರಿಸಲಾಯಿತು? ಅದರ ಬಗ್ಗೆ ಹೀಗೆ ಬರೆಯಲಾಗಿದೆ: ಬನುನಝೀರ್ ಗೋತ್ರದ ವಲಸೆಯ ನಂತರ, ಅವರ ಶಸ್ತ್ರಾಸ್ತ್ರಗಳು, ತೋಟಗಳು, ಜಮೀನುಗಳು ಮತ್ತು ಮನೆಗಳನ್ನು ಹಝ್ರತ್ ಪೈಗಂಬರ್(ಸ) ಅವರು ತಮ್ಮ ಅಧೀನದಲ್ಲಿ ಪಡೆದುಕೊಂಡರು. ಆಯುಧಗಳಲ್ಲಿ ಐವತ್ತು ಯುದ್ಧದ ಸಂದರ್ಭದಲ್ಲಿ ತಲೆಗೆ ಧರಿಸುವ ರಕ್ಷಾಕವಚಗಳು, ಎಂಭತ್ತೈದು ರಕ್ಷಾಕವಚಗಳು ಮತ್ತು ಮುನ್ನೂರ ನಲವತ್ತು ಕತ್ತಿಗಳು ಇದ್ದವು. ಇದು ಮುಸ್ಲಿಮರು ಪಡೆದ ಮೊದಲ ಯುದ್ಧ ಸಂಪತ್ತಾಗಿತ್ತು. 'ಮಾಲೆ ಫೈ' ಎಂದರೆ ಅವಿಶ್ವಾಸಿಗಳೊಂದಿಗೆ ಯುದ್ಧ ಮಾಡದೆ ಪಡೆಯುವ ಸಂಪತ್ತಾಗಿದೆ. ಈ ಸಂಪತ್ತಿನಿಂದ 'ಮಾಲೆ ಗನೀಮತ್' ರೀತಿಯಲ್ಲಿ ಖುಮ್ಸ್ ಅನ್ನು ಹೊರತೆಗೆಯಲಾಗುವುದಿಲ್ಲ, ಬದಲಿಗೆ ಸಂಪೂರ್ಣ ಸಂಪತ್ತು ಅಲ್ಲಾಹನ ಸಂದೇಶವಾಹಕ(ಸ)ರ ವಿಲೇವಾರಿಯಲ್ಲಿರುತ್ತದೆ, ಆದ್ದರಿಂದ ಅವರು ಅದನ್ನು ಎಲ್ಲಿ ಬೇಕಾದರೂ ಖರ್ಚು ಮಾಡಬಹುದಾಗಿತ್ತು. ಬನೂ ನಧೀರ್ ವಿರುದ್ಧ ಯುದ್ಧವೇ ನಡೆದಿರಲಿಲ್ಲ. ಅಲ್ಲಾಹನು ತನ್ನ ಪೈಗಂಬರರ ಬಗ್ಗೆ ಭಯ ಭೀತಿಯನ್ನು ಬನೂ ನಧೀರ್ ಗೋತ್ರದವರ ಹೃದಯಗಳ ಮೇಲೆ ಆವರಿಸುವಂತೆ ಮಾಡಿದ್ದನು. ಹೀಗೆ ಅಲ್ಲಾಹನು ತನ್ನ ಪೈಗಂಬರರನ್ನು ಅವರ ಸಂಪತ್ತಿನ ವಾರೀಸುದಾರರನ್ನಾಗಿ ಮಾಡಿದನು.

ಈ 'ಮಾಲೆ ಫೈ'ಯನ್ನು ಹಝ್ರತ್ ಪೈಗಂಬರ್(ಸ) ಅವರು ತಮ್ಮ ಸಂಪೂರ್ಣ ಸಂಪತ್ತನ್ನು ಮುಸ್ಲಿಮರಿಗೆ ಇದನ್ನು ಅವರು ಒಳ್ಳೆಯ ಕಾರ್ಯಗಳಿಗೆ ಖರ್ಚು ಮಾಡಲು ಸಂಚಿದರು. ಅದಕ್ಕೆ ಸಂಬಂಧಿಸಿದಂತೆ ಸರ್ವಶಕ್ತನಾದ ಅಲ್ಲಾಹನು ಹೀಗೆ ನುಡಿದನು: **ವಮಾ ಅಫಾ ಅಲ್ಲಾಹು ಅಲಾ ರಸೂಲಿಹೀ ಮಿನ್‌ಹುಮ್ ಫಮಾ ಅಔ ಜಫ್‌ತುಮ್ ಅಲೈಹಿ ಮಿನ್ ಖೈಲಿವ್ವಲಾ ರಿಕಾಬಿಂವ್ವಲಾಕಿನ್ನಲ್ಲಾಹ ಯುಸಲ್ಲಿತ್ ರುಸುಲಹೂ ಅಲಾ ಮೈಂಯಶಾಉ ವಲ್ಲಾಹು ಅಲಾ ಕುಲ್ಲಿ ಶೈಯಿನ್ ಖದೀರ್** (ಅಲ್‌ಹಶರ್: 07) ಅಲ್ಲಾಹನು ಅವರಿಂದ (ವಶಪಡಿಸಿ) ತನ್ನ ಸಂದೇಶವಾಹಕನಿಗೆ

ನೀಡಿದ ಸಂಪತ್ತಿಗೋಸ್ಕರ ನೀವು ಕುದುರೆಗಳನ್ನಾಗಲಿ, ಒಂಟೆಗಳನ್ನಾಗಲಿ ಓಡಿಸಿರಲಿಲ್ಲ. ಆದರೆ ಅಲ್ಲಾಹನು ತನ್ನ ಸಂದೇಶವಾಹಕರನ್ನು ತಾನು ಉದ್ದೇಶಿಸುವವರ ಮೇಲಧಿಕಾರಿಗಳನ್ನಾಗಿ ಮಾಡುತ್ತಾನೆ. ಅಲ್ಲಾಹನು ಸರ್ವ ಸಾಮರ್ಥ್ಯವುಳ್ಳವನಾಗಿದ್ದಾನೆ. (ದಾಎರಾ ಮಆರಿಫ್, ಸೀರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ, ಸಂಪುಟ–7, ಪುಟ 189–190, ಬಿಜ್ಮ್ ಇಕ್ಬಾಲ್, ಲಾಹೋರ್, 2022)

ಅನ್‌ಸಾರ್‌ಗಳ ಅದ್ಭುತಕರವೂ ಅನುಕರಣೀಯವೂ ಆಗಿರುವ ಪ್ರೀತಿ ಮತ್ತು ತ್ಯಾಗಶೀಲತೆಯ ಉದಾಹರಣೆ ಸಹ ನಮಗೆ ಇಲ್ಲಿ ದೊರಕುತ್ತದೆ. ಹಝ್ರತ್ ರಸೂಲ್(ಸ)ರು ಸಂಪತ್ತನ್ನು ಹಂಚುವಾಗ ಹಝ್ರತ್ ಸಾಬಿತ್ ಬಿನ್ ಖೈಸ್ ಬಿನ್ ಶಮಾಸ್(ರ)ರೊಂದಿಗೆ ಹೀಗೆ ಹೇಳಿದರು: ನನ್ನೆದುರಿಗೆ ನಿಮ್ಮ ಕೋಮಿನ ಜನರನ್ನು ಜಮಾಯಿಸಿರಿ. ಎಲ್ಲ ಅನ್‌ಸಾರ್‌ಗಳನ್ನು ಕರೆಯಿರಿ ಎಂದು ಹೇಳಿದರು. ಅವರು ಔಸ್ ಮತ್ತು ಖಝ್‌ರಜ್ ಗೋತ್ರದವರನ್ನು ಕರೆದರು. ಹಝ್ರತ್ ಪೈಗಂಬರ್(ಸ) ಅನ್‌ಸಾರ್‌ಗಳು ಮುಹಾಜಿರ್‌ಗಳೊಂದಿಗೆ ಔದಾರ್ಯಪೂರ್ಣವಾಗಿ ವರ್ತಿಸಿದುದನ್ನು ಪ್ರಸ್ತಾಪಿಸುತ್ತಾ ಹೇಳಿದರು: ನೀವು ಇಚ್ಛಿಸುವುದಾದರೆ ಬನೂ ನದ್ವೀರ್‌ರಿಂದ ಗಳಿಸಿದ ಸಂಪತ್ತನ್ನು ನಿಮ್ಮ ಮತ್ತು ಮುಹಾಜಿರೀನ್‌ಗಳ ಮಧ್ಯೆ ಹಂಚಲಾಗುವುದು. ಆ ಸ್ಥಿತಿಯಲ್ಲಿ ಮುಹಾಜಿರ್‌ಗಳು ನೀವು ಕೊಟ್ಟ ಮನೆಗಳಲ್ಲಿ ವಾಸಿಸುವವರೂ ನಿಮ್ಮ ಸಂಪತ್ತಿನ ವಾರೀಸುದಾರರೂ ಆಗುವರು. ಅಥವಾ ನೀವು ತೃಪ್ತಿಪಡುವುದಾದರೆ ಗಳಿಸಿದ ಸಂಪತ್ತನ್ನು ಮುಹಾಜಿರ್‌ಗಳಿಗೆ ಹಂಚುವೆನು. ಹಾಗೆ ಮಾಡಿದರೆ ಅವರು ನೀವು ಅವರಿಗೆ ನೀಡಿದ ಮನೆಗಳಿಂದ ಹೊರಗೆ ಹೋಗುವರು ಎಂದು ಹೇಳಿದರು. ಆಗ ಹಝ್ರತ್ ಸಅದ್ ಬಿನ್ ಉಬಾದ(ರ) ಮತ್ತು ಹಝ್ರತ್ ಸಅದ್ ಬಿನ್ ಮುಆಝ್(ರ) ಹೇಳಿದರು: ಮುಹಾಜಿರುಗಳ ಸ್ವಾಧೀನದಲ್ಲಿರುವ ನಮ್ಮ ಸ್ವತ್ತು ಅವರ ಬಳಿಯಲ್ಲೇ ಇರಲಿ ಹಾಗೂ ಬನೂ ನದ್ವೀರ್‌ನಿಂದ ಗಳಿಸಿದ ಸಂಪತ್ತು ಸಹ ಮುಹಾಜಿರ್ ಸಹೋದರರಿಗೆ ಹಂಚಿಕೊಡಿರಿ. ಇದನ್ನು ಆಲಿಸಿದ ತಕ್ಷಣ ಮುಹಾಜಿರ್‌ಗಳಿಂದ ಹೀಗೆ ಶಬ್ದ ಕೇಳಿಸಿತು. ಅವರು ಹೇಳಿದರು: **ರಝೀನಾ ವ ಸಲ್ಲಮ್‌ನಾ ಯಾ ರಸೂಲಲ್ಲಾಹ್(ಸ)** ಅಂದರೆ: ಹೇ ಅಲ್ಲಾಹನ ರಸೂಲರೇ ನಾವು ನಿಮ್ಮ ತೀರ್ಮಾನದ ಬಗ್ಗೆ ಸಂತೋಷಪಡುತ್ತೇವೆ. ನಾವು ಅದನ್ನು ಅಂಗೀಕರಿಸುತ್ತೇವೆ.

ಹಝ್ರತ್ ಪೈಗಂಬರ್(ಸ)ರು ಅನ್‌ಸಾರ್‌ಗಳ ತ್ಯಾಗ ಮನೋಭಾವವನ್ನು ನೋಡಿ ಸಂತೋಷಗೊಂಡು ಹೇಳಿದರು: **ಅಲ್ಲಾಹುಮ್ಮರ್‌ಹಮಿಲ್ ಅನ್ಸಾರ ವ ಅಬ್ನಾ ಅಲ್ ಅನ್ಸಾರ್** ಅಂದರೆ: ಹೇ ಅಲ್ಲಾಹ್ ಅನ್‌ಸಾರ್‌ಗಳ ಮೇಲೆಯೂ ಅವರ ಮಕ್ಕಳ ಮೇಲೆಯೂ ಕರುಣೆ ದೋರು.

ಹಝ್ರತ್ ಪೈಗಂಬರ್(ಸ)ರು ತಮ್ಮ ಸಂಪತ್ತನ್ನು ಮುಹಾಜಿರೀನರಿಗೆ ಹಂಚಿದರು. ಅನ್ಸಾರ್‌ಗಳಲ್ಲಿ, ಕೇವಲ ಇಬ್ಬರು ಬಡ ಸಹಾಬೀಯರಿಗೆ ಈ ಸಂಪತ್ತಿನಿಂದ ನೀಡಲಾಯಿತು ಮತ್ತು ಅವರು ಹಝ್ರತ್ ಸಹಲ್ ಬಿನ್ ಹುನೈಫ್ ಮತ್ತು ಹಝ್ರತ್ ಅಬು ದುಜಾನಾ. ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಸಹ್ಲ್ ಬಿನ್ ಹುನೈಫ್ ಮತ್ತು ಹಝ್ರತ್ ಅಬು ದುಜಾನಾ(ರ) ಅವರನ್ನು ಹೊರತುಪಡಿಸಿ ಅನ್ಸಾರ್‌ಗಳಿಗೆ ಬನೂನಝೀರ್‌ನ ಸಂಪತ್ತಿನಲ್ಲಿ ಪಾಲು ನೀಡಲಿಲ್ಲ ಏಕೆಂದರೆ ಅವರಿಬ್ಬರು ಬಡವರಾಗಿದ್ದರು ಎಂದು ಝುಹ್ರಿ ಹೇಳುವುದನ್ನು ನಾನು ಕೇಳಿದ್ದೇನೆ ಎಂದು ಇಬ್ನ್ ಉಯೈನಾ ವಿವರಿಸುತ್ತಾರೆ.

ಹಝ್ರತ್ ಪೈಗಂಬರ್(ಸ) ಅವರು ಇಬ್ನ್ ಅಬಿ ಅಲ್–ಹಖೀಖ್ ಅವರ ಖಡ್ಗವನ್ನು ಹಝ್ರತ್ ಸಅದ್ ಬಿನ್ ಮುಆಝ್ ಅವರಿಗೆ ನೀಡಿದರು. ಈ ಖಡ್ಗವು ದೊಡ್ಡ ಖ್ಯಾತಿಯನ್ನು ಹೊಂದಿತ್ತು.
(ಸಬ್ಲುಲ್ ಹುದಾ ವರ್–ರಶಾದ್, ಸಂಪುಟ–4, ಪುಟ–325, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್, ಲೆಬನಾನ್, 1993) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ–3, ಪುಟ–247, ದಾರ್ ಅಹ್ಯಾ ಅಲ್–ತುರಾಸುಲ್ ಅರಬೀಯಾ, ಬೈರುತ್)

ಹಝ್ರತ್ ಪೈಗಂಬರ್(ಸ) ಅವರು ಉಳಿದ ಸರಕುಗಳನ್ನು ಬಡವರಿಗೆ ಹಂಚಿದರು ಮತ್ತು ಸ್ವತಃ ತಮಗಾಗಿ ತಮ್ಮ ಧರ್ಮಪತ್ನಿಯರ ವ್ಯಚ್ಚಕ್ಕಾಗಿ ಸ್ವಲ್ಪ ಇಟ್ಟುಕೊಂಡಿದ್ದರು. ಹಝ್ರತ್ ಪೈಗಂಬರ್(ಸ) ತಮ್ಮ ಧರ್ಮಪತ್ನಿಯರಿಗೆ ಇಡೀ ವರ್ಷದ ಖರ್ಚನ್ನು ಬನುನಝೀರ್ ನ ತೋಟಗಳಿಂದ ಪಡೆದ ಧಾನ್ಯದಿಂದ ನೀಡುತ್ತಿದ್ದ ವರದಿ ಇದೆ. ಅವರು ತಮ್ಮ ಪತ್ನಿಯರಿಗೆ ವರ್ಷಕ್ಕೆ ಸಾಕಾಗುವಷ್ಟನ್ನು ನೀಡುತ್ತಿದ್ದರು ಮತ್ತು ಉಳಿದದ್ದನ್ನು ಜಿಹಾದ್‌ನ ತಯಾರಿಗಾಗಿ ಖರ್ಚು ಮಾಡುತ್ತಿದ್ದರು. ಬಡವರ ಮತ್ತು ನಿರ್ಗತಿಕರ ಸಹಾಯವು ಇದೇ ಸಂಪತ್ತಿನಿಂದ ಆಗುತ್ತಿತ್ತು. ಬನುನಝೀರ್ ರ ಏಳು ಉದ್ಯಾನಗಳಿದ್ದವು, ಅದನ್ನು ಸ್ವತಂತ್ರಗೊಳಿಸಿದ ಗುಲಾಮರಾದ ಹಝ್ರತ್ ಅಬು ರಾಫೆ(ರ) ಅವರನ್ನು ನೇಮಿಸಲಾಯಿತು. ಅಂದರೆ ಅವರು ಅದರ ಮ್ಯಾನೇಜರ್ ಆಗಿದ್ದರು. ಇವು ಈ ಉದ್ಯಾನಗಳ ಹೆಸರುಗಳು ಹೀಗಿವೆ: ಮೀಸಬ್, ಸಾಫಿಯಾ, ದಲಾಲ್, ಹುಸ್ನಾ, ಬುರ್ಖಾ, ಆವಾಫ್ ಮತ್ತು ಮಶ್ರಬಾ ಉಮ್ ಇಬ್ರಾಹಿಂ. (ದಾಎರಾ ಮುಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ–7, ಪುಟ–191, ಬಿಜ್ಮ್ ಇಕ್ಬಾಲ್, ಲಾಹೋರ್, 2022)

ಬನೂ ನದ್ವೀರ್‌ಗೆ ಸಂಬಂಧಿಸಿದ ಯುದ್ಧದ ವಿವರಣೆ ಇಲ್ಲಿಗೆ ಮುಗಿಯಿತು. ಮುಂದೆ ಇನ್‌ಶಾ ಅಲ್ಲಾಹ್ ಬೇರೆ ಯುದ್ಧಗಳ ಬಗ್ಗೆ ಪ್ರಸ್ತಾಪಿಸಲಾಗುವುದು.

ಪಾಕಿಸ್ತಾನದ ಅಹ್ಮದೀಯರಿಗಾಗಿ ಪ್ರಾರ್ಥಿಸುವುದನ್ನು ಮುಂದುವರಿಸಿ, ಅಲ್ಲಿನ ಪರಿಸ್ಥಿತಿ ಸುಧಾರಣೆಗಾಗಿ ಪ್ರಾರ್ಥಿಸುತ್ತಾ ಇರಿ. ಸರ್ವಶಕ್ತನಾದ ಅಲ್ಲಾಹನು ಅಲ್ಲಿನ ಸಾಮಾನ್ಯ ಕಾನೂನು ಮತ್ತು ಸುವ್ಯವಸ್ಥೆಯನ್ನು ಸುಧಾರಿಸಲಿ ಮತ್ತು ಅಹ್ಮದೀಯರನ್ನು ಅವನ ರಕ್ಷಣೆಯಲ್ಲಿ ಇರಿಸಲಿ.

ಪ್ರಪಂಚದ ಮುಸ್ಲಿಮರ ಸಾಮಾನ್ಯ ಸ್ಥಿತಿಗಾಗಿ ಸಹ ಪ್ರಾರ್ಥಿಸಿ. ಈ ಜನರು ಪ್ರಸ್ತುತ ಕಾಲದ ಇಮಾಮ್ ಅನ್ನು ಅಂಗೀಕರಿಸುವ ಮೂಲಕ ತಮ್ಮ ಘನತೆಯನ್ನು ಮರಳಿ ಪಡೆಯಬಹುದು. ಪ್ರಪಂಚದ ಯುದ್ಧದ ಸಾಮಾನ್ಯ ಪರಿಸ್ಥಿತಿಗಾಗಿ ಸಹ ಪ್ರಾರ್ಥಿಸಿ. ಜಗತ್ತು ಯಾವ ಕಡೆಗೆ ಹೋಗುತ್ತಿದೆಯೋ ಆ ಯುದ್ಧವು ಈಗ ನಡೆಯಬೇಕಾಗಿದೆ ಎಂದು ತೋರುತ್ತದೆ, ಆದರೆ ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಯನ್ನು ಮತ್ತು ಪ್ರತಿಯೊಬ್ಬ ಮುಗ್ಧ ವ್ಯಕ್ತಿಯನ್ನು ಅದರ ದುಷ್ಟತನದಿಂದ ರಕ್ಷಿಸಲಿ.

...*...*...*...

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2024 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

## *129 ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

**"ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾಗಿದೆ. (ಎಂದರೆ ಧಾನಧರ್ಮ ಕೊಡುವವನು ಅದನ್ನು ಪಡೆದುಕೊಳ್ಳುವವನಿಗಿಂತ ಉತ್ತಮವಾಗಿದ್ದಾನೆ)"**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

**"ಯಾರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞತೆ ಅರ್ಪಿಸುವುದಿಲ್ಲ."**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

ಜಲ್ಸ ಸಾಲಾನ ಖಾದಿಯಾನ್ 2023ರ ಭಾಷಣ

# ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹಜ್ಜತುಲ್ ವಿದಾಅ್ ಭಾಷಣದ ಬೆಳಕಿನಲ್ಲಿ ಮಾನವರ ಸಮಾನತೆ ಬಗ್ಗೆ ಪ್ರತಿಪಾದನೆ

(ಮೌಲಾನ ಮುಹಮ್ಮದ್ ಇನಾಮ್ ಘೋರಿ, ಸಾಧಿರ್ ಅಲ್‌ಲಾ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್)

**ಯಾ ಅಯ್ಯುಹನ್ನಾಸುತ್ತಖೂ ರಬ್ಬಕುಮುಲ್ಲಝೀ ಖಲಖಕುಮ್ ಮಿನ್ ನಫ್‌ಸಿನ್ ವಾಹಿದತಿನ್ ವ ಖಲಖ ಮಿನ್‌ಹಾಝೌಜಹಾ ವ ಬಸ್ಸಮಿನ್ ಹುಮಾ ರಿಜಾಲನ್ ಕಸೀರನ್ ವ ನಿಸಾಅನ್.**

ಎಲೈ ಮನುಷ್ಯರೇ, ನೀವು ನಿಮ್ಮ ಪ್ರಭುವಿನ ಭಯವಿರಿಸಿಕೊಳ್ಳಿರಿ. ಅವನು ನಿಮ್ಮನ್ನು ಒಂದು ಜೀವಾಳದಿಂದ ಸೃಷ್ಟಿಸಿ ಅದರಿಂದ (ಅದರ ವರ್ಗದಿಂದ) ಅದರ ಜೋಡಿಯನ್ನೂ ಸೃಷ್ಟಿಸಿ ಅವೆರಡರಿಂದ ಅನೇಕ ಪುರುಷರನ್ನೂ ಸ್ತ್ರೀಯರನ್ನೂ (ಲೋಕದಲ್ಲಿ) ವ್ಯಾಪಿಸುವಂತೆ ಮಾಡಿರುವನು. (ಅನ್ನಿಸಾಅ್ 2).

**ಯಾ ಅಯ್ಯುಹನ್ನಾಸು ಇನ್ನಾ ಖಲಖ್‌ನಾಕುಮ್ ಮಿನ್ ಝುಕರಿನ್ ವ ಉನ್‌ಸಾ ವ ಜಅಲ್‌ನಾಕುಮ್ ಶುಊಬನ್ ವ ಖಬಾಯಿ ಲಿತಆರಫೂ. ಇನ್ನ ಅಕ್‌ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್, ಇನ್ನಲ್ಲಾಹ ಅಲೀಮುನ್ ಖಬೀರ್.**

ಎಲೈ ಮನುಷ್ಯರೇ, ನಾವು ನಿಮ್ಮನ್ನು ಗಂಡು ಮತ್ತು ಹೆಣ್ಣಿನಿಂದ ಸೃಷ್ಟಿಸಿದೆವು. ನೀವು ಪರಸ್ಪರ ಗುರುತಿಸಲಿಕ್ಕಾಗಿ ನಿಮ್ಮನ್ನು ಕುಲಗಳನ್ನಾಗಿಯೂ ಗೋತ್ರಗಳನ್ನಾಗಿಯೂ ಮಾಡಿರುವೆವು. ನಿಮ್ಮ ಪೈಕಿ ಹೆಚ್ಚು ಸಾತ್ವಿಕರಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು. ದಿಟವಾಗಿಯೂ ಅಲ್ಲಾಹನು ಸರ್ವಜ್ಞನೂ ಎಲ್ಲ ಅರಿತವನೂ ಆಗಿದ್ದಾನೆ. (ಅಲ್‌ಹುಜುರಾತ್ : 14)

**ಖುಲ್ ಇನ್ನಮಾಅನ ಬಶರುನ್ ಮಿಸ್‌ಲುಕುಮ್ ಯೂಹೀ ಇಲೈಯ್ಯ ಅನ್ನಮಾ ಇಲಾಹುಕುಮ್ ಇಲಾಹುನ್ ವಾಹಿದ್.**

ಹೇ ಪ್ರವಾದಿ ಹೇಳು: ನಾನು ನಿಮ್ಮಂತಹ ಒಬ್ಬ ಮನುಷ್ಯ ಮಾತ್ರ. ಆದರೆ ನಿಮ್ಮ ಪ್ರಭು ಒಬ್ಬನೇ ಒಬ್ಬನೆಂದು ನನಗೆ ದಿವ್ಯ ಸಂದೇಶ ನೀಡಲ್ಪಟ್ಟಿದೆ. (ಅಲ್‌ಕಹ್‌ಫ್ : 111).

ಮಾನವರು ಸಮಾನರು ಎನ್ನುವುದರ ಬಗ್ಗೆ ಇಸ್ಲಾಮಿನ ದರ್ಶನಶಾಸ್ತ್ರದ ಸಾರಾಂಶ ನಾನು ಪಠಿಸಿದ ಈ ಪವಿತ್ರ ಖುರ್‌ಆನ್ ವಚನಗಳಲ್ಲಿದೆ. ಅದರ ಭಾಷಾಂತರ ನಾನು ನಿಮಗೆ ಕೇಳಿಸಿರುವೆನು.

ಮಾನವರೆಲ್ಲರೂ ಒಬ್ಬನೇ ಪಿತನ ಮಕ್ಕಳೆಂದೂ ಒಂದೇ ಮರದ ಶಾಖೆಗಳೆಂದೂ ಸೂರತುನ್ನಿಸಾದಲ್ಲಿ ಅಲ್ಲಾಹನು ಹೇಳಿ ಲೋಕದಲ್ಲಿ ಸರಿಯಾದ ಸಮಾನತೆಯ ಅಸ್ತಿಭಾರವನ್ನು ಹಾಕಿರುವನು. ಅನಂತರ ವಿವಿಧ ಸ್ಥಿತಿಗತಿಗಳ ಕಾರಣದಿಂದ ವಿವಿಧ ಜನರಲ್ಲಿ, ವಿವಿಧ ಕೋಮುಗಳಲ್ಲಿ, ವಿವಿಧ ವರ್ಗಗಳಲ್ಲಿ ಎಷ್ಟು ವ್ಯತ್ಯಾಸಗಳು ತಲೆದೋರಿದ್ದರೂ ಅವರು ಪರಸ್ಪರ ಮಾಡುವ ವ್ಯವಹಾರಗಳಲ್ಲಿ ಈ ವಿಷಯವನ್ನು ಕಡೆಗಣಿಸಬಾರದು ಅವರೆಲ್ಲರೂ ಒಂದೇ ಜೋಡಿಯಿಂದ ಹುಟ್ಟಿದವರೆಂಬುದನ್ನು.

ಸೂರತುಲ್ ಹುಜುರಾತ್‌ನಲ್ಲಿ ಇನ್ನಷ್ಟು ವಿಶದೀಕರಿಸಲಾಗಿದೆ. ಮಾನವರು ವಿವಿಧ ಕೋಮುಗಳಾಗಿ ಮತ್ತು ವಿವಿಧ ಗೋತ್ರಗಳಾಗಿ ವಿಭಜಿಸಲ್ಪಟ್ಟಿದ್ದಾಗಿ ಕಾಣುವುದರ ಕೇವಲ ಪರಸ್ಪರ ಗುರುತಿಸಿಕೊಳ್ಳುವ ಒಂದು ಮಾರ್ಗ ಮಾತ್ರವಾಗಿದೆ. ಅದನ್ನು ಒಬ್ಬರಿನ್ನೊಬ್ಬರ ಎದುರಿಗೆ ಹೆಮ್ಮೆಪಡುವ ಮತ್ತು ಹಿರಿಮೆಯನ್ನು ಪ್ರಕಟಿಸುವ ಮಾರ್ಗವನ್ನಾಗಿ ಮಾಡಬಾರದು. ನೀವು ನೆನಪಿನಲ್ಲಿರಿಸಬೇಕು ಒಂದು ಸಜ್ಜನ ಸಮಾಜದಲ್ಲಿ ದೊಡ್ಡ ಮತ್ತು ಗೌರವಾರ್ಹನಾದ ಮನುಷ್ಯನು, ಪ್ರಶಂಸಾರ್ಹ ಗುಣಗಳನ್ನು ಹೊಂದಿರುವವನೂ ಹೆಚ್ಚು ದೇವಭಕ್ತಿಯುಳ್ಳವನೂ ಆಗಿರುವವನೂ ಆಗಿದ್ದಾನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಇನ್ನಮಾ ಅನ ಬಶರುನ್ ಮಿಸ್‌ಲುಕುಮ್ – ನಾನು ನಿಮ್ಮಂತಹ ಒಬ್ಬ ಮನುಷ್ಯ ಮಾತ್ರ ಎಂದು ಹೇಳಿ ಮಾನವೀಯತೆಯ ಘನತೆಯನ್ನು ಅತ್ಯುನ್ನತಿಗೆ ತಲಪಿಸಿದ್ದಾರೆ.

ಬಹುಮಾನ್ಯ ಶ್ರೋತೃಗಳೇ, ಇಂದಿನ ಕಾಲದಲ್ಲಿ ಲೋಕವು ಅಶಾಂತಿ ಮತ್ತು ಆತಂಕಕ್ಕೆ ತುತ್ತಾಗಿದೆ. ಇದಕ್ಕೆ ಮುಖ್ಯ ಕಾರಣ ಧಾರ್ಮಿಕ ವಿದ್ವೇಷವಾಗಿದೆ. ಇನ್ನೊಂದು ಕಾರಣ ಜಾತಿಗಳ ವಿಭಿನ್ನತೆ ವರ್ಣ ಮತ್ತು ವಂಶದ ವ್ಯತ್ಯಾಸಗಳಾಗಿವೆ. ಕೆಲವು ಸ್ಥಳಗಳಲ್ಲಿ ಬಿಳಿಯರ ಮತ್ತು ಕರಿಯರ ಮಧ್ಯೆ ಜಗಳಗಳಿವೆ. ಕೆಲವು ಕಡೆಗಳಲ್ಲಿ ಭಂಡವಾಳಗಾರರ ಮತ್ತು ಕಾರ್ಮಿಕರ ಮಧ್ಯೆ ಜಗಳವಿದೆ. ಕೆಲವು ಸ್ಥಳಗಳಲ್ಲಿ ಜನಾಂಗೀಯ ಶ್ರೇಷ್ಠತೆಯ ಹಮ್ಮು ಇದೆ. ಕೆಲವು ಕಡೆ ಉನ್ನತ ಜಾತಿಯ ಹೆಮ್ಮೆ ಇದೆ. ಇವೆಲ್ಲ ತಮ್ಮ ಹಾಗಿರುವ ಇತರ ಮನುಷ್ಯರನ್ನು ಕೀಳಾಗಿ ಕಾಣಲಾಗುತ್ತಿದೆ. ಈ ರೀತಿ ಮನುಷ್ಯರ ಮಧ್ಯೆ ದ್ವೇಷದ ಉಕ್ಕಿನ ಗೋಡೆ ನಿರ್ಮಿಸಲ್ಪಟ್ಟಿದೆ.

ಇಂತಹ ಪರಿಸ್ಥಿತಿಯಲ್ಲಿ ಈಗ ಎಲ್ಲ ಕಡೆಗಳಲ್ಲೂ ಮಾನವರ ಸಮಾನತೆ ಬಗ್ಗೆ ಚರ್ಚೆ ಮಾಡಲಾಗುತ್ತಿದೆ. ಈ ಹಸಿರು ತೋಟದ ಸ್ಥಾಪನೆ ಎಷ್ಟರಮಟ್ಟಿಗೆ ಸಾಧ್ಯವಿದೆ. ಎಷ್ಟರ ಮಟ್ಟಿಗೆ ನಿರ್ಮಿಸಲಾಗಿದೆ. ವಾಸ್ತವಿಕ ಸ್ಥಿತಿ ಹೇಗಿದೆ ಅವುಗಳ ವಿವರಣೆಗಳೆಲ್ಲಾ ನೀಡಲು ಸೀಮಿತ ಸಮಯದಲ್ಲಿ ಸಾಧ್ಯವಿಲ್ಲ. ಆದರೆ ಪ್ರಕಟಣೆ ಮತ್ತು ಪ್ರಚಾರಗಳನ್ನು ನಿರಾಕರಿಸಲು ಸಾಧ್ಯವಿಲ್ಲ. ಅಭಿವೃದ್ಧಿ ಗಳಿಸಿದ ದೇಶಗಳಲ್ಲೂ ಅಭಿವೃದ್ಧಿಶೀಲ ದೇಶಗಳಲ್ಲೂ ಮಾನವರಲ್ಲಿ ಸಮಾನತೆ ಸ್ಥಾಪಿಸುವ ಸಂತೋಷಕರವಾದ ಘೋಷಣೆಗಳು ಜಾರಿಯಲ್ಲಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲೂ ಸೋಶಿಯಲಿಸಂ ಅಥವಾ ಕಮ್ಯೂನಿಸಂ ವ್ಯವಸ್ಥೆಗಳಲ್ಲೂ ಎಲ್ಲರೂ ಸಮಾನತೆ ಸ್ಥಾಪಿಸುವ ವಾದ ಮಾಡುತ್ತಾರೆ. ಶ್ರೀಮಂತರ ಮತ್ತು ಬಡವರ ಮಧ್ಯೆ ಇರುವ ವ್ಯತ್ಯಾಸ ಅಳಿಸಿ ಬಿಡುವ ಬಗ್ಗೆ ಹೇಳುತ್ತಾರೆ. ಸ್ತ್ರೀ ಪುರುಷರಲ್ಲಿ ಸಮಾನತೆ ಸ್ಥಾಪಿಸುವ ಬಗ್ಗೆ ಹೇಳುತ್ತಾರೆ. ಅಧಿಕಾರಿ ಮತ್ತು ಅಧೀನರನ್ನೂ ಒಡೆಯರನ್ನೂ ನೌಕರರನ್ನೂ ಒಂದು ಸಾಲಿನಲ್ಲಿ ನಿಲ್ಲಿಸುವ ಬಗ್ಗೆ ಹೇಳುತ್ತಾರೆ. ಇತ್ಯಾದಿ ವಿಷಯಗಳಿವೆ.

ಪ್ರಾಯೋಗಿಕವಾಗಿ ಸಮಾನತೆ ಸ್ಥಾಪಿಸಲು ಎಲ್ಲದಕ್ಕಿಂತ ಮೊದಲು ಈ ವಿಷಯ ತೀರ್ಮಾನಿಸುವುದು ಆವಶ್ಯಕವಾಗಿದೆ. ಯಾವ ವಿಷಯಗಳಿಗೆ ಸಂಬಂಧಿಸಿ ಮಾನವರ ಮಧ್ಯೆ ಸಮಾನತೆ ಸ್ಥಾಪಿಸಲು ಸಾಧ್ಯವಿದೆ ಎಂಬುದರ ಬಗ್ಗೆ. ಹಾಗೆ ಸಾಧ್ಯವಿದ್ದರೆ ಯಾವ ಪರಿಮಿತಿ ತನಕ ಸ್ಥಾಪಿಸಬಹುದು ಎಂದು.

ಇದಕ್ಕೋಸ್ಕರ ಸೃಷ್ಟಿಕರ್ತನಾದ ಅಲ್ಲಾಹನ ಮೂಲಭೂತ ಗುಣಗಳಾದ ರಬ್ಬುಲ್ ಆಲಮೀನ್, ರಹ್ಮಾನ್, ರಹೀಮ್, ಮಾಲಿಕಿಯೌಮಿದ್ದೀನ್ ಎಂಬ ಗುಣಗಳನ್ನು ಮನವರಿಕೆ ಮಾಡುವುದು ಆವಶ್ಯಕವಾಗಿದೆ. ಅಲ್ಲಾಹನ ಪ್ರಥಮ ಗುಣವನ್ನು ಪವಿತ್ರ ಖುರ್‌ಆನ್ ರಬ್ಬುಲ್ ಆಲಮೀನ್ ಎಂದು ಹೇಳಿದೆ. ಸರ್ವಲೋಕಗಳ ಪರಿಪಾಲಕ ಎಂದು ಈ ಶಬ್ದದ ಅರ್ಥವಾಗಿದೆ. ಅವನು ಸರ್ವ ಸೃಷ್ಟಿಗಳ ಪರಿಪಾಲಕನಾಗಿದ್ದಾನೆ. ಅವನು ಕೇವಲ ಮುಸ್ಲಿಮರ ಪರಿಪಾಲಕನಲ್ಲ ಅವನು ಕೇವಲ ಕ್ರೈಸ್ತರ ಪರಿಪಾಲಕನಲ್ಲ. ಕೇವಲ ಯಹೂದಿಗಳ ಪರಿಪಾಲಕನಲ್ಲ. ಕೇವಲ ಹಿಂದುಗಳ ಪರಿಪಾಲಕನಲ್ಲ. ಅವನು ಸರ್ವರ ಪರಿಪಾಲಕನಾಗಿದ್ದಾನೆ. ಅವನ ದೈವಿಕ ವ್ಯವಸ್ಥೆ ಅವನ ಭೂಮ್ಯಾಕಾಶಗಳ ವ್ಯವಸ್ಥೆ ಅವನ ಪರಿಪಾಲಕನೆಂಬ ಗುಣವನ್ನು ಅವನ ರಹ್ಮಾನ್ ಎಂಬ ಗುಣವನ್ನೂ ಪ್ರಕಟಿಸಿ ಪ್ರತಿ ಮನುಷ್ಯನಿಗೆ ಸಮಾನವಾಗಿ ಅನುಗ್ರಹವನ್ನು ನೀಡುತ್ತಿದೆ. ಮನುಷ್ಯನು ದೇವನನ್ನು ನಂಬಿದರೂ ನಂಬದಿದ್ದರೂ, ಅವನ ಆರಾಧನೆ ಮಾಡಿದರೂ ಮಾಡದಿದ್ದರೂ ಅವನು ಸೃಷ್ಟಿಸಿದ ಸೂರ್ಯ ಚಂದ್ರ ಎಲ್ಲರಿಗೂ ಪ್ರಕಾಶ ತಲಪಿಸುತ್ತವೆ. ಅವನ ಭೂಮಿ, ಅವನ ನದಿಗಳು ಅವನ ಗಾಳಿ ಮೊದಲಾದುವು ಯಾರನ್ನೂ ಹೊರತುಪಡಿಸದೆ ಎಲ್ಲರಿಗೂ ಅನುಗ್ರಹಗಳನ್ನು ತಲಪಿಸುತ್ತವೆ. ಇವು ಶಾರೀರಿಕ ಪರಿಪಾಲನೆಗೆ ಸಂಬಂಧಿಸಿ ಕಾರ್ಯಪ್ರವೃತ್ತವಾಗಿವೆ. ಇವು ಶಾರೀರಿಕ ಪರಿಪಾಲನೆಗೆ ಸಂಬಂಧಿಸಿ ಕಾರ್ಯಪ್ರವೃತ್ತವಾಗಿವೆ. ಇದೇ ರೀತಿ ಆಧ್ಯಾತ್ಮಿಕ ಪರಿಪಾಲನೆಗೂ ಅಭಿವೃದ್ಧಿ ನೀಡಲಿಕ್ಕೂ ದೇವನ ಯಾವ ಕೋಮಿನ ಬಗ್ಗೆಯೂ ವ್ಯತ್ಯಾಸ ಮಾಡಿಲ್ಲ. ಪ್ರತಿಯೊಂದು ಕೋಮಿನಲ್ಲಿ ತನ್ನ ಸಂದೇಶವಾಹಕನನ್ನೂ ಮಾರ್ಗದರ್ಶಕರನ್ನೂ ಕಳುಹಿಸಿದ್ದಾನೆ. ಪವಿತ್ರ ಖುರ್‌ಆನ್ ಇದರ ಬಗ್ಗೆ ಹೀಗೆ ಹೇಳಿದೆ: **ಲಿಕುಲ್ಲಿ ಉಮ್ಮತಿನ್ ರಸೂಲುನ್** – ಪ್ರತಿಯೊಂದು ಸಮುದಾಯಕ್ಕೂ ಒಬ್ಬೊಬ್ಬ ಪ್ರವಾದಿ ಇದ್ದಾರೆ. (ಯೂನುಸ್ : 48).

**ಲಿಕುಲ್ಲಿ ಖೌಮಿನ್ ಹಾದ್** – ಪ್ರತಿಯೊಂದು ಸಮುದಾಯಕ್ಕೂ (ಅಲ್ಲಾಹನ ಕಡೆಯಿಂದ) ಒಬ್ಬ ಮಾರ್ಗದರ್ಶಕ ನಿಯೋಜಿಸಲ್ಪಟ್ಟಿದ್ದಾನೆ. (ಅರ್ರಅದ್ 8)

ಅಲ್ಲಾಹನು ಪ್ರವಾದಿಗಳ ಮಧ್ಯೆ ಸಹ ಸಮಾನತೆ ಇರಿಸಿದ್ದಾನೆ. ಅವನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ. **ಲಾ ನುಫರ್ರಿಖು ಬೈನ ಅಹದಿನ್ ಮಿನ್ ರುಸುಲಿಹೀ** "ಅಲ್ಲಾಹನ ಸಂದೇಶವಾಹಕರ ಮಧ್ಯೆ ನಾವು ವ್ಯತ್ಯಾಸವನ್ನೇನೂ ಕಲ್ಪಿಸುವುದಿಲ್ಲ." (ಸೂರತುಲ್ ಬಖರ : 286).

ಮುಸ್ಲಿಮರು ಅಲ್ಲಾಹನ ಸಂದೇಶವಾಹಕರನ್ನು ಸಂದೇಶವಾಹಕರೆಂಬ ನೆಲೆಯಲ್ಲಿ ಯಾವುದೇ ವ್ಯತ್ಯಾಸವನ್ನು ಕಲ್ಪಿಸುವುದಿಲ್ಲ. ಆದರೆ ವಿವಿಧ ಸಂದೇಶವಾಹಕರ ಹೊಣೆಗಾರಿಕೆಗಳು ಮತ್ತು ಕಾರ್ಯಕ್ಷೇತ್ರಗಳು ಬೇರೆ ಬೇರೆಯಾಗಿವೆ.

ಮಾನ್ಯ ಶ್ರೋತೃಗಳೇ, ಮನುಷ್ಯನ ಸೃಷ್ಟಿ ಅವರ ಬೌದ್ಧಿಕ ಮತ್ತು

ಶಾರೀರಿಕ ಸಾಮರ್ಥ್ಯಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಇವುಗಳಿಗೆ ಸಂಬಂಧಿಸಿ ಸಮಾನತೆ ಬಗ್ಗೆ ಹೆಚ್ಚು ವಿಶದೀಕರಿಸುವಂತೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಕೊನೆಯ ಹಜ್ಜ್ ವೇಳೆಯಲ್ಲಿ ಮಾಡಿದ ಭಾಷಣದ ಬೆಳಕಿನಲ್ಲಿ ಕೆಲವು ವಿಷಯಗಳನ್ನು ಸಂಕ್ಷಿಪ್ತವಾಗಿ ವಿವರಿಸುತ್ತೇನೆ.

ನೆನಪಿಡಬೇಕಾದುದೇನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಿಜರಿ ವರ್ಷ 9ರಲ್ಲಿ ಹಜ್ಜ್ ಮಾಡಿದ್ದರು. ಹದೀಸು ವರದಿಗಳ ಪ್ರಕಾರ ಆ ಹಜ್ಜ್‌ನಲ್ಲಿ ಒಂದು ಲಕ್ಷದ ಇಪ್ಪತ್ತನಾಲ್ಕು ಸಾವಿರಕ್ಕಿಂತ ಹೆಚ್ಚು ಸಹಾಬರು ಅವರ ಜೊತೆಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆ ಹಜ್ಜ್ ಪ್ರಥಮ ಮತ್ತು ಕೊನೆಯ ಹಜ್ಜ್ ಆಗಿದ್ದು ಅದನ್ನು ಹಜ್ಜತುಲ್ ವಿದಾಅ್ ಎಂದು ಕರೆಯುತ್ತಾರೆ. ಆ ಸಂದರ್ಭದಲ್ಲಿ ಅರಫಾತ್ ಮತ್ತು ಮಿನಾ ಮೈದಾನಗಳಲ್ಲಿ ದೀರ್ಘ ಖುತುಬ ನೀಡಿದ್ದರು. ವಿವಿಧ ವರದಿಗಳ ಮೂಲಕ ಬುಖಾರಿ ಶರೀಫ್ ಮತ್ತು ಮುಸ್‌ನದ್ ಅಹ್ಮದ್ ಬಿನ್ ಹಂಬಲ್ ಮೊದಲಾದ ಹದೀಸು ಗ್ರಂಥಗಳಲ್ಲಿ ವಿವರಗಳಿವೆ. ಮನುಷ್ಯನ ಅಭಿವೃದ್ಧಿ ಮತ್ತು ಖಿಯಾಮತ್ ತನಕದ ಪೀಳಿಗೆಗಳ ತರಬೇತಿಗೆ ಸಂಬಂಧಿಸಿ ವಿವಿಧ ಪಾರ್ಶ್ವಗಳ ಬಗ್ಗೆ ಆ ಖುತ್‌ಬದಲ್ಲಿ ವಿವರಿಸಲಾಗಿದೆ. ಆದರೆ ನಾನು ನನ್ನ ಭಾಷಣದ ವಿಷಯಕ್ಕೆ ಸಂಬಂಧಿಸಿ ಮಾನವರ ಸಮಾನತೆ ಬಗ್ಗೆ ಆ ಖುತ್‌ಬದಲ್ಲಿ ಹೇಳಿದ ಕೆಲವು ಅಂಶಗಳ ಭಾಷಾಂತರವನ್ನು ನಿಮ್ಮ ಮುಂದೆ ಇರಿಸುತ್ತೇನೆ.

ಝುಲ್ ಹಜ್ಜ್ ತಿಂಗಳ ಹನ್ನೊಂದನೆ ದಿನಾಂಕ ಮಿನಾದ ಮೈದಾನದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಹೇ ಜನರೇ, ನೀವು ನನ್ನ ಮಾತುಗಳನ್ನು ಲಕ್ಷ್ಯವಿಟ್ಟು ಆಲಿಸಿರಿ. ಏಕೆಂದರೆ ಈ ವರ್ಷದ ನಂತರ ಎಂದಾದರೂ ನಿಮ್ಮ ಮಧ್ಯೆ ಈ ಮೈದಾನದಲ್ಲಿ ನಿಂತು ಭಾಷಣ ಮಾಡುವೆನೋ ಎಂದು ನನಗೆ ಗೊತ್ತಿಲ್ಲ.

ಹೇ ಜನರೇ, ನಿಮ್ಮ ಪ್ರಭು ಒಬ್ಬನೇ, ನಿಮ್ಮ ಪಿತನೂ ಒಬ್ಬನಾಗಿದ್ದನು. ನೀವು ಶ್ರದ್ಧೆಯಿಂದ ಆಲಿಸಿರಿ. ಅರಬಿಗಳಿಗೆ ಅರಬಿಯೇತರರ ಮೇಲೆ ಶ್ರೇಷ್ಠತೆ ಇಲ್ಲ. ಅರಬಿಯೇತರರಿಗೆ ಅರಬಿಗಳ ಮೇಲೆಯೂ ಶ್ರೇಷ್ಠತೆ ಇಲ್ಲ. ಇದೇ ರೀತಿ ಬಿಳಿ ಜನರಿಗೆ ಕಪ್ಪು ಜನರ ಮೇಲೆ ಶ್ರೇಷ್ಠತೆ ಇಲ್ಲ. ಕಪ್ಪು ಜನರಿಗೆ ಬಿಳಿ ಜನರ ಮೇಲೆಯೂ ಶ್ರೇಷ್ಠತೆ ಇಲ್ಲ. ಅವರ ಪೈಕಿ ಯಾರು ತಮ್ಮ ವೈಯಕ್ತಿಕ ಒಳಿತುಗಳಿಂದ ಮುಂದೆ ಸಾಗುತ್ತಾರೋ ಅಂತಹ ಜನರೇ ಶ್ರೇಷ್ಠರಾಗಿದ್ದಾರೆ.

ಹೇ ಮುಸ್ಲಿಮರೇ, ಅಜ್ಞಾನ ಕಾಲದಲ್ಲಿ ನಿಮ್ಮಲ್ಲಿದ್ದ ಅನಾವಶ್ಯಕ ಅಹಂಭಾವ, ತಂದೆ ತಾತಂದಿರ ಕಾರಣದಿಂದ ಅನಾವಶ್ಯಕ ಹೆಮ್ಮೆ ಮೊದಲಾದವುಗಳನ್ನು ಸತ್ಯವಿಶ್ವಾಸದ ಮೂಲಕ ನಿಮ್ಮಿಂದ ಅಲ್ಲಾಹನು ದೂರಸರಿಸಿದ್ದಾನೆ...... ನೀವು ನೆನಪಿನಲ್ಲಿರಿಸಿರಿ. ನೀವು ಆದಮರ ಸಂತಾನಕ್ಕೆ ಸೇರಿದವರಾಗಿರುವಿರಿ. ಆದಮ್‌ರನ್ನು ಮಣ್ಣಿನಿಂದ ಸೃಷ್ಟಿಸಲಾಯಿತು.

ಪುನಃ ಹೇಳಿದರು: ಲೋಕದ ಜನರು ಖನಿಜಗಳ ಹಾಗಿದ್ದಾರೆ. ಒಂದೇ ರೀತಿಯ ಮಣ್ಣಿನ ಅಡಿಯಲ್ಲಿ ದಬಾಯಿಸಲ್ಪಟ್ಟ ವಿವಿಧ ಬಣ್ಣ ಮತ್ತು ಗುಣಗಳನ್ನು ಖನಿಜಗಳು ಹೊಂದುತ್ತದೆ. ನೀವು ಆಲಿಸಿರಿ, ಬುದ್ಧಿ, ವಿವೇಕ, ಔದಾರ್ಯ, ಶೌರ್ಯ, ಶಕ್ತಿ, ಪ್ರಭಾವ ಮೊದಲಾದ ಶ್ರೇಷ್ಠ ಗುಣಗಳು ಇಸ್ಲಾಮಿನ ಮೊದಲು ಅಜ್ಞಾನ ಕಾಲದಲ್ಲಿ ಶ್ರೇಷ್ಠತೆಯ ಹೆಗ್ಗುರುತುಗಳಾಗಿದ್ದು ಹಾಗೆಯೇ ಈಗಲೂ ಅವು ಹಾಗೆಯೇ ಇದೆ. ಅಜ್ಞಾನ ಕಾಲದಲ್ಲಿ ಯಾವ ಜನರು ಈ ಗುಣಗಳ ಕಾರಣದಿಂದ ದೊಡ್ಡವರೆಂದು ಗಣಿಸಲ್ಪಟ್ಟಿದ್ದರೋ ಇಸ್ಲಾಮ್‌ನಲ್ಲೂ ಅಂತಹ ಗುಣಶಾಲಿಗಳನ್ನು ಹೊಂದಿದವರು ದೊಡ್ಡವರೆಂದು ಗಣಿಸಲ್ಪಡುವರು. ಆದರೆ ಒಂದು ಶರತ್ತು ಇದೆ. ಧಾರ್ಮಿಕ ಜ್ಞಾನ ಗಳಿಸಬೇಕು ಮತ್ತು ವೈಯಕ್ತಿಕವಾಗಿ ಒಳಿತನ್ನು ಮಾಡುವವರಾಗಿರಬೇಕು.

ಪುನಃ ಹೇಳಿದರು: ಹೇ ಜನರೇ, ನಿಮ್ಮ ಪತ್ನಿಯರಿಗೆ ಸಂಬಂಧಿಸಿ ನಿಮಗೆ ಹಕ್ಕುಗಳಿವೆ. ನಿಮ್ಮ ಪತ್ನಿಯರಿಗೂ ನಿಮಗೆ ಸಂಬಂಧಿಸಿ ಹಕ್ಕುಗಳಿವೆ. ನಿಮ್ಮ ಪತ್ನಿಯರಿಗೆ ಸಂಬಂಧಿಸಿ ನಿಮಗಿರುವ ಹಕ್ಕು ಇದಾಗಿದೆ. ಅವರು ಪತಿವ್ರತೆಯರಾಗಿ ಪರಿಶುದ್ಧ ಜೀವನ ನಡೆಸಬೇಕು. ನೀವು ನಿಮ್ಮ ಸ್ಥಿತಿಗೆ ಅನುಸಾರವಾಗಿ ಅವರ ಪೋಷಾಕು, ಆಹಾರ ಮೊದಲಾದವುಗಳ ವ್ಯವಸ್ಥೆ ಮಾಡಬೇಕು. ನೀವು ನೆನಪಿಡಿರಿ ನೀವು ನಿಮ್ಮ ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸಬೇಕು. ಏಕೆಂದರೆ ಅಲ್ಲಾಹನು ಅವರ ಮೇಲ್ವಿಚಾರಣೆ ನಿಮ್ಮ ಸುಪರ್ದಿಗೆ ವಹಿಸಿಕೊಟ್ಟಿದ್ದಾನೆ. ನೀವು ಅವರನ್ನು ವಿವಾಹವಾದಾಗ ಅಲ್ಲಾಹನು ನಿಮ್ಮನ್ನು ಅವರ ಹಕ್ಕುಗಳಿಗೆ ಖಾತರಿ ನೀಡುವವರನ್ನಾಗಿ ಮಾಡಿದ್ದಾನೆ. ಅಲ್ಲಾಹನ ನಿಯಮಗಳಿಗೆ ಅನುಸಾರವಾಗಿ ನೀವು ಅವರನ್ನು ನಿಮ್ಮ ಮನೆಗೆ ತಂದಿರುವಿರಿ. ಆದುದರಿಂದ ಅಲ್ಲಾಹನು ವಹಿಸಿಕೊಟ್ಟ ಖಾತರಿಯನ್ನು ಹೀನೈಸಬಾರದು. ಮಹಿಳೆಯರ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಯಾವಾಗಲೂ ಲಕ್ಷ್ಯ ನೀಡಬೇಕು.

ಹೇ ಜನರೇ, ನಿಮ್ಮ ಸ್ವಾಧೀನದಲ್ಲಿ ಕೆಲವು ಯುದ್ಧ ಕೈದಿಗಳು ಬಾಕಿಯಾಗಿ ಉಳಿದಿದ್ದರೆ ನೀವು ಏನನ್ನು ತಿನ್ನುತ್ತಿರುವಿರೋ ಅದನ್ನೇ ಅವರಿಗೆ ಆಹಾರವಾಗಿ ನೀಡಿರಿ. ನೀವು ಧರಿಸುವಂತಹ ಬಟ್ಟೆಗಳನ್ನು ಅವರಿಗೂ ಧರಿಸಲು ನೀಡಬೇಕು. ಅವರು ಏನಾದರೂ ತಪ್ಪು ಮಾಡಿದರೆ ಅದನ್ನು ಕ್ಷಮಿಸಲು ನಿಮಗೆ ಸಾಧ್ಯವಿಲ್ಲವಾದರೆ ನೀವು ಅವರನ್ನು ಬೇರೊಬ್ಬರಿಗೆ ವಹಿಸಿಕೊಡಿರಿ. ಏಕೆಂದರೆ ಅವರು ಅಲ್ಲಾಹನ ದಾಸರಾಗಿದ್ದಾರೆ. ಅವರಿಗೆ ಕಷ್ಟಕೊಡುವುದು ಯಾವ ರೀತಿಯಲ್ಲಿ ಧರ್ಮಬದ್ಧವಲ್ಲ.

ಪುನಃ ಹೇಳಿದರು: ಹೇ ಜನರೇ, ಒಬ್ಬ ಮುಸ್ಲಿಮ್ ಇನ್ನೊಬ್ಬ ಮುಸ್ಲಿಮನ ಸಹೋದರನಾಗಿದ್ದಾನೆ. ಎಲ್ಲರೂ ಒಂದೇ ಅಂತಸ್ಥಿನವರಾಗಬೇಕು. ನೀವು ಯಾವ ಕೋಮಿಗೆ ಸೇರಿದವರಾಗಿದ್ದರೂ ಯಾವ ಸ್ಥಾನದಲ್ಲಿದ್ದರೂ ಮನುಷ್ಯರೆಂಬ ನೆಲೆಯಲ್ಲಿ ಒಂದೇ ರೀತಿಯ ಪದವಿ ಹೊಂದಿರುವಿರಿ.

ಹೀಗೆ ಹೇಳುವಾಗ ಹಝ್ರತ್ ಪೈಗಂಬರರು(ಸ) ಎರಡು ಕೈಗಳನ್ನು ಎತ್ತಿ ಎರಡು ಕೈಗಳ ಬೆರಳುಗಳನ್ನು ಜೊತೆ ಸೇರಿಸಿ ಹೇಳಿದರು: ಎರಡು ಕೈಗಳ ಬೆರಳುಗಳು ಪರಸ್ಪರ ಸಮವಾಗಿರುವ ಹಾಗೆ ಮಾನವರಾದ ನೀವು ಸಮಾನರಾಗಿರುವಿರಿ. ನೀವು ಪರಸ್ಪರ ಒಬ್ಬರಿಗಿಂತ ಇನ್ನೊಬ್ಬರು ಶ್ರೇಷ್ಠರೆಂದು ಹೇಳುವ ಅಧಿಕಾರ ನಿಮಗಿಲ್ಲ. ನೀವು ಪರಸ್ಪರ ಸಹೋದರರ ಹಾಗೆ ಇರುವಿರಿ.

ಅನಂತರ ಹೇಳಿದರು: ಇದು ಯಾವ ತಿಂಗಳೆಂದು ನಿಮಗೆ ತಿಳಿದಿದೆಯೇ, ಇದು ಯಾವ ಪ್ರದೇಶ ಎಂದು ನಿಮಗೆ ತಿಳಿದಿದೆಯೇ? ಇದು ಯಾವ ದಿನವೆಂದು ನಿಮಗೆ ತಿಳಿದಿದೆಯೇ? ಜನರು ಹೇಳಿದರು: ಹೌದು ತಿಳಿದಿದೆ. ಇದು ಪವಿತ್ರ ತಿಂಗಳಾಗಿದೆ. ಪವಿತ್ರ ಪ್ರದೇಶವಾಗಿದೆ. ಇದು ಹಜ್ಜ್ ದಿನವಾಗಿದೆ. ಪ್ರತಿಯೊಂದು ಉತ್ತರ ದೊರೆಯುವಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳುತ್ತಿದ್ದರು: ಯಾವ ರೀತಿ ಈ ತಿಂಗಳು ಪವಿತ್ರವಾಗಿದೆಯೋ ಈ ಪ್ರದೇಶ ಪವಿತ್ರವಾಗಿದೆಯೋ ಈ ದಿನ ಪವಿತ್ರವಾಗಿದೆಯೋ ಇದೇ ರೀತಿ ಅಲ್ಲಾಹನು ಪ್ರತಿಯೊಬ್ಬನ ಜೀವವನ್ನು ಮತ್ತು ಸಂಪತ್ತನ್ನು ಪವಿತ್ರವನ್ನಾಗಿ ಮಾಡಿದ್ದಾನೆ. ಈ ಆಜ್ಞೆ ಈ ದಿನಕ್ಕೋಸ್ಕರವಲ್ಲ. ನಾಳೆಗೋಸ್ಕರವಲ್ಲ. ನೀವು ದೇವನನ್ನು ಭೇಟಿಯಾಗುವ ತನಕ ಜಾರಿಯಲ್ಲಿರುವುದಾಗಿದೆ.

ಅನಂತರ ಹೇಳಿದರು: ನಾನು ಈ ದಿನ ಹೇಳಿದ ಮಾತುಗಳನ್ನು ಲೋಕದ ಎಲ್ಲೆಗಳ ತನಕ ತಲಪಿಸಿರಿ. ಏಕೆಂದರೆ ಯಾರು ಈ ದಿನ ಆಲಿಸುತ್ತಿರುವಿರೋ ಅವರಿಗಿಂತ ಅದನ್ನು ಈಗ ಆಲಿಸದೆ ಇರುವವರು ಅನುಷ್ಠಾನಕ್ಕೆ ತರುವವರಾಗುವ ಸಾಧ್ಯತೆಗಳಿವೆ. (ಬುಖಾರಿ).

ವಿವಿಧ ವರದಿಗಳಿಂದ ವಿವಿಧ ಶಬ್ದಗಳಲ್ಲಿ ಈ ಖುತ್‌ಬಗಳು ನಮಗೆ ತಲಪಿದೆ. ಒಂದು ಹದೀಸು ವರದಿ ಹೀಗಿದೆ: ಹಝ್ರತ್ ಪೈಗಂಬರರು(ಸ) ಇದು ಯಾವ ತಿಂಗಳು ಎಂದು ಕೇಳಿದಾಗ ಸಹಾಬರು ಹೇಳಿದರು: ಅಲ್ಲಾಹನು ಮತ್ತು ಅವನ ರಸೂಲರು ಅದರ ಬಗ್ಗೆ ನಮಗಿಂತ ಚೆನ್ನಾಗಿ ತಿಳಿದವರಾಗಿದ್ದಾರೆ. ನಾವು ಯೋಚಿಸಿದೆವು ಪ್ರಾಯಶಃ ತಾವು ಈ ತಿಂಗಳಿಗೆ ಹೊಸ ಹೆಸರು ಇರಿಸಬಹುದೆಂದು. ಆಗ ಹಝ್ರತ್ ಪೈಗಂಬರ್(ಸ) ಸ್ವತಃ ಹೇಳಿದರು: ಏನು ಇದು ಪವಿತ್ರ ತಿಂಗಳು ಅಲ್ಲವೇ?

ಈ ಚಾರಿತ್ರಿಕ ಭಾಷಣದಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಪದೇಶಿಸಿದ ಮಹತ್ವಪೂರ್ಣವಾದ ಮಾರ್ಗಸೂಚಿಗಳನ್ನು ಮುಂದಿನ ಪೀಳಿಗೆಗೆ ತಲಪಿಸುವ ಆಜ್ಞೆ ನೀಡಿದ್ದಾರೆ. ಈ ಮಾರ್ಗಸೂಚಿಗಳು ಯಾವುದಾದರೂ ಪ್ರದೇಶ ಅಥವಾ ಯಾವುದಾದರೂ ಕಾಲಕ್ಕೆ ಮಾತ್ರ ಅನ್ವಯಿಸುವಂತಹದಲ್ಲ ಅವು ಖಿಯಾಮತ್ ತನಕ ಬರಲಿರುವ ಪೀಳಿಗೆಗಳಿಗೆ ಮಾರ್ಗದರ್ಶಕ ತತ್ವಗಳಾಗಿವೆ. ಅವುಗಳ ಸಂಕ್ಷಿಪ್ತ ರೂಪ ಹೀಗಿದೆ:

1. ಎಲ್ಲದಕ್ಕಿಂತಲೂ ಮೊದಲು ಎಲ್ಲ ಮನುಷ್ಯರು ಈ ತತ್ವವನ್ನು ದೃಷ್ಟಿಯಲ್ಲಿರಿಸಬೇಕು. ಎಲ್ಲ ಮನುಷ್ಯರು ಒಂದೇ ತಳಿಯ ಸೃಷ್ಟಿಗಳಾಗಿದ್ದಾರೆ. ಒಬ್ಬನೇ ಪಿತನ ಮಕ್ಕಳಾಗಿದ್ದಾರೆ. ಒಂದೇ ಮರದ ಕೊಂಬೆಗಳಾಗಿದ್ದಾರೆ. ಆದುದರಿಂದ ಎಲ್ಲ ಮನುಷ್ಯರು ಮಾನವರೆಂಬ ನೆಲೆಯಲ್ಲಿ ಸಮಾನರಾಗಿದ್ದಾರೆ.

2. ಮನುಷ್ಯರೆಲ್ಲರೂ ಸಮಾನರಾಗಿದ್ದರೂ ಭೂಮಿಯಿಂದ ವಿವಿಧ ಖನಿಜ ಪದಾರ್ಥಗಳು ಹೊರಬರುವ ಹಾಗೆ, ಕಲ್ಲಿದ್ದಲು, ಕಬ್ಬಿಣ, ತಾಮ್ರ, ಚಿನ್ನ ಹೊರಬರುವ ಹಾಗೆ ಮನುಷ್ಯರಲ್ಲಿಯೂ ವಿವಿಧ ರೀತಿಗಳ ಬೌದ್ಧಿಕ ಮತ್ತು ಶಾರೀರಿಕ ಸಾಮರ್ಥ್ಯಗಳು ಇರುತ್ತವೆ. ಅವರು ದುಡಿಮೆ ಮತ್ತು ಪ್ರಯತ್ನಗಳ ಮೂಲಕ ವಿವಿಧ ಗುಣಗಳನ್ನೂ ವೈಶಿಷ್ಟ್ಯತೆಗಳನ್ನೂ ತಮ್ಮಲ್ಲಿ ಹುಟ್ಟಿಸುತ್ತಾರೆ. ಆದರೆ ಈ ವೈಶಿಷ್ಟ್ಯಗಳ ಕಾರಣದಿಂದ ಯಾವುದೇ ಕೋಮು, ಯಾವುದೇ ವ್ಯಕ್ತಿ, ಯಾವುದೇ ಗೋತ್ರ, ಬೇರೆ ಕೋಮು, ಗೋತ್ರ ಮತ್ತು

ವ್ಯಕ್ತಿಗಿಂತ ಶ್ರೇಷ್ಠ ಎಂದು ಹೆಮ್ಮೆಪಟ್ಟುಕೊಂಡು ಅಹಂಕಾರದಿಂದ ವರ್ತಿಸಬಾರದು.

3. ಮುಸ್ಲಿಮರು ಒಬ್ಬ ಪೈಗಂಬರರ ಸಮುದಾಯವಾದುದರಿಂದ ಒಬ್ಬನೇ ಸಂದೇಶವಾಹಕರೊಂದಿಗೆ ಸಂಬಂಧ ಹೊಂದಿದವರಾದುದರಿಂದ ಒಬ್ಬನೇ ಆಧ್ಯಾತ್ಮಿಕ ಪಿತನ ಮಕ್ಕಳಾಗಿದ್ದಾರೆ. ಅವರು ಸಹೋದರರಾಗಿ ಜೀವಿಸಬೇಕಾಗಿದೆ. ಪವಿತ್ರ ಖುರ್‌ಆನ್ ಇದರ ಬಗ್ಗೆ ಹೀಗೆ ಹೇಳಿದೆ:

**ಇನ್ನಮಲ್ ಮುಅ್‌ಮಿನೂನ ಇಖ್‌ವತುನ್** – ಸತ್ಯವಿಶ್ವಾಸಿಗಳು ಪರಸ್ಪರ ಸಹೋದರರಾಗಿದ್ದಾರೆ. (ಅಲ್‌ಹುಜುರಾತ್: 11).

4. ಸಮಾಜದಲ್ಲಿ ಕೆಲವು ಬಲಹೀನರು ಸಹ ಇರುತ್ತಾರೆ. ಅವರು ಐಶ್ವರ್ಯವಂತರ ಸೇವಕರಾಗಿ ಕೆಲಸ ಮಾಡುತ್ತಾರೆ. ಯುದ್ಧಗಳಲ್ಲಿ ಜಯಶಾಲಿಗಳಾದವರ ಸ್ವಾಧೀನಕ್ಕೆ ಸೋತವರು ಬಂಧಿಗಳಾಗಿ ಬರುತ್ತಾರೆ. ಇಂತಹ ಜನರ ಬಗ್ಗೆ ಹಝ್ರತ್ ಪೈಗಂಬರ್(ಸ) ನೀಡಿದ ಆಜ್ಞೆಗಳ ಬಗ್ಗೆ ಹೇಳುವುದಾದರೆ ಇಂದಿನ ಸುಸಂಸ್ಕೃತ ಲೋಕ ಅವುಗಳನ್ನು ಅನುಷ್ಠಾನಕ್ಕೆ ತರುವ ವಿಷಯ ಬಿಡಿರಿ ಅದರ ಬಗ್ಗೆ ಆಶ್ಚರ್ಯಚಕಿತರಾಗಿ ಅವುಗಳನ್ನು ನೋಡುತ್ತಾರೆ ಮತ್ತು ಆಲಿಸುತ್ತಾರೆ. ಗುಲಾಮರೂ ಕೈದಿಗಳೂ ಅವರ ಮಾಲಿಕರಿಗೆ ಸಮಾನರೆಂದು ಸೂಚಿಸಲಾಗಿದೆ. ಗುಲಾಮರೂ ಕೈದಿಗಳೂ ಮನುಷ್ಯರೇ ಆಗಿರುವುದರಿಂದ ಅವರ ಆಹಾರ ಮತ್ತು ಬಟ್ಟೆಗಳ ಬಗ್ಗೆ ಶ್ರದ್ಧೆ ವಹಿಸಲು ಮತ್ತು ಅವರ ಶಕ್ತಿಗೆ ಮೀರಿದ ಸೇವೆ ಅವರಿಂದ ಪಡೆಯುವುದನ್ನು ಪಡೆಯಬಾರದೆಂದು ತಾಕೀತು ಮಾಡಲಾಗಿದೆ.

5. ಇಂದಿನ ಕಾಲದಲ್ಲಿ ಪುರುಷರು ಮತ್ತು ಮಹಿಳೆಯರ ಸಮಾನತೆ ಬಗ್ಗೆ ಚರ್ಚೆ ಮಾಡಲಾಗುತ್ತಿದೆ. ದಿನಂಪ್ರತಿ ಇಸ್ಲಾಮ್ ವಿರುದ್ಧ ಹೀಗೆ ಆಕ್ಷೇಪಿಸಲಾಗುತ್ತಿದೆ. ಇಸ್ಲಾಮ್ ಮಹಿಳೆಯರನ್ನು ಪುರುಷರಿಗಿಂತ ಕೀಳೆಂದು ಪರಿಗಣಿಸಿ ಅವರ ಸ್ವಾತಂತ್ರ್ಯವನ್ನು ಕಿತ್ತುಕೊಂಡಿದೆ. ಹಿಜಾಬ್ ಮತ್ತು ಮನೆಗಳಲ್ಲಿ ಬಂಧಿಸಲಾಗಿದೆ. ಇತ್ಯಾದಿ.

ಹಝ್ರತ್ ಪೈಗಂಬರರು(ಸ) ತನ್ನ ಖುತ್‌ಬದಲ್ಲಿ ಮಹಿಳೆಯರ ಮೇಲ್ವಿಚಾರಣೆ ಮತ್ತು ಅವರ ಹಕ್ಕುಗಳನ್ನು ಈಡೇರಿಸಿಕೊಡುವ ಬಗ್ಗೆ ವಿಶಿಷ್ಟವಾಗಿ ಒತ್ತಿ ಹೇಳಿದ್ದಾರೆ. ಪವಿತ್ರ ಖುರ್‌ಆನ್ ಪುರುಷರ ಮತ್ತು ಮಹಿಳೆಯರ ಶಾರೀರಿಕ ವ್ಯತ್ಯಾಸಗಳನ್ನು ಗಮನದಲ್ಲಿರಿಸಿ ಮಹಿಳೆಯರಿಗೆ ಎಷ್ಟು ಗೌರವ ನೀಡಿದೆ ಮತ್ತು ಅವರ ಹಕ್ಕುಗಳನ್ನು ಭಾವನೆಗಳನ್ನು ಸಂರಕ್ಷಿಸಿದೆ. ಎಂದರೆ ಲೋಕದ ಯಾವುದೇ ಸಮಾಜ ಮತ್ತು ಯಾವುದೇ ಧರ್ಮ ಅದಕ್ಕೆ ಸಮಾನವಾದ ಉದಾಹರಣೆಯನ್ನು ಮುಂದಿರಿಸಲಾರದು. ಇದೊಂದು ಪ್ರತ್ಯೇಕವಾದ ವಿಷಯವಾಗಿದೆ. ಅದರ ಬಗ್ಗೆ ಪೂರ್ಣವಾಗಿ ವಿವರಿಸಲು ಈಗ ಸಮಯವಿಲ್ಲ.

ಬಹುಮಾನ್ಯ ಶ್ರೋತೃಗಳೇ, ವಾಸ್ತವಿಕ ಸಮಸ್ಯೆ ಏನೆಂದರೆ ಮಾನವರ ಸಮಾನತೆ ಸ್ಥಾಪಿಸುವ ವಾದಗಳನ್ನು ಮಾಡಲಾಗುತ್ತಿದೆ. ಆದರೆ ಯಾವ ವಿಷಯಗಳಲ್ಲಿ ಸಮಾನತೆ ಸ್ಥಾಪಿಸಬೇಕಾಗಿದೆ ಎನ್ನುವುದನ್ನು ನೋಡುವುದೇ ಇಲ್ಲ. ಮನುಷ್ಯನೆಂಬ ನೆಲೆಯಲ್ಲಿ ಎಲ್ಲರೂ ಸಮಾನರಾಗಿದ್ದಾರೆ. ಪ್ರತಿಯೊಬ್ಬ ಮನುಷ್ಯನಿಗೆ ಎರಡು ಕಣ್ಣುಗಳು, ಎರಡು ಕಿವಿಗಳು, ಎರಡು ಕೈಗಳು, ಎರಡು ಕಾಲುಗಳು, ನಾಲಗೆ, ಮೂಗು, ಹೃದಯ, ಮಸ್ತಿಷ್ಕ ಮೊದಲಾದವುಗಳನ್ನು ಸೃಷ್ಟಿಕರ್ತನು ನೀಡಿದ್ದಾನೆ. ಆದರೆ ಕೆಲವು ಅಂಗವಿಕಲರು ಇದಕ್ಕೆ ಹೊರತಾಗಿದ್ದಾರೆ.

ಈ ಮನುಷ್ಯರ ಹಕ್ಕುಗಳನ್ನು ಈಡೇರಿಸುವುದಕ್ಕೆ ಸಂಬಂಧಿಸಿ ಸಮಾನತೆ ಸ್ಥಾಪಿಸುವುದು ಮೂಲಭೂತ ಹೊಣೆಗಾರಿಕೆ ಆಗಿದೆ. ಇದಕ್ಕೆ ಸಂಬಂಧಿಸಿ ನೆನಪಿನಲ್ಲಿಡಬೇಕಾದುದು ಏನೆಂದರೆ ಮನುಷ್ಯರ ಹಕ್ಕುಗಳು ಎರಡು ರೀತಿಯವುಗಳಾಗಿವೆ.

1. ಕೆಲವು ಹಕ್ಕುಗಳನ್ನು ಈಡೇರಿಸಿಕೊಡುವ ಹೊಣೆಗಾರಿಕೆ ಸರಕಾರಕ್ಕಿರುತ್ತದೆ. ಇದಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ: **ಇನ್ನಲಕ ಅಲ್ಲಾ ತಜೂಅ ಫೀಹಾ ವಲಾ ತಅ್‌ರಾ ವ ಅನ್ನಕ ಲಾ ತಝ್‌ಮಉ ಫೀಹಾ ವಲಾ ತಝ್‌ಹಾ** ಇಲ್ಲಿ ನಿನಗೆ ಹಸಿವೆ ಮತ್ತು ನಗ್ನತೆಯ ಬಾಧೆ ತಟ್ಟದು. ಬಾಯಾರಿಕೆ ಮತ್ತು ಬಿಸಿಲ ಬೇಗೆಗೆ ಕೂಡಾ ನೀನು ತುತ್ತಾಗಲಾರೆ. (ತಾಹಾ: 119, 120).

ಶಾಂತಿಭರಿತ ಸಮಾಜದ ಚಿಹ್ನೆ ಇದಾಗಿದೆ. ಹೇ ಮನುಷ್ಯ ನೀನು ಅದರಲ್ಲಿ ಹಸಿವೆಯಿಂದ ಬಳಲಲಾರೆ ಮತ್ತು ಆವಶ್ಯಕ ಬಟ್ಟೆಗಳಿಂದ ವಂಚಿತನಾಗಲಾರೆ. ನೀನು ಶೈತ್ಯದಿಂದ ನಡುಗಲಾರೆ ಮತ್ತು ದಾಹಬಾಧೆಗೆ ತುತ್ತಾಗಲಾರೆ. ಬಿಸಿಲ ಬೇಗೆಯಲ್ಲಿ ಛಾವಣಿಯ ಆಶ್ರಯ ಪಡೆಯದೆ ಬಿಸಿಲ ಬೇಗೆಗೆ ಪಾತ್ರನಾಗಲಾರೆ.

ಸರಕಾರದ ಮೂಲಭೂತ ಹೊಣೆಗಾರಿಕೆ ಏನೆಂದರೆ ದೇಶ ಮತ್ತು ಜನರ ಪೈಕಿ ಪ್ರತಿಯೊಬ್ಬನು ಕನಿಷ್ಠ ಆವಶ್ಯಕತೆಗಳ ಕೊರತೆಯಿಂದ ಕಷ್ಟವನ್ನು ಅನುಭವಿಸದಂತಹ ವ್ಯವಸ್ಥೆಯನ್ನು ಮಾಡಬೇಕು. ಇದೇ ರೀತಿ ನ್ಯಾಯಪಾಲನೆ ಮಾಡುವುದು, ಹುದ್ದೆಗಳಿಗೆ ಸಾಮರ್ಥ್ಯವುಳ್ಳವರನ್ನು ನೇಮಿಸುವುದು. ತೆರಿಗೆಗಳ ಮೂಲಕ ಸಂಗ್ರಹಿಸಿದ ಸಂಪತ್ತನ್ನು ಸರಿಯಾದ ರೀತಿಯಲ್ಲಿ ಹಂಚುವ ವ್ಯವಸ್ಥೆ ಮಾಡುವುದು ಮೊದಲಾದವು ಸರಕಾರದ ಹೊಣೆಗಾರಿಕೆಗಳಲ್ಲಿ ಸೇರಿವೆ.

2. ಇನ್ನೊಂದು ವಿವಿಧ ಹಕ್ಕುಗಳು ಪ್ರಕೃತಿ ಸಹಜವಾಗಿ ಮನುಷ್ಯರಿಗೆ ದೊರಕುವವುಗಳಾಗಿವೆ. ಶಾರೀರಿಕ ಶಕ್ತಿಗಳು, ಬೌದ್ಧಿಕ ಶಕ್ತಿಗಳು ಮತ್ತು ವ್ಯಯಕ್ತಿಕ ಪ್ರಯತ್ನ ಮತ್ತು ಪರಿಶ್ರಮದಿಂದ ಗಳಿಸುವ ಹಕ್ಕುಗಳು ಅವುಗಳಾಗಿವೆ.

ಇಸ್ಲಾಮ್ ವ್ಯಯಕ್ತಿಕ ಹಕ್ಕುಗಳಲ್ಲಿ ಯೋಗ್ಯವಾದ ರೀತಿಯಲ್ಲಿ ಹಸ್ತಕ್ಷೇಪ ಮಾಡಿ ವಿವಿಧ ವ್ಯಕ್ತಿಗಳ ಮತ್ತು ವಿವಿಧ ವರ್ಗಗಳ ವ್ಯತ್ಯಾಸಗಳನ್ನು ಸಮತೋಲನ ಗೊಳಿಸಲು ಪ್ರಯತ್ನಿಸಿದೆ. ಆದರೆ ಕಮ್ಯೂನಿಸ್ಟ್ ಪದ್ಧತಿಯ ಹಾಗೆ ಬಲಾತ್ಕಾರದಿಂದ ಎಲ್ಲ ವ್ಯತ್ಯಾಸಗಳನ್ನು ಅಳಿಸಿ ಬಿಡುವ ವಿಧಾನವನ್ನು ಇಸ್ಲಾಮ್ ಅವಲಂಬಿಸುವುದಿಲ್ಲ. ಕಮ್ಯೂನಿಸ್ಟ್ ಪದ್ಧತಿಯಲ್ಲಿ ವೈಯಕ್ತಿಕ ಸಾಮರ್ಥ್ಯಗಳನ್ನು ನಿರರ್ಥಕವಾಗಿರಿಸಲಾಗುತ್ತಿದೆ. ವಾಸ್ತವಿಕವಾಗಿ ಇಂತ ವ್ಯತ್ಯಾಸಗಳನ್ನು ಅಳಿಸಿ ಬಿಡಲು ಸಹ ಸಾಧ್ಯವಿಲ್ಲ. ಉದಾಹರಣೆಗೆ ಶಾರೀರಿಕ ಶಕ್ತಿ ಸಾಮರ್ಥ್ಯಗಳ ವ್ಯತ್ಯಾಸವನ್ನು ಅಳಿಸಿಬಿಡಲು ಯಾರಿಗೆ ಸಾಧ್ಯವಿದೆ. ಬೌದ್ಧಿಕ ಶಕ್ತಿಗಳ ವ್ಯತ್ಯಾಸವನ್ನು ಅಳಿಸಿ ಹಾಕಲು ಯಾರಿಗೆ ಸಾಧ್ಯವಿದೆ. ಮನುಷ್ಯರ ವ್ಯಯಕ್ತಿಕ ಸಾಮರ್ಥ್ಯಗಳನ್ನು ನೆಲೆನಿಲ್ಲಿಸಿ ತಮ್ಮ ಸಹ ಜೀವಿಗಳಿಗೋಸ್ಕರ ತ್ಯಾಗ ಮಾಡುವ ಮನೋಭಾವವನ್ನು ಉತ್ತೇಜಿಸಬಹುದಾಗಿದೆ. ಅದಕ್ಕೋಸ್ಕರ ಇಸ್ಲಾಮ್ ವಿವಿಧ ರೀತಿಯ ಜಾಣ್ಮೆಭರಿತ ಮಾರ್ಗಗಳನ್ನು ವಿವರಿಸಿದೆ. ಅವುಗಳನ್ನು ಅನುಷ್ಠಾನಕ್ಕೆ ತಂದು ವ್ಯಯಕ್ತಿಕ ಶಕ್ತಿಸಾಮರ್ಥ್ಯಗಳನ್ನು ನಷ್ಟಪಡಿಸದೆ ಸಮಾಜದಲ್ಲಿ ಸಾಮೂಹಿಕ ಸೌಖ್ಯದ ಸಮಾನತೆ ಸ್ಥಾಪಿಸಬಹುದಾಗಿದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವನ ಚರಿತ್ರೆಯಿಂದ ಮಾನವರ ಸಮಾನತೆಗೆ ಸಂಬಂಧಿಸಿ ಕೆಲವು ಉದಾಹರಣೆಗಳನ್ನು ಸಮಯ ಮಿತಿಗನುಸಾರವಾಗಿ ವಿವರಿಸುತ್ತೇನೆ.

ಮಾನವರ ಸಮಾನತೆ ಬಗ್ಗೆ ಪ್ರತಿಪಾದಿಸುವವರು ಸಹ ತಿಳಿದುಕೊಂಡ ವಿಷಯವೇನೆಂದರೆ ಇಂದಿನ ಸುಸಂಸ್ಕೃತ ಸಮಾಜ ವ್ಯವಸ್ಥೆಯಲ್ಲಿ ಸಹ ಬಡವರು ಎಷ್ಟು ಬಲಹೀನರೂ ಕಡೆಗಣಿಸಲ್ಪಟ್ಟವರೂ ಆಗಿದ್ದಾರೆಂದರೆ ಅವರು ತಮ್ಮ ಹತ್ತಿರ ಕುಳಿತುಕೊಳ್ಳುವುದನ್ನು ಸಹ ಇಷ್ಟಪಡುವುದಿಲ್ಲ. ಅವರೊಂದಿಗೆ ನಡೆಯುವುದು ಸಹ ತಮಗೆ ಅಪಮಾನಕರ ಎಂದು ಭಾವಿಸುತ್ತಾರೆ. ಆದರೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವೈಭವ ಅನನ್ಯವಾಗಿದೆ. ಅವರು ಹೀಗೆ ಪ್ರಾರ್ಥಿಸುತ್ತಿದ್ದರು: ಹೇ ಅಲ್ಲಾಹ್ ನನ್ನನ್ನು ಬಡವನಾಗಿ ಜೀವಿಸುವಂತೆ ಮಾಡು. ಮತ್ತು ಬಡವನಾಗಿರುವ ಸ್ಥಿತಿಯಲ್ಲಿಯೇ ಮೃತಪಡಿಸು. (ತಿರ್ಮಿಧಿ).

ಹಝ್ರತ್ ಅನಸ್ ವರದಿ ಮಾಡುತ್ತಾರೆ: ಒಬ್ಬ ಗ್ರಾಮ ನಿವಾಸಿಯ ಹೆಸರು ಝಾಹಿರ್ ಎಂದಾಗಿತ್ತು. ಅವನ ಮುಖಚಹರೆ ಸುಂದರವಾಗಿರಲಿಲ್ಲ. ಅವನು ಒಮ್ಮೆ ಪೇಟೆಯಲ್ಲಿ ತನ್ನ ಸಾಮಗ್ರಿ ಮಾರಾಟ ಮಾಡುತ್ತಿದ್ದನು. ಅವನು ಬೆವರು ಸುರಿಸುತ್ತಾ ಇದ್ದನು. ಆಗ ಹಝ್ರತ್ ಪೈಗಂಬರ್(ಸ) ಅವನ ಬೆನ್ನ ಹಿಂದೆ ಬಂದು ಅವನ ಕಣ್ಣುಗಳನ್ನು ತನ್ನ ಕೈಗಳಿಂದ ಮುಚ್ಚಿದರು. ಆ ಕೈಗಳನ್ನು ಸ್ಪರ್ಶಿಸಿದಾಗ ಅದು ಹಝ್ರತ್ ಪೈಗಂಬರರ(ಸ) ಕೈಗಳೆಂದು ಅವನಿಗೆ ತಿಳಿಯಿತು. ಆಗ ಅವನು ಸಂತೋಷಭರಿತನಾಗಿ ತನ್ನ ಬೆನ್ನನ್ನು ಹಝ್ರತ್ ಪೈಗಂಬರರ ದೇಹಕ್ಕೆ ಒರೆಸಲು ತೊಡಗಿದನು. ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ಈ ಗುಲಾಮನನ್ನು ಯಾರು ಖರೀದಿಸುವರು. ಆಗ ಝಾಹಿರ್ ಹೇಳಿದರು: ನನ್ನನ್ನು ಯಾರು ಖರೀದಿಸುವರು. ಏಕೆಂದರೆ ನಾನು ನಿರರ್ಥಕ ಸಾಮಗ್ರಿ ಆಗಿದ್ದೇನೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನ ಸನ್ನಿಧಿಯಲ್ಲಿ ನಿನಗೆ ಬಹಳ ಬೆಲೆ ಇದೆ. ನೀನು ನಿರರ್ಥಕ ಸಾಮಗ್ರಿ ಅಲ್ಲ. (ಮುಸ್‌ನದ್ ಅಹ್ಮದ್ ಬಿನ್ ಹಂಬಲ್).

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬಡವರನ್ನು ಔತಣಕೂಟಗಳಿಗೆ ಆಹ್ವಾನಿಸಬೇಕೆಂದು ಬಹಳ ಒತ್ತಾಯಿಸುತ್ತಿದ್ದರು. ಅವರು ಹೀಗೆ ಹೇಳಿದ್ದರು: ಕೇವಲ ಶ್ರೀಮಂತರನ್ನು ಆಹ್ವಾನಿಸಿ ಬಡವರನ್ನು ಆಹ್ವಾನಿಸದ ಔತಣಕೂಟ ಬಹಳ ಕೆಟ್ಟ ಔತಣಕೂಟವಾಗಿದೆ. (ಬುಖಾರಿ).

ಹಝ್ರತ್ ಖದೀಜ(ರ)ರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಿವಾಹವಾದಾಗ ಆ ಶ್ರೀಮಂತ ಮಹಿಳೆ ತನ್ನ ಸಂಪತ್ತನ್ನೂ ಗುಲಾಮರನ್ನೂ ಹಝ್ರತ್ ಪೈಗಂಬರರಿಗೆ ನೀಡಿದರು. ಎಲ್ಲ ಗುಲಾಮರನ್ನು ಸ್ವತಂತ್ರರನ್ನಾಗಿ ಮಾಡಿ ಒಬ್ಬ ಬುದ್ಧಿಶಾಲಿಯಾಗಿದ್ದ ವಿಮೋಚಿತ ವ್ಯಕ್ತಿಯನ್ನು ತನ್ನ ದತ್ತುಪುತ್ರನನ್ನಾಗಿ ಹಝ್ರತ್ ಪೈಗಂಬರ್(ಸ)

ಮಾಡಿದರು. ಆ ವ್ಯಕ್ತಿ ಝೈದ್ ಬಿನ್ ಮುಹಮ್ಮದ್ ಎಂದು ಕರೆಯಲ್ಪಟ್ಟನು. ಆದರೆ ದತ್ತುಪುತ್ರರಿಗೆ ಅವರ ಸ್ವಂತ ತಂದೆಯ ಹೆಸರಿನೊಂದಿಗೆ ಹೆಸರು ನೀಡಬೇಕೆಂದು ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನ ಆಜ್ಞೆ ಅವತೀರ್ಣವಾದಾಗ ಅವರು ಝೈದ್‌ಬಿನ್ ಹಾರಿಸ ಎಂದು ಕರೆಯಲ್ಪಟ್ಟರು. ಆದರೆ ಝೈದ್ ತನ್ನ ತಂದೆ ತಾಯಂದಿರ ಮನೆಗೆ ಹೋಗಲಿಲ್ಲ. ಅವರು ಹಝ್ರತ್ ಪೈಗಂಬರರ ಮನೆಯಲ್ಲಿರಲು ಇಷ್ಟಪಟ್ಟರು. ಅವರೊಂದಿಗೆ ಹಝ್ರತ್ ಪೈಗಂಬರ್ ಅವರ ಜೀವಿತಾದ್ಯಂತ ಪ್ರೀತಿ ವಾತ್ಸಲ್ಯದಿಂದ ವರ್ತಿಸುತ್ತಿದ್ದರು.

ಹಝ್ರತ್ ಝೈದ್‌ರ ಸಾಮರ್ಥ್ಯವನ್ನು ಗುರುತಿಸಿ ಅವರನ್ನು ಅನೇಕ ಸೇನಾದಳಗಳ ದಳಪತಿಯನ್ನಾಗಿ ಹಝ್ರತ್ ಪೈಗಂಬರ್(ಸ) ಮಾಡಿದ್ದರು. ಹಝ್ರತ್ ಝೈದ್ ಮೃತರಾದ ನಂತರ ಅವರ ಯುವಕನಾದ ಪುತ್ರ ಉಸಾಮರಿಗೆ ಎಷ್ಟು ಗೌರವ ನೀಡಿದರೆಂದರೆ ತನ್ನ ಜೀವಿತದ ಕೊನೆಯ ಭಾಗದಲ್ಲಿ ಸಿದ್ಧಪಡಿಸಲಾದ ಸೈನ್ಯದ ಸೇನಾನಾಯಕನಾಗಿ ಅವರನ್ನು ನೇಮಿಸಿದರು. ಆ ಸೈನ್ಯದಲ್ಲಿ ಹಲವು ಹಿರಿಯ ಸಹಾಬರು ಸಹ ಸೇರಿದ್ದರು.

ಸಮಾಜದ ಹಿಂದುಳಿದ ಜನರೊಂದಿಗೆ ಯಾವ ರೀತಿ ವರ್ತಿಸುತ್ತೇವೆ ಎನ್ನುವುದರ ಪ್ರಾಯೋಗಿಕ ರೀತಿಯ ಮೂಲಕ ನಾವು ಮಾನವೀಯತೆಗೆ ಹೇಗೆ ಗೌರವ ನೀಡುತ್ತೇವೆ ಮತ್ತು ಅರ್ಹತೆಯ ಆಧಾರದಲ್ಲಿ ಸೇವೆ ಮಾಡಲು ಸೌಲಭ್ಯ ನೀಡುತ್ತಿದ್ದೇವೆಂದು ಸ್ಪಷ್ಟವಾಗುತ್ತದೆ.

ಹಝ್ರತ್ ಪೈಗಂಬರರ ಮಾದರಿ ಅಭಿವೃದ್ಧಿ ಹೊಂದುತ್ತಿರುವ ಕೋಮುಗಳಿಗೆ ಸಹ ದಾರಿದೀಪವಾಗಿದೆ.

ಬಹುಮಾನ್ಯ ಶ್ರೋತೃಗಳೇ, ಮಾನವೀಯತೆ ಎಂದರೆ ಗೌರವಿಸಲ್ಪಡಬೇಕಾದ ಅಥವಾ ಪೂಜಿಸಲ್ಪಡಬೇಕಾದ ಒಂದು ಪ್ರತಿಮೆ ಅಲ್ಲ. ಮಾನವೀಯತೆ ಎಂದರೆ ಹೃದಯ ಮತ್ತು ಮಸ್ತಿಷ್ಕಗಳ ಯೋಚನೆಗಳು ಮತ್ತು ಭಾವನೆಗಳು ಆಗಿವೆ. ಅದರ ಆತ್ಮ ಮತ್ತು ಅದರ ನೈತಿಕ ಮತ್ತು ಆಧ್ಯಾತ್ಮಿಕ ಸ್ಥಿತಿಗಳ ಹೆಸರಾಗಿದೆ. ಮಾನವೀಯತೆಗೆ ಸಂಬಂಧಿಸಿದ ಮೌಲ್ಯಗಳಿಗೆ ಬದ್ಧರಾದರೆ ಹೇಳಬಹುದು ಮಾನವೀಯತೆಗೆ ಗೌರವ ನೀಡಲಾಗಿದೆ ಎಂದು. ಇದರ ಬಗ್ಗೆ ಹಝ್ರತ್ ಪೈಗಂಬರರ ಜೀವನ ಚರಿತ್ರೆಯ ಕಡೆಗೆ ದೃಷ್ಟಿಹಾಯಿಸುವುದಾದರೆ ಆಶ್ಚರ್ಯಕರವಾದ ಉದಾಹರಣೆಗಳು ಕಾಣಿಸುತ್ತವೆ. ಅಂತಹ ಉದಾಹರಣೆ ಬೇರೆ ಎಲ್ಲಿಯಾದರೂ ಸಿಗುವುದು ಅಸಾಧ್ಯವಾಗಿದೆ.

ಒಬ್ಬ ಮನುಷ್ಯ ತನ್ನ ಸ್ನೇಹಿತರೊಂದಿಗೆ, ಸಂಬಂಧಿಕರೊಂದಿಗೆ, ತನ್ನಂತೆ ನಂಬಿಕೆ ಹೊಂದಿದವರೊಂದಿಗೆ, ತನ್ನ ಧರ್ಮದವರೊಂದಿಗೆ ಸೌಹಾರ್ದದಿಂದ ವರ್ತಿಸುತ್ತಾನೆ. ಆದರೆ ಅವನು ಅನ್ಯರೊಂದಿಗೆ, ವಿರೋಧಿಗಳೊಂದಿಗೆ ಶತ್ರುಗಳೊಂದಿಗೆ ಹೇಗೆ ವರ್ತಿಸುತ್ತಾನೆಂದು ನೋಡಬೇಕಾಗಿದೆ.

ಒಮ್ಮೆ ಮದೀನದಲ್ಲಿ ಒಬ್ಬ ಯಹೂದಿಯ ಮೃತ ಶರೀರದ ಜನಾಝ ಬರುತ್ತಿದ್ದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆ ಜನಾಝವನ್ನು ಗೌರವಿಸಲು ಎದ್ದು ನಿಂತರು ಆಗ ಹಝ್ರತ್ ಪೈಗಂಬರರೊಂದಿಗೆ ಒಬ್ಬರು ಹೇಳಿದರು: ಅಲ್ಲಾಹನ ಸಂದೇಶವಾಹಕರೇ ಅದು ಯಹೂದಿಯ ಜನಾಝವಾಗಿದೆ. ಆಗ ಹಝ್ರತ್ ಪೈಗಂಬರ್ ಹೇಳಿದರು: ಏನು ಆ ವ್ಯಕ್ತಿಯಲ್ಲಿ ಜೀವವಿರಲಿಲ್ಲವೇ. ಆ ವ್ಯಕ್ತಿ ಮನುಷ್ಯನಾಗಿರಲಿಲ್ಲವೇ? (ಬುಖಾರಿ).

ಹಝ್ರತ್ ಯಅ್‌ಲಾ ಬಿನ್ ಮುರ್ರ ಹೇಳುತ್ತಾರೆ: ನಾನು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಅನೇಕ ಪ್ರಯಾಣ ಮಾಡಿದ್ದೆನು. ಅವರು ಯಾವಾಗಲಾದರೂ ಒಂದು ಮೃತ ಶರೀರ ಮಾರ್ಗದಲ್ಲಿ ಬಿದ್ದಿರುವುದನ್ನು ಕಂಡರೆ ಅದನ್ನು ದಫನ್ ಮಾಡಿಸದ ಯಾವ ಸಂದರ್ಭವೂ ಇರಲಿಲ್ಲ. ಹಝ್ರತ್ ಪೈಗಂಬರ್(ಸ) ಎಂದೂ ವಿಚಾರಿಸಲಿಲ್ಲ ಮೃತ ಶರೀರ ಮುಸ್ಲಿಮನದೋ ಅಥವಾ ಅವಿಶ್ವಾಸಿಯದೋ ಎಂದು. ಬದ್ರ್ ಯುದ್ಧದಲ್ಲಿ ಮೃತರಾಗಿದ್ದ 24 ಬಹುದೇವಾರಾಧಕ ನಾಯಕರ ಶವಗಳನ್ನು ಬದರ್ ಪ್ರದೇಶದ ಒಂದು ಹೊಂಡದಲ್ಲಿ ದಫನ್ ಮಾಡಲಾಗಿತ್ತು. ಆ ಸ್ಥಳವನ್ನು ಖಲೀಬ್ ಎಂದು ಕರೆಯುತ್ತಾರೆ. (ಬುಖಾರಿ).

ಉಹುದ್ ಯುದ್ಧದಲ್ಲಿ ಮಕ್ಕದ ಬಹುದೇವಾರಾಧಕರು ಹಝ್ರತ್ ಪೈಗಂಬರರ(ಸ) ಚಿಕ್ಕಪ್ಪ ಹಝ್ರತ್ ಹಮ್‌ಝ ಕೊಲ್ಲಲ್ಪಟ್ಟಾಗ ಅವರ ಕಿವಿಗಳನ್ನೂ ಮೂಗನ್ನೂ ಕತ್ತರಿಸಿ ಮೃತ ಶರೀರಕ್ಕೆ ಅಪಮಾನ ಮಾಡಿದ್ದರು. ಇದು ಅವರ ಆಚಾರವಾಗಿತ್ತು. ಅಹ್‌ಝಾಬ್ ಯುದ್ಧದಲ್ಲಿ ಬಹುದೇವಾರಾಧಕರ ನಾಯಕ ನೌಫಲ್ ಬಿನ್ ಅಬ್ದುಲ್ಲಾ ಮಖ್‌ಝೂಮಿ ಹತನಾದಾಗ ಬಹುದೇವಾರಾಧಕರು ಯೋಚಿಸಿದ್ದರು. ನಮ್ಮ ನಾಯಕನ ಮೃತ ಶರೀರವನ್ನು ಮುಸ್ಲಿಮರು ಅಪಮಾನಿಸುವರು ಎಂದು. ಅವರು ಹಝ್ರತ್ ಪೈಗಂಬರರಿಗೆ ಸಂದೇಶ ಕಳುಹಿಸಿದರು. ನಮ್ಮಿಂದ ಹತ್ತು ಸಾವಿರ ದಿರ್‌ಹಮ್ ಪಡೆದು ನೌಫಲ್‌ನ ಶವವನ್ನು ನಮಗೆ ಮರಳಿಸಬೇಕು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಾವು ಮೃತ ಶರೀರಕ್ಕೆ ಹಣ ತೆಗೆದುಕೊಳ್ಳುವುದಿಲ್ಲ. ನೀವು ನಿಮ್ಮ ನಾಯಕನ ಶವ ತೆಗೆದುಕೊಂಡು ಹೋಗಿರಿ ಎಂದು. (ಬೈಹಖಿ).

ಶತ್ರು ಸೈನಿಕರ ಮೃತ ದೇಹಕ್ಕೆ ಅಂಗಭಂಗ ಮಾಡುವುದನ್ನು ಹಝ್ರತ್ ಪೈಗಂಬರ್(ಸ) ನಿಷಿದ್ಧಗೊಳಿಸಿದ್ದರು.

ಪುರುಷರ ಮತ್ತು ಮಹಿಳೆಯರ ಸಮಾನತೆ ಬಗ್ಗೆ ಹೇಳುವುದಾದರೆ ದುರ್ಭಾಗ್ಯದಿಂದ ಇಂದಿನ ಅಭಿವೃದ್ಧಿ ಗಳಿಸಿದ ಕಾಲದಲ್ಲೂ ಸಮಾನತೆ ಮತ್ತು ಸ್ವಾತಂತ್ರ್ಯದ ಹೆಸರಲ್ಲಿ ಮಹಿಳೆಯರ ಶೋಷಣೆ ನಡೆಯುತ್ತಿರುವುದರಿಂದ ಸಮಾಜದ ಸಂತುಲಿತಾವಸ್ಥೆ ಬಿಗಡಾಯಿಸುವ ಕಾರಣವಾಗುತ್ತಿದೆ. ಆದರೆ ಇಸ್ಲಾಮ್ ಸ್ತ್ರೀ ಪುರುಷರಿಗೆ ಸಮಾನ ಹಕ್ಕುಗಳನ್ನು ನೀಡಿದೆ. ಕೆಲವು ನಿಬಂಧನೆಗಳನ್ನು ಅಳವಡಿಸಿ ಮಹಿಳೆಯರ ಹಕ್ಕುಗಳನ್ನು ಸಂರಕ್ಷಿಸುವ ಪೂರ್ಣ ಖಾತರಿ ನೀಡಿದೆ. ವಾಸ್ತವಿಕ ವಿಷಯವೇನೆಂದರೆ ಸ್ತ್ರೀ ಪುರುಷರಲ್ಲಿರುವ ಶಾರೀರಿಕ ವ್ಯತ್ಯಾಸಗಳನ್ನು ಇಸ್ಲಾಮ್ ಕಡೆಗಣಿಸಿಲ್ಲ. ಈ ವ್ಯತ್ಯಾಸಗಳನ್ನು ಪರಿಗಣಿಸಿ ಇಸ್ಲಾಮ್ ಪುರುಷನ ಮತ್ತು ಸ್ತ್ರೀಯ ಹೊಣೆಗಾರಿಕೆಗಳನ್ನು ನಿಶ್ಚಯಿಸಿದೆ. ಮನೆಯ ವ್ಯವಸ್ಥೆ ಮತ್ತು ಮಕ್ಕಳ ಪರಿಪಾಲನೆ ಮತ್ತು ತರಬೇತಿಯ ಕೆಲಸ ಮಹಿಳೆಯರದಾಗಿದೆ. ಪತಿಯು ಪತ್ನಿ ಮತ್ತು ಮಕ್ಕಳ ಎಲ್ಲ ಆವಶ್ಯಕತೆಗಳನ್ನು ಈಡೇರಿಸಿ ಕೊಡಲು ದುಡಿಯಬೇಕಾಗಿದೆ.

ಆದರೆ ಮಹಿಳೆಯರ ಸ್ವಾತಂತ್ರ್ಯ ಮತ್ತು ಸಮಾನತೆಯ ಹೆಸರಲ್ಲಿ ಧ್ವಜವಾಹಿಗಳಾಗಿ ವರ್ತಿಸುವವರ ಪ್ರಾಯೋಗಿಕ ರೀತಿಯನ್ನು ನೋಡಿರಿ. ಅವರು ಮಹಿಳೆಯರಿಂದ ನೌಕರಿಗಳನ್ನು ಮಾಡಿಸುತ್ತಾರೆ. ಅವರೊಂದಿಗೆ ಅಡಿಗೆ ಮನೆಯ ಜವಾಬ್ದಾರಿ ಮತ್ತು ಮಕ್ಕಳ ಪಾಲನೆ ಪೋಷಣೆಯ ಜವಾಬ್ದಾರಿ ಅವರ ಮೇಲೆಯೇ ಹೊರಿಸುತ್ತಾರೆ. ಇದು ಸ್ವಾತಂತ್ರ್ಯ ಮತ್ತು ಸಮಾನತೆ ಹೆಸರಲ್ಲಿ ಮಹಿಳೆಯರ ಮೇಲೆ ದೌರ್ಜನ್ಯವಾಗಿದೆ. ಇಸ್ಲಾಮ್ ಇದಕ್ಕೆ ಅನುಮತಿ ನೀಡುವುದಿಲ್ಲ.

ಇಸ್ಲಾಮ್ ಮಹಿಳೆಯರಿಗೆ ನೀಡಿರುವ ಹಕ್ಕುಗಳು, ಅವರೊಂದಿಗೆ ಉತ್ತಮವಾಗಿ ವರ್ತಿಸುವ ಬಗ್ಗೆ ನೀಡಿರುವ ಉಪದೇಶಗಳು, ಅವರಿಗೆ ಸಮಾಜದಲ್ಲಿ ನೀಡಿರುವ ಗೌರವ ಮೊದಲಾದವುಗಳಿಗೆ ಸಂಬಂಧಿಸಿದ ಭವ್ಯ ಉದಾಹರಣೆಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕುಟುಂಬ ಜೀವಿತದಲ್ಲಿ ಕಾಣಿಸುತ್ತದೆ.

ಮದೀನದಲ್ಲಿ ಹಝ್ರತ್ ಪೈಗಂಬರ್ ಜೀವಿಸಿದ ಕಾಲದಲ್ಲಿ ಅವರು ಐವತ್ತು ವರ್ಷಕ್ಕಿಂತ ಹೆಚ್ಚು ಪ್ರಾಯದವರಾಗಿದ್ದಾಗ ಕೇವಲ ತರಬೇತಿ ಮತ್ತು ಸಾಮುದಾಯಿಕ ಉದ್ದೇಶಕ್ಕೋಸ್ಕರ ಕೆಲವು ವಿವಾಹಗಳನ್ನು ಮಾಡಬೇಕಾಯಿತು. ಒಂದು ಸಂದರ್ಭದಲ್ಲಿ ಒಂಬತ್ತು ಪತ್ನಿಯರು ಅವರ ತರಬೇತಿ ಮತ್ತು ಸಂರಕ್ಷಣೆಗೆ ಅಧೀನರಾಗಿದ್ದರು. ಆದರೆ ಅವರು ಅತ್ಯಂತ ಸುವ್ಯವಸ್ಥೆಯಿಂದ ಸಮತೋಲನ ಭಾವದಿಂದ ಮತ್ತು ನ್ಯಾಯ ನಿಷ್ಠೆಯಿಂದ ಎಲ್ಲ ಪತ್ನಿಯರ ಹಕ್ಕುಗಳನ್ನು ಈಡೇರಿಸಿಕೊಟ್ಟರು ಮತ್ತು ಪ್ರತಿಯೊಬ್ಬ ಪತ್ನಿ ಬಗ್ಗೆ ಕಾಳಜಿ ವಹಿಸಿದರು. ಆ ಪತ್ನಿಯರಿಗೆ ಸುಖದ ಸಾಮಗ್ರಿಗಳನ್ನು ಒದಗಿಸುವುದರ ವಿಷಯ ಬಿಡಿ ಆಹಾರ ಸಹ ಪೂರ್ಣವಾಗಿ ಒದಗಿಸುವುದು ಕಷ್ಟಕರವಾಗಿತ್ತು. ಹೀಗಿದ್ದರೂ ಪ್ರತಿ ಪತ್ನಿಗೆ ಅವರ ಬಗ್ಗೆ ಅಭಿಮಾನವಿತ್ತು. ಜಯಶಾಲಿಯಾದಾಗ ಮತ್ತು ಯುದ್ಧದ ಕಾರಣದಿಂದ ಸಂಪತ್ತು ಧಾರಾಳ ದೊರೆತಾಗ ಅಲ್ಲಾಹನ ಆಜ್ಞೆ ಪ್ರಕಾರ ಹಝ್ರತ್ ಪೈಗಂಬರ್(ಸ) ಪತ್ನಿಯರೊಂದಿಗೆ ಹೇಳಿದರು: ನೀವು ಲೌಕಿಕ ಸುಖ ಸೌಂದರ್ಯವನ್ನು ಇಚ್ಛಿಸುವುದಾದರೆ ನೀವು ಲೌಕಿಕ ಸಾಮಗ್ರಿಗಳನ್ನು ಪಡೆದು ನನ್ನಿಂದ ಬೇರೆಯಾಗಬಹುದು ಎಂದು ಹೇಳಿದಾಗ ಯಾವ ಪತ್ನಿಯೂ ಅದಕ್ಕೆ ಸಿದ್ಧರಾಗದೆ ಹಝ್ರತ್ ಪೈಗಂಬರ್(ಸ)ರೊಂದಿಗೆ ಜೀವಿಸುವುದಕ್ಕೆ ಆದ್ಯತೆ ನೀಡಿದರು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಪತ್ನಿಯರೊಂದಿಗೆ ಅತ್ಯಂತ ವಾತ್ಸಲ್ಯ ಭರಿತರಾಗಿ ವರ್ತಿಸುತ್ತಿದ್ದ ಬಗ್ಗೆ ಹಝ್ರತ್ ಆಯಿಶ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸಾಮಾನ್ಯ ಮನುಷ್ಯರ ಹಾಗೆಯೇ ಒಬ್ಬ ಮನುಷ್ಯರಾಗಿದ್ದರು. ಬಟ್ಟೆಗೆ ಸ್ವತಃ ತೇಪೆ ಹಾಕುತ್ತಿದ್ದರು. ಆಡಿನ ಹಾಲು ಹಿಂಡುತ್ತಿದ್ದರು. ಪಾದರಕ್ಷೆಗಳನ್ನು ಮತ್ತು ಮನೆಯಲ್ಲಿದ್ದ ಡೋಲನ್ನು ಸ್ವತಃ ದುರಸ್ತಿ ಮಾಡುತ್ತಿದ್ದರು. ರಾತ್ರಿ ಹೊತ್ತು ತಡವಾಗಿ ಮನೆಗೆ ಬಂದರೆ ನಿದ್ರಿಸುವವರನ್ನು ಎಬ್ಬಿಸದೆ ಆಹಾರವನ್ನು ಮತ್ತು ಹಾಲನ್ನು ಸ್ವತಃ ತೆಗೆದುಕೊಂಡು ಬಳಸುತ್ತಿದ್ದರು.

ಆ ಸುಶೀಲೆಯರಾದ ಪತ್ನಿಯರ ನಿಷ್ಠೆ ಲೌಕಿಕ ಸುಖ ಸೌಕರ್ಯಗಳ ಕಾರಣದಿಂದಾಗಿರಲಿಲ್ಲ. ಆ ಪತ್ನಿಯರು ಹಝ್ರತ್ ಪೈಗಂಬರರ ಅತ್ಯುತ್ತಮ ಸ್ವಭಾವ ಗುಣಗಳಿಂದ ಪ್ರಭಾವಿತೆಯಾಗಿದ್ದರು.

ಬಹುಮಾನ್ಯ ಶ್ರೋತೃಗಳೇ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತಮ್ಮ ಪತ್ನಿಯರೊಂದಿಗೆ ಉತ್ತಮ ರೀತಿಯಲ್ಲಿ

ವರ್ತಿಸಿದುದನ್ನು ಆ ಕಾಲಘಟ್ಟದ ಹಿನ್ನಲೆಯಲ್ಲಿ ನೋಡಿರಿ. ಆ ಕಾಲದಲ್ಲಿ ಅರಬಿಗಳ ಮಹಿಳೆಯರಿಗೆ ಯಾವ ಗೌರವವೂ ಇರಲಿಲ್ಲ. ಪುರುಷರು ತಮ್ಮ ಪತ್ನಿಯರನ್ನು ಚಪ್ಪಲಿಗಳ ಹಾಗೆ ಬಳಸುತ್ತಿದ್ದರು. ಒಬ್ಬ ಪತ್ನಿಯ ಬಗ್ಗೆ ಇಷ್ಟವಿಲ್ಲದಿದ್ದರೆ ಆಕೆಯನ್ನು ಬಿಟ್ಟು ಇನ್ನೊಬ್ಬಳನ್ನು ಪತ್ನಿಯನ್ನಾಗಿ ಮಾಡಿಕೊಳ್ಳುತ್ತಿದ್ದರು. ಹೆಣ್ಣು ಶಿಸುವಿನ ಜನನವನ್ನು ಅಪಶಕುನ ಎಂದು ಭಾವಿಸುತ್ತಿದ್ದರು. ಕೆಲವು ಕಠೋರ ಹೃದಯಗಳು ಹೆಣ್ಣು ಮಕ್ಕಳನ್ನು ಜೀವಂತವಾಗಿ ಹೂಳುತ್ತಿದ್ದರು. ಮಹಿಳೆಯರು ಕೀಳೆಂದೂ ಅವಿವೇಕಿಗಳೆಂದೂ ಗಣಿಸಿ ಅವರ ಮಾತನ್ನು ಶ್ರದ್ಧೆಯಿಂದ ಆಲಿಸುವುದು ಮತ್ತು ಅವರೊಂದಿಗೆ ಸಮಾಲೋಚನೆ ನಡೆಸುವುದು ಅಪಮಾನಕರ ಎಂದು ಭಾವಿಸುತ್ತಿದ್ದರು. ಆದರೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಹಿಳೆಯರನ್ನು ಗೌರವದ ಎಂತಹ ಸ್ಥಾನದಲ್ಲಿ ಕುಳ್ಳಿರಿಸಿದರೆಂದರೆ ಇಂದಿನ ಈ ಅಭಿವೃದ್ಧಿ ಹೊಂದಿದ ಕಾಲದಲ್ಲಿ ಮಹಿಳೆಯರ ಸ್ವಾತಂತ್ರ್ಯ ಮತ್ತು ಸಮಾನತೆ ಬಗ್ಗೆ ಘೋಷಣೆಗಳನ್ನು ಮಾಡುತ್ತಿರುವಾಗ ಸಹ ಅಂತಹ ಉದಾಹರಣೆಗಳು ಸಿಗುವುದು ಕಷ್ಟಕರವಾಗಿದೆ.

ಒಟ್ಟಾರೆ ಹೇಳುವುದಾದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಜೀವಿತದ ಕೊನೆಯ ಹಜ್ಜ್ ವೇಳೆಯಲ್ಲಿ ನೀಡಿದ ಖುತ್‌ಬದಲ್ಲಿ ನೀಡಿದ ಉಪದೇಶಗಳು ಮಾನವೀಯತೆಯ ಶಿರವನ್ನು ಮೇಲೆತ್ತುವಂತೆ ಮಾಡುವಂತಹದ್ದೂ ಆಗಿದ್ದು ಆ ಉನ್ನತವಾಗಿ ಹಾರುವ ಧ್ವಜವು ಖಿಯಾಮತ್ ತನಕ ಹಾರುತ್ತಾ ಇರುವುದು ಮತ್ತು ಮಾನವರಿಗೆ ಮಾನವೀಯತೆಯ ಪಾಠವನ್ನು ಕಲಿಸುತ್ತಾ ಇರುವುದು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರೇಮಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಅಲ್ಲಾಹನನ್ನು ಅನ್ವೇಷಿಸಲು ಇಚ್ಛಿಸುವುದಾದರೆ ಬಡವರ ಹೃದಯಗಳ ಸಮೀಪ ಹುಡುಕಿರಿ. ಆದುದರಿಂದ ಪ್ರವಾದಿಗಳು ಬಡತನದ ಪೋಷಾಕನ್ನೇ ಧರಿಸಿದ್ದರು. ಇದೇ ರೀತಿ ದೊಡ್ಡ ಕೋಮಿನ ಜನರು ಚಿಕ್ಕ ಕೋಮಿನ ಜನರನ್ನು ಪರಿಹಾಸ ಮಾಡಬಾರದು. ನನ್ನ ಕುಟುಂಬ ದೊಡ್ಡದೆಂದು ಯಾರೂ ಹೇಳಬಾರದು. ಅಲ್ಲಾಹನು ಹೀಗೆ ಹೇಳುತ್ತಾನೆ: ನೀವು ನನ್ನ ಬಳಿಗೆ ಬಂದಾಗ ನಾನು ವಿಚಾರಿಸಲಾರೆ ನಿಮ್ಮ ಕೋಮು ಯಾವುದೆಂದು. ನಿಮ್ಮ ಕರ್ಮಗಳು ಹೇಗಿದ್ದುವು ಎಂದು ಪ್ರಶ್ನಿಸಲಾಗುವುದು. ಇದೇ ರೀತಿ ಹಝ್ರತ್ ಪೈಗಂಬರ್(ಸ) ತನ್ನ ಪುತ್ರಿಯೊಂದಿಗೆ ಹೇಳಿದ್ದರು: ಸರ್ವಶಕ್ತನಾದ ಅಲ್ಲಾಹನು ನಿನ್ನ ವ್ಯಕ್ತಿತ್ವದ ಬಗ್ಗೆ ವಿಚಾರಿಸಲಾರ. ನೀನು ಕೆಟ್ಟ ಕೆಲಸ ಮಾಡಿದರೆ ನೀನು ಪೈಗಂಬರನ ಪುತ್ರಿ ಎಂಬ ಕಾರಣದಿಂದ ನಿನ್ನ ಕೆಟ್ಟ ಕೆಲಸವನ್ನು ಕಡೆಗಣಿಸಲಾರನು.

ಪುನಃ ಹೇಳಿದರು: ನನ್ನ ಜಮಾಅತಿನವರು ಪರಸ್ಪರ ದೊಡ್ಡವರು ಮತ್ತು ಚಿಕ್ಕವರು ಎಂದು ಭಾವಿಸಬಾರದು ಎಂದು ನಾನು ಇಚ್ಛಿಸುತ್ತೇನೆ. ಒಬ್ಬರಿನ್ನೊಬ್ಬರನ್ನು ಅಹಂಭಾವದಿಂದಲೂ ಕೀಳೆಂಬ ಮನೋಭಾವದಿಂದಲೂ ನೋಡಬಾರದು...... ಯಾರು ದೊಡ್ಡವರೆಂದು ಯಾರು ಚಿಕ್ಕವರು ಎಂದು ಅಲ್ಲಾಹನಿಗೆ ತಿಳಿದಿದೆ. ಕೆಲವು ಜನರು ದೊಡ್ಡ ಮನುಷ್ಯರನ್ನು ಕಾಣುವಾಗ ಬಹಳ ವಿನಯದಿಂದ ವರ್ತಿಸುತ್ತಾರೆ. ಆದರೆ ಯಾರು ಬಡವನ ಮಾತನ್ನು ವಿನಯದೊಂದಿಗೆ ಆಲಿಸುತ್ತಾನೋ ಅವನೇ ದೊಡ್ಡವನು. ಅವನಿಗೆ ಸಂತೋಷವಾಗುವಂತೆ ವರ್ತಿಸಬೇಕು. ಅವನ ಮಾತಿಗೆ ಗೌರವ ನೀಡಬೇಕು. ದುಃಖ ಉಂಟಾಗುವಂತಹ ಕಟು ಮಾತನ್ನು ಆಡಬಾರದು. ನಿಮ್ಮ ಸಹೋದರರನ್ನು ಕೀಳೆಂದು ಭಾವಿಸಬೇಡಿರಿ. ಒಂದೇ ನೀರ ಝರಿಯಿಂದ ಎಲ್ಲರೂ ನೀರು ಕುಡಿಯುತ್ತಿರುವಾಗ ಯಾರು ಹೆಚ್ಚು ನೀರು ಕುಡಿಯುವ ಅದೃಷ್ಟ ಹೊಂದಿದ್ದಾನೆ ಎಂದು ಯಾರಿಗೆ ತಾನೆ ತಿಳಿದಿದೆ. ಲೌಕಿಕ ತತ್ವಗಳಿಗೆ ಅನುಸಾರವಾಗಿ ಯಾರೂ ಗೌರವಾರ್ಹರಾಗುವುದಿಲ್ಲ. ಯಾರು ಮುತ್ತಖಿಯಾಗಿರುವನೋ ಅವನೇ ಅಲ್ಲಾಹನ ದೃಷ್ಟಿಯಲ್ಲಿ ಗೌರವಾರ್ಹನಾಗಿದ್ದಾನೆ. ಅಲ್ಲಾಹನು ಹೇಳುತ್ತಾನೆ, **ಇನ್ನ ಅಕ್‌ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್ ಇನ್ನಲ್ಲಾಹ ಅಲೀಮುನ್ ಖಬೀರ್.**

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್ 2004 ಡಿಸೆಂಬರ್ 7ರ ಖುತ್‌ಬದಲ್ಲಿ ಹೀಗೆ ಹೇಳುತ್ತಾರೆ:

**"**ಈ ಉದಾಹರಣೆಗಳು ಎಂದೂ ಹಳೆಯವು ಆಗಲಾರವು. ಅಲ್ಲಾಹನ ಅನುಗ್ರಹಗಳನ್ನು ಬಾಚಿಕೊಳ್ಳಲು ಅವನ ತೃಪ್ತಿಯನ್ನು ಗಳಿಸಲು ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ ಬಗ್ಗೆ ಹೊಂದಿರುವ ಪ್ರೇಮವನ್ನು ಸತ್ಯವೆಂದು ಸಾಬೀತುಗೊಳಿಸಿ ತೋರಿಸಲು ಈ ಮಾದರಿಗಳ ಪ್ರಕಾರ ಚಲಿಸಬೇಕಾಗಿದೆ.

ಈಗ ಪ್ರತಿಯೊಬ್ಬ ಅಹ್ಮದಿಗೆ ಇತರ ಮುಸ್ಲಿಮರಿಗಿಂತ ಹೆಚ್ಚು ಕಡ್ಡಾಯವಾಗಿರುವುದು ಏನೆಂದರೆ ತಮ್ಮ ಸುತ್ತುಮುತ್ತಲು ಇರುವ ಪ್ರದೇಶಗಳಲ್ಲಿ ಇರುವ ಬಲಹೀನರನ್ನೂ ಆಶ್ರಯ ರಹಿತರನ್ನೂ ಹುಡುಕಬೇಕು. ಅವರೊಂದಿಗೆ ಉತ್ತಮವಾಗಿ ವರ್ತಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಪ್ರೇಮವನ್ನು ನಾವು ಹೊಂದಿದ್ದೇವೆ ಎಂಬ ನಮ್ಮ ವಾದವನ್ನು ಸತ್ಯವೆಂದು ತೋರಿಸಬೇಕು. ಅಲ್ಲಾಹನು ಹಾಗೆ ಮಾಡಲು ಭಾಗ್ಯ ದಯಪಾಲಿಸಲಿ – ಆಮೀನ್.

**ವ ಆಖಿರು ದಅ್‌ವಾನ ಅನಿಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್.**

————————————*****————————————

## ಪವಿತ್ರ ಖುರ್‌ಆನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ.ಆದರೆ ಜನರು ಅದನ್ನು ಅರಿತಿಲ್ಲ. ***(ಮಲ್‌ಫೂಝಾತ್ ಸಂಪುಟ-2, ಪುಟ-344)***

ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು **"ಹಕಮ್"** ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು **"ಮುಹೈಮಿನ್"** ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಿಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವ ಶಕ್ತನಾದ ದೇವನ ಪ್ರಕಾಶವಾಗಿದೆ.

**(ಖುತ್‌ಬ ಇಲ್‌ಹಾಮಿಯಾ; ರೂಹಾನೀ ಖಝಾಇನ್ ಸಂಪುಟ-16, ಪುಟ-103)**

## ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ಸಂಪುಟ-1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಅ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

ಜಲ್ಸ ಸಾಲಾನ ಖಾದಿಯಾನ್ 2023ರ ಭಾಷಣ

# ಹಝ್ರತ್ ಉಸ್ಮಾನ್(ರ) ಮತ್ತು ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್(ರ) ರವರ ಜೀವನಚರಿತ್ರೆ

(ಸನ್ಮಾನ್ಯ ಮೌಲಾನಾ ಝ್ಯನುದ್ದೀನ್ ಹಾಮಿದ್ ಸಾಹಿಬ್, ನಾಝಿಮ್ ದಾರುಲ್ ಖಝಾ ಖಾದಿಯಾನ್)

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيْكَ
لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ أَمَّا بَعْدُ
فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ
اللّٰهِ الرَّحْمٰنِ الرَّحِيْمِ ـ
مُحَمَّدٌ رَّسُوْلُ اللّٰهِ وَالَّذِيْنَ مَعَهٗ أَشِدَّاءُ
عَلَى الْكُفَّارِ رُحَمَاءُ بَيْنَهُمْ تَرَاهُمْ رُكَّعًا
سُجَّدًا يَبْتَغُوْنَ فَضْلًا مِّنَ اللّٰهِ وَرِضْوَانًا ـ

ಪವಿತ್ರ ಖುರ್‌ಆನ್‌ನ ಈ ವಚನದ ಅನುವಾದ ಹೀಗಿದೆ: ಮುಹಮ್ಮದ್ ಅಲ್ಲಾಹನ ಸಂದೇಶವಾಹಕ. ಅವರೊಂದಿಗಿರುವವರು ಅವಿಶ್ವಾಸಿಗಳ ವಿರುದ್ಧ ಕಠಿಣರೂ ಪರಸ್ಪರ ದಯಾರ್ದ್ರರೂ ಆಗಿದ್ದಾರೆ. ನಮನ ಮಾಡುವವರಾಗಿಯೂ ಸಾಷ್ಟಾಂಗವೆರಗುವವರಾಗಿಯೂ ನೀನು ಅವರನ್ನು ಕಾಣುವೆ. ಅವರು ಅಲ್ಲಾಹನ ಅನುಗ್ರಹವನ್ನೂ ಪ್ರೀತಿಯನ್ನೂ ಬೇಡುತ್ತಾರೆ.

ವಿನೀತನು ಈ ಪವಿತ್ರ ಸಂದರ್ಭದಲ್ಲಿ ರಸೂಲುಲ್ಲಾಹ್(ಸ) ರವರ ಸಹಾಬಿಯವರಾದ ಹಝ್ರತ್ ಉಸ್ಮಾನ್ ಗ್ವನಿ(ರ) ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಸಹಾಬಿ ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್(ರ) ರವರ ಕುರಿತು ಮಾತನಾಡುವೆನು. ಇನ್‌ಶಾ ಅಲ್ಲಾಹ್

ಸಭಿಕರೇ! ಹಝ್ರತ್ ಪೈಗಂಬರ್(ಸ) ರವರ ಪವಿತ್ರ ಸಹವಾಸ ಹಾಗೂ ಅವರ ಉತ್ತಮ ತರಬೇತಿಯ ಪರಿಣಾಮವಾಗಿ ಸಹಾಬರಲ್ಲಿ ಮಹೋನ್ನತವಾದ ಆಧ್ಯಾತ್ಮಿಕ, ನೈತಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದಲಾವಣೆ ಆಗಿತ್ತು. ಅದರ ವಿವರ ನೀಡುತ್ತಾ ಹಝ್ರತ್ ಅಖದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ.

**ಉಹೀತು ಅಮ್ವಾತುಲ್ ಖುರೂನ ಬಿಜಲ್ವತಿ**
**ಮಾಜಾ ಯಮಾಸಿಲಕ ಬಿಹಾಝುಶ್ಶಾನ್**

ಅಂದರೆ ಶತಮಾನಗಳಷ್ಟು ಹಳೆಯ ಮೃತರನ್ನು ತಮ್ಮ ಒಂದೇ ಆಕರ್ಷಿತ ಗುಣಗಳೊಂದಿಗೆ ಜೀವಂತರನ್ನಾಗಿಸಿ ಮಾಡಿದರು. ಈ ಪರಿಯ ಉನ್ನತ ಉದಾಹರಣೆ ಯಾರಾಗಿದ್ದಾರೆ.

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ತಮ್ಮ ಸಹಾಬರಿಗೆ ಯಾವ ರೀತಿ ತರಬೇತಿ ನೀಡಿದರೆಂದರೆ ಅವರಿಗೆ ಆಧ್ಯಾತ್ಮಿಕ ಆಕಾಶದ ಮಿನುಗುವ ನಕ್ಷತ್ರಗಳೊಂದಿಗೆ ಹೋಲಿಕೆ ನೀಡಿರುವವರು. ಅವರು ಹೇಳಿದರು:

**ಅಸ್‌ಹಾಬಿ ಕನ್ನುಜೂಮಿ ಬಿಅಯ್ಯುಹುಮ್ ಇಖ್ತದೈತುಮ್ ಇಹ್‌ತದೈತುಮ್**

ಅಂದರೆ ನನ್ನ ಶಿಷ್ಯಂದಿರು ನಕ್ಷತ್ರಗಳಂತೆ ಹೊಳಪುಳ್ಳವರಾಗಿದ್ದಾರೆ. ಅವರ ಪೈಕಿ ನೀವು ಯಾರನ್ನು ಅನುಸರಿಸಿದರೂ ಸಹ ಮಾರ್ಗದರ್ಶನ ಹೊಂದುವಿರಿ.

ಸಹಾಬರ ಮಹಿಮೆ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

**ಇನ್ನಸ್ಸಹಾಬ ಕುಲ್ಲಹುಮ್ ಕಝುಕಾಯಿ**
**ಖದ್ ನವ್ವರೂ ವಜ್‌ಹಲ್ ವರಾ ಬಿಝಿಯಾಇ**

ಅಂದರೆ ಸಹಾಬರೆಲ್ಲರೂ ಸೂರ್ಯನಂತಿದ್ದಾರೆ. ಅವರು ತಮ್ಮ ದಿವ್ಯ ದೃಷ್ಟಿಯಿಂದ ಸೃಷ್ಟಿಗಳ ಮುಖಗಳನ್ನು ಪ್ರಕಾಶಮಯರನ್ನಾಗಿ ಮಾಡಿರುವರು.

ಮಾನ್ಯರೇ! ಈ ಪ್ರಕಾಶಮಯ ನಕ್ಷತ್ರಗಳಲ್ಲಿ ಹಝ್ರತ್ ಉಸ್ಮಾನ್(ರ) ರವರು ಓರ್ವ ಪ್ರಕಾಶಿತ ನಕ್ಷತ್ರರಾಗಿರುವರು, ಅವರು ಖಿಲಾಫತ್ ರಾಶಿದದ ಮೂರನೆಯ ಖಲೀಫರಾಗಿ ಇಸ್ಲಾಮಿನ ಅಭಿವೃದ್ಧಿಗಾಗಿ ಮಹೋನ್ನತವಾದ ಸಾಧನೆಗಳನ್ನು ಮಾಡುತ್ತಾ ಇಸ್ಲಾಮ್ ಮತ್ತು ಮುಸ್ಲಿಮರಿಗೋಸ್ಕರ ತಮ್ಮ ಜೀವ ಬಲಿದಾನವೇ ಮಾಡಿದರು. (ರಝೀಯಲಾಹು ಅನಹು ವರಝು ಅನ್‌ಹು)

ಹಝ್ರತ್ ಉಸ್ಮಾನ್, ಖುರೈಶಿ ಗೋತ್ರದಿಂದ ಬನು ಉಮ್ಮಿಯದ ಅಸ್‌ಹಾಬುಲ್ ಫೀಲ್ ಘಟನೆಯ ಐದು ವರ್ಷಗಳ ನಂತರ, 1574ರಲ್ಲಿ ಮಕ್ಕದಲ್ಲಿ ಜನಿಸಿದರು. ಅವರ ತಂದೆ ಬಟ್ಟೆ ವ್ಯಾಪಾರಿಯಾಗಿದ್ದರು ಮತ್ತು ತುಂಬಾ ಶ್ರೀಮಂತರಾಗಿದ್ದರು. ಬಾಲ್ಯವಸ್ಥೆಯಿಂದಲೇ ಅವರು ಸಜ್ಜನ ಸ್ವಭಾವದವರಾಗಿದ್ದರು. ಅವರು ವಯಸ್ಸು ಆ ಸಮಯ 34–35 ಆಗಿರಬಹುದು. ಆಗ ಪ್ರವಾದಿ ಮುಹಮ್ಮದ್(ಸ)ರು ಅಲ್ಲಾಹನ ಆಜ್ಞೆ ಮೇರೆಗೆ ಪ್ರವಾದಿತ್ವ ಪಡೆದ ಘೋಷಣೆ ಮಾಡಿದ್ದರು. ಅವರು ಹಝ್ರತ್ ಮುಹಮ್ಮದ್(ಸ) ರವರನ್ನು ಅವರ ಉತ್ತಮ ಚರಿತ್ರೆಯಿಂದಾಗಿ ಅವರನ್ನು ಉತ್ತಮರೆಂದು ಭಾವಿಸುತ್ತಿದ್ದರು. ಹಝ್ರತ್ ಅಬೂಬಕರ್ ಅವರೊಂದಿಗೆಯೂ ಅವರು ಗೆಳೆತನ ಹೊಂದಿದ್ದರು. ಹಝ್ರತ್ ಅಬೂಬಕರ್ ಸಿದ್ದೀಖ್(ರ) ಪವಿತ್ರ ಪ್ರವಾದಿ(ಸ)ರವರ ಮೇಲೆ ವಿಶ್ವಾಸ ತಂದವರ ಪೈಕಿ ಮೊದಲಿಗರಾಗಿದ್ದರು. ಆ ದಿನಗಳಲ್ಲಿ ಹಝ್ರತ್ ಉಸ್ಮಾನ್(ರ) ವ್ಯಾಪಾರದ ನಿಮಿತ್ತ ಸಿರಿಯಾ ಹೋಗಿದ್ದರು, ಮರಳಿ ಬಂದ ಮೇಲೆ ಹಝ್ರತ್ ಅಬೂಬಕರ್ ತಮ್ಮ ಇತರ ಮಿತ್ರರ ಜೊತೆ ಹಝುರತ್ ಉಸ್ಮಾನ್ ಬಿನ್ ಅಫ್ಫಾನ್(ರ) ಅವರಿಗೆ ಸಹ ಇಸ್ಲಾಮ್ ಸ್ವೀಕರಿಸಲು ಆಹ್ವಾನ ನೀಡಿದರು. ಹಾಗೆ ಒಬ್ಬರ ನಂತರ ಮತ್ತೊಬ್ಬರು ಬೈಅತ್ ಮಾಡಿದರು. ಅವರ ಪೈಕಿ ಹಝ್ರತ್ ಉಸ್ಮಾನ್(ರ) ಎಲ್ಲರಿಗಿಂತ ಮೊದಲು ಬೈಅತ್ ಮಾಡಿದವರಾಗಿದ್ದರು.

ನುಬುವತ್ತಿನ ನಾಲ್ಕನೇ ವರ್ಷದ ಆರಂಭದಲ್ಲಿ ಅಲ್ಲಾಹನಿಂದ ಪ್ರವಾದಿ(ಸ) ರವರಿಗೆ ಮುಕ್ತ ರೀತಿಯಲ್ಲಿ ಪ್ರಚಾರ ಮಾಡುವ ಆದೇಶ ಬಂದಿತ್ತು. ಹೀಗೆ ಅತೀ ಶೀಘ್ರದಲ್ಲಿ ಮಕ್ಕದ ಎಲ್ಲೆಡೆ ಇಸ್ಲಾಮಿನ ಪ್ರಚಾರದ ಕುರಿತು ಸದ್ದು ಜೋರಾಯಿತು. ಅದನ್ನು ಕಂಡು ಮಕ್ಕದ ಕುರೈಶರು ವಿರೋಧ ಮಾಡಲು ಪ್ರಾರಂಭಿಸಿದರು. ಮುಸಲ್ಮಾನರಿಗೆ ಹಿಂಸೆಯ ಮೂಲಕ ಅವರನ್ನು ಮತ್ತೆ ತಮ್ಮೊಂದಿಗೆ ಸೇರಲು ಆಗ್ರಹಿಸಿದರು. ಅವರ ಚಿಕ್ಕಪ್ಪರಾದ ಹಕಮ್ ಬಿನ್ ಅಬ್ದುಲ್ ಆಸ್ ಅವರಿಗೆ ಹಿಗ್ಗಾ ಮುಗ್ಗಾ ಥಳಿಸಿದರು. ಪ್ರವಾದಿ(ಸ) ರವರ ಬಳಿ ಹೋಗದಂತೆ ಮಾಡಲು ಅವರ ಕಾಲುಗಳಲ್ಲಿ ಬೇಡಿಗಳನ್ನು ಹಾಕಿದರು ಕೂಡ ಅವರು ತಾಳ್ಮೆ ವಹಿಸಿದರು. ಈ ಆಪತ್ತುಗಳಿಗೆ ಹೆದರಲಿಲ್ಲ. ಕೆಲವು ದಿನಗಳ ನಂತರ ಅವರ ಚಿಕ್ಕಪ್ಪ ಕೋಪಗೊಂಡು ಅವರನ್ನು ಮನೆಯಿಂದ ಹೊರಗೆ ಹಾಕಿದರು.

ಹಝ್ರತ್ ಉಸ್ಮಾನ್(ರ) ತುಂಬ ಸಜ್ಜನ ಗೌರವಯುತ ಸುಂದರ ಹಾಗೂ ಉತ್ತಮ ಸ್ವಭಾವದ ಯುವಕರಾಗಿದ್ದರು. ಅವರನ್ನು ಅವರ ಕುಟುಂಬದಿಂದ ಬೇರ್ಪಡಿಸಿದ್ದರು. ಆದ್ದರಿಂದ ಪ್ರವಾದಿ(ಸ) ರವರು ತಮ್ಮ ಪುತ್ರಿ ರುಖಿಯಾರೊಂದಿಗೆ ಅವರ ವಿವಾಹ ಮಾಡಿಸಿದರು.

ಮಕ್ಕದಲ್ಲಿ ದಿನೇ ದಿನೇ ಕುರೈಶರ ಸರದಾರರ ಕಾರ್ಯ ಯೋಜನೆಗಳಿಂದಾಗಿ ಮುಸಲ್ಮಾನರಿಗೆ ಕಷ್ಟ ನೀಡುವ ಯೋಜನೆಗಳು ಜೋರಾಗುತ್ತಲೇ ಇದ್ದವು. ಇದರಿಂದ ಹಝ್ರತ್ ಉಸ್ಮಾನ್(ರ) ಅವರಿಗೂ ಕಠಿಣ ರೀತಿಯ ಅಪಾಯವಿತ್ತು. ಇಂತಹ ಪರಿಸ್ಥಿತಿಗಳಲ್ಲಿ ಕೆಲವು ಮುಸ್ಲಿಂ ಪುರುಷರಿಗೆ ಮತ್ತು ಮಹಿಳೆಯರಿಗೆ ಹಬ್‌ಶಾ ವಲಸೆ ಹೋಗಲು ಅನುಮತಿ ದೊರೆಯಿತು. ಹಝ್ರತ್ ಉಸ್ಮಾನ್ ಮತ್ತು ಅವರ ಪತ್ನಿ ರುಖಿಯಾ ಅವರಲ್ಲಿ ಸೇರಿದವರಾಗಿದ್ದರು. ಹಬ್‌ಶಾ ವಲಸೆ ಹೋಗುವಾಗ ಅವರೇ ಆ ತಂಡದ ಅಮೀರರಾಗಿದ್ದರು. ಹಬ್‌ಶಾ ವಾಸದ ಕೆಲವೇ ದಿನಗಳಲ್ಲಿ ಅವರಿಗೆ ಪ್ರಚಾರದ ಭಾಗ್ಯವು ದೊರೆಯುತ್ತಿತ್ತು, ಹೀಗೆ ಪರದೇಶಗಳಲ್ಲಿ ಇಸ್ಲಾಮಿನ ಸಮದೇಶ ತಲುಪಿಸುವ ಭಾಗ್ಯ ಅವರಿಗೆ ಲಭಿಸಿತ್ತು.

ಪ್ರವಾದಿ ಮುಹಮ್ಮದ್(ಸ) ಒಬ್ಬೊಬ್ಬರನ್ನು, ಇಬ್ಬಿಬ್ಬರನ್ನು ಮಕ್ಕದ ಮುಸಲ್ಮಾನರಿಗೆ ಯಸ್‌ರಬ್ (ಮದೀನಾ) ವಲಸೆ ಹೋಗಲು ಅನುಮತಿ ನೀಡುತ್ತಿರುವಾಗ ಹಝ್ರತ್ ಉಸ್ಮಾನ್(ರ) ರವರು ಸಹ ತನ್ನ ಪತ್ನಿ ಹಝ್ರತ್ ರುಖಿಯಾ ಜೊತೆಗೂಡಿ ಮದೀನಕ್ಕೆ ಹೋದರು. ಮಕ್ಕದಿಂದ ಮದೀನಕ್ಕೆ ಹಿಜ್‌ರತ್ ನಂತರ ಹಝ್ರತ್ ಉಸ್ಮಾನರ ಪತ್ನಿ ಹಝ್ರತ್ ರುಖಿಯಾ ನಿಧನರಾದರು.

ಹಝ್ರತ್ ರುಖಿಯಾ ನಿಧನಗೊಂಡ ನಂತರ ಪ್ರವಾದಿ(ಸ) ರವರು ತನ್ನ ಇನ್ನೊಬ್ಬ ಪುತ್ರಿ ಹಝ್ರತ್ ಉಮ್ಮೇ ಕುಲ್ಸೂಮ್‌ರೊಂದಿಗೆ ಹಝ್ರತ್ ಉಸ್ಮಾನರ ವಿವಾಹ ಮಾಡಿಸಿದರು. ಹೀಗೆ ಪ್ರವಾದಿವರ್ಯರ ಇಬ್ಬರು ಪುತ್ರಿಯನ್ನು ವಿವಾಹವಾದ ಕಾರಣ ಅವರು "ಝುನ್ನೂರೀನ್" ಎಂಬ ಬಿರುದು ಪಡೆದು ಖ್ಯಾತಿ ಪಡೆದರು.

ಸಭಿಕರೇ! ಅರಬರಲ್ಲಿ ಪುರಾತನ ಕಾಲದಿಂದ ಗುಲಾಮ ಪದ್ಧತಿಯಿತ್ತು. ಇಸ್ಲಾಂ ಅದಕ್ಕೆ ನಿಷೇಧ ಹೇರಿದ್ದು ಮಾತ್ರವಲ್ಲ ಗುಲಾಮರನ್ನು ಸ್ವತಂತ್ರಗೊಳಿಸುವುದು ಒಂದು ಬಹುದೊಡ್ಡ ಪುಣ್ಯಕಾರ್ಯವಾಗಿದೆ ಎಂದು ಘೋಷಿಸಿಲಾಯಿತು. ವರದಿ ಪ್ರಕಾರ ಹಝ್ರತ್ ಉಸ್ಮಾನ್(ರ) ಸಾವಿರಾರು ಗುಲಾಮರನ್ನು ಸ್ವತಂತ್ರವಾಗಿಸಿದರು. ಮದೀನದ ಎಲ್ಲ ಓಣಿಯಲ್ಲೂ (ಮೊಹಲ್ಲ)

ಹಝ್ರತ್ ಉಸ್ಮಾನ್ ಗುಲಾಮರನ್ನು ಖರೀದಿಸಿ ಸ್ವತಂತ್ರಗೊಳಿದುದು ಕಂಡು ಬರುತ್ತಿದ್ದವು. ನಂತರ ಈ ಪುಣ್ಯಕಾರ್ಯವನ್ನು ಜಾರಿಯಲ್ಲಿರಿಸಲು ಪ್ರತಿ ಶುಕ್ರವಾರದಂದು ಒಬ್ಬ ಗುಲಾಮರನ್ನು ಸ್ವತಂತ್ರಗೊಳಿಸುವುದು ಮಾಮೂಲು ಮಾಡಿಕೊಂಡಿದ್ದರು.

ಹಝ್ರತ್ ಉಸ್ಮಾನ್(ರ) ರವರಿಗೆ ಕೆಲವು ಅಸಾಧಾರಣ ರೀತಿಯ ಸಾಂಪತ್ತಿಕ ತ್ಯಾಗಗಳನ್ನು ಮಾಡುವ ಭಾಗ್ಯ ದೊರೆತಿದೆ. ಮದೀನಾ ಹಿಜರತ್ ಮಾಡಿದ ನಂತರ ಮುಸಲ್ಮಾನರಿಗೆ ಕಷ್ಟದ ಕಾಲ ಬಂದೊದಗಿತ್ತು. ಆ ಒಂದು ಸಂದರ್ಭದಲ್ಲಿ ಪ್ರವಾದಿ ಮುಹಮ್ಮದ್(ಸ) ಮುಸಲ್ಮಾನರಿಗೆ, ಮೂಲಭೂತ ಅವಶ್ಯಕತೆಗಳಲ್ಲಿ ಒಂದಾದ ನೀರಿನ ಅವಶ್ಯಕತೆ ಪೂರೈಸಲು, ಒಂದು ಸಿಹಿ ನೀರಿನ ಬಾವಿ, (ಅದು ಯಹೂದಿಯೊಬ್ಬನ ಆಸ್ತಿ ಆಗಿತ್ತು) ಖರೀದಿಸಲು ಮನವಿ ಮಾಡಿದರು. ಆಗ ಹಝ್ರತ್ ಉಸ್ಮಾನ್(ರ) ಅದನ್ನು ಖರೀದಿಸಿ ಮುಸಲ್ಮಾನರಿಗೆ ಸಮರ್ಪಿಸಿದರು.

ಹಝ್ರತ್ ಮುಹಮ್ಮದ್(ಸ), ಹಝ್ರತ್ ಉಸ್ಮಾನ್(ರ) ಮತ್ತು ಇತರ ಸಹಾಬಿಯರು ಮದೀನಕ್ಕೆ ಬಂದು ಆರು ವರ್ಷವಾಗಿತ್ತು. ಮಕ್ಕ ಬಹುದೇವಾರಾಧಕರು ಇವರಿಗೆ ಹಜ್ಜ್ ಮಾಡಲು ನಿಷೇಧ ಹೇರಿದ್ದರು ಈ ನಡುವೆ ಪ್ರವಾದಿ(ಸ) ಒಂದು ದಿವ್ಯ ಸ್ವಪ್ನ ಕಂಡರು, ಅವರು 14, 15 ನೂರು ಸಹಾಬರ ಜೊತೆಗೂಡಿ ಖಾನಕಅಬದ ತವಾಫ್ (ಪ್ರದೀಕ್ಷಣೆ) ಮಾಡುತ್ತಿದ್ದಾರೆ. ಈ ಸ್ವಪ್ನದನ್ವಯ 14, 15 ನೂರು ಸಹಾಬರ ಜೊತೆಗೂಡಿ ಕಾಬದತ್ತ ಹೊರಟರು. ಮಕ್ಕದ ಸಮೀಪ ಹುದೇಬಿಯಾ ಜಾಗಕ್ಕೆ ತಲುಪಿ ಪವಿತ್ರ ಪ್ರವಾದಿ(ಸ) ರವರು ಕುರೈಶಿಯರ ಜೊತೆ ಮಾತನಾಡಲು ನಿರ್ಧರಿಸಿದರು. ಈ ಮಾತುಕತೆ ಅಥವಾ ಒಪ್ಪಂದವು ಇಸ್ಲಾಮಿನ ಇತಿಹಾಸದಲ್ಲಿ "ಸುಲಹ ಹುದೈಬಿಯಾ" ಹೆಸರಿನಿಂದ ಗುರುತಿಸಲ್ಪಡುತ್ತದೆ. ಆ ಸಂದರ್ಭದಲ್ಲಿ ಪವಿತ್ರ ಪ್ರವಾದಿವರ್ಯರು ಹಝ್ರತ್ ಉಸ್ಮಾನ್‌ರವರನ್ನು ಮಕ್ಕದ ಕುರೈಶರ ಬಳಿಗೆ ರಾಯಬಾರಿಯನ್ನಾಗಿ ಕಳುಹಿಸಿದ್ದರು. ಹಝ್ರತ್ ಉಸ್ಮಾನ್(ರ) ಅವರ ಈ ಸೇವೆ ಅವರ ಜೀವನದ ಒಂದು ಪ್ರಮುಖ ಘಟನೆಯಾಗಿದೆ. ಮತ್ತು ಅದರ ಪರಿಣಾಮಗಳನ್ವಯ ಅದು ಬಹು ದೊಡ್ಡ ಸೇವೆಯಾಗಿದೆ.

ಸುಲಹ ಹುದೇಬಿಯಾದ ಒಪ್ಪಂದದ ಎರಡು ವರ್ಷಗಳ ನಂತರ ಅಲ್ಲಾಹನ ವಿಧಿ ತೋರಿಸಿದ ಮಹಿಮೆ ಏನೆಂದರೆ 8 ಹಿಜರಿಯಲ್ಲಿ ಪ್ರವಾದಿ ಮುಹಮ್ಮದ್(ಸ) ರವರು ಹತ್ತು ಸಾವಿರ ಸಹಾಬರ ಜೊತೆಗೂಡಿ ವಿಜಯಿಯಾಗಿ ಸಂಭ್ರಮದಿಂದ ಮಕ್ಕ ಪ್ರವೇಶಿಸಿದರು. ಅವರಲ್ಲಿ ಹಝ್ರತ್ ಉಸ್ಮಾನ್(ರ)ರವರು ಸಹ ಸೇರಿದ್ದರು.

ಇಸ್ಲಾಮಿನ ಪ್ರಚಾರ ದಿನೇ ದಿನೇ ಪಸರುತ್ತಲೇ ಮುಸಲ್ಮಾನ ಸಂಖ್ಯೆ ಹೆಚ್ಚಾಗತೊಡಗಿತ್ತು. ಮತ್ತು ಮಸ್ಜಿದ್ ನಬವಿ ಸಣ್ಣದಾಗತೊಡಗಿತ್ತು. ಆದ್ದರಿಂದ ಪ್ರವಾದಿವರ್ಯರು(ಸ) ಅದನ್ನು ವಿಸ್ತರಿಸಲು ಯೋಜನೆ ಹಾಕಿದರು. ಅದಕ್ಕಾಗಿ ಮಸೀದಿಯ ಅಕ್ಕಪಕ್ಕದವರ ಮನೆಗಳನ್ನು ಮಸೀದಿಗೋಸ್ಕರ ಖರೀದಿಸಲು ಮನವಿ ಮಾಡಿದರು. ಹಝ್ರತ್ ಉಸ್ಮಾನ್‌ರವರಲ್ಲಿ ಸಂಪತ್ತು ಮಾತ್ರ ಹೆಚ್ಚಾಗಿರಲಿಲ್ಲ. ಬದಲು ಅವರ ಸಾಂಪತ್ತಿಕ ತ್ಯಾಗವು ಅಷ್ಟೇ ಹೆಚ್ಚಾಗಿತ್ತು. ಕಾರಣ ಅವರು ತಕ್ಷಣ 25,30 ಸಾವಿರ ದಿರ್‌ಹಮ್‌ನ ವ್ಯವಸ್ಥೆ ಮಾಡಿದರು. ಅದರಿಂದ ಮಸ್ಜಿದ್ ನಬ್ವಿಯ ಅಕ್ಕಪಕ್ಕದಲ್ಲಿರುವ ಮನೆಗಳನ್ನು ಮತ್ತು ಭೂಮಿ ಖರೀದಿಸಿ ಮಸೀದಿಗಾಗಿ ಬಳಸಲಾಯಿತು. ಅವರ ಈ ತ್ಯಾಗ ಮತ್ತು ಧಾರ್ಮಿಕ ಸೇವೆ ಅಂತ್ಯ ತೀರ್ಮಾನದ ದಿನದವರೆಗೂ ಬರುವ ಪೀಳಿಗೆ ಸ್ಮರಿಸುವುವು.

ಹಝ್ರತ್ ಪೈಗಂಬರ್(ಸ) ತಬೂಕ್ ಯುದ್ಧದ ಸಲುವಾಗಿ ಸಾಂಪತ್ತಿಕ ತ್ಯಾಗಕ್ಕಾಗಿ ಆಗ್ರಹಿಸಿದರು. ಆಗ ಹಝ್ರತ್ ಉಸ್ಮಾನ್(ರ) ಆ ಸಂದರ್ಭದಲ್ಲಿ ಒಂದು ಸಾವಿರ ಒಂಟೆಗಳು ಅದರಿ ಒಂದು ನೂರು ಒಂಟೆಗಳು ದವಸ ಧಾನ್ಯಗಳಿಂದ ಸುಸಜ್ಜಿತವಾಗಿದ್ದವು. ನೂರು ಅಥವಾ ಐವತ್ತು ಕುದುರೆಗಳು ಮತ್ತು ಹತ್ತು ಸಾವಿರ ದೀನಾರ್ ನಗದು ಪವಿತ್ರ ಪ್ರವಾದಿಯರ ಸೇವೆಯಲ್ಲಿ ಸಮರ್ಪಿಸಿದರು. ಅಲ್ಲದೆ ಮೂರನೆಯ ಒಂದು ಭಾಗದಷ್ಟು ಸೈನಿಕರಿಗೆ ಎಲ್ಲಾ ರೀತಿಯ ಅಗತ್ಯಗಳನ್ನು ಪೂರೈಸಿದರು. ಹಝ್ರತ್ ಪೈಗಂಬರ್(ಸ) ರವರು ಅವರ ಈ ಅಸಾಧಾರಣ ಸಾಂಪತ್ತಿಕ ತ್ಯಾಗದಿಂದ ತುಂಬಾ ಸಂತೋಷವಾದರು. ಹಝ್ರತ್ ಉಸ್ಮಾನ್(ರ) ಅವರು ಸ್ವತಃ ಈ ಯುದ್ಧದಲ್ಲಿ ಭಾಗಿಯಾದರು.

ಹಝ್ರತ್ ಉಸ್ಮಾನ್(ರ) ಅವರಿಗೆ ಇಸ್ಲಾಮಿನ ಸೇವೆ ಸಲ್ಲಿಸಲು ದೊರಕಿದ ಭಾಗ್ಯಗಳಲ್ಲಿ ಒಂದು ಸರ್ವೋನ್ನತ ಸೇವಾಭಾಗ್ಯ ಎಂದರೆ ಅದು ಪವಿತ್ರ ಖುರ್‌ಆನ್‌ನ ಬರಹವಾಗಿದೆ. ಅವರು ಹಝ್ರತ್ ಪೈಗಂಬರ್(ಸ) ರವರ ಕಾಲದಲ್ಲಿ ದಿವ್ಯವಾಣಿಗಳನ್ನು ಲಿಖಿತರೂಪಕ್ಕೆ ತರುವ ಕಾರ್ಯ ನಿರ್ವಹಿಸುತ್ತಿದ್ದರು. ಹಝ್ರತ ಉಸ್ಮಾನ್ ಅವರಿಗೆ ದಿವ್ಯವಾಣಿಗಳನ್ನು ಲಿಖಿತರೂಪ ಕೊಡುವ ಹಾಗೂ ಪವಿತ್ರ ಪ್ರವಾದಿ(ಸ) ರವರ ನಿರ್ದೇಶನದ ಮೇರೆಗೆ ವಚನಗಳನ್ನು ಮತ್ತು ಅಧ್ಯಾಯಗಳನ್ನು ಕ್ರಮಾನುಸಾರವಾಗಿ ಮಾಡುವ ಸೇವೆಯೂ ಸಹ ಅವರಿಗೆ ಲಭಿಸಿತು. ಈ ಸೇವೆ ಪವಿತ್ರ ಖುರ್‌ಆನ್ ಅವತರಣಿಕೆಯಿಂದ ಕೊನೆಯತನಕ ಜಾರಿಯಲ್ಲಿತ್ತು.

ಹಝ್ರತ್ ಉಸ್ಮಾನ್(ರ) ಅವರಿಗೆ ಹಝ್ರತ್ ಅಬೂಬಕರ್(ರ) ರವರ ಖಿಲಾಫತ್ ಅವಧಿಯಲ್ಲಿ ಅವರ ಹೆಗಲಿಗೆ ಹೆಗಲುಕೊಟ್ಟು ಸೇವೆ ಸಲ್ಲಿಸುವ ಭಾಗ್ಯ ಪಡೆಯುತ್ತಿದ್ದರು. ಹಝ್ರತ್ ಅಬೂಬಕರ್ ಅವರ ಖಿಲಾಫತ್ ಕಾರ್ಯಗಳಲ್ಲಿ ತಮ್ಮ ಅಮೂಲ್ಯವಾದ ಸಲಹೆಗಳನ್ನು ನೀಡುತ್ತಿದ್ದರು. ಹಝ್ರತ್ ಅಬೂಬಕರ್(ರ) ಅವರ ನಿಧನದ ನಂತರ ಹಝ್ರತ್ ಉಮರ್(ರ) ಖಿಲಾಫತ್‌ರಾದರು. ಆಗ ಅವರು ಆಡಳಿತವನ್ನು ಬಲಪಡಿಸಲು ವಿವಿಧ ವಿಭಾಗಗಳನ್ನು ರಚಿಸಿದರು. ಹಝ್ರತ್ ಉಸ್ಮಾನ್ ಅವರಿಗೆ ಸದಖಾತ್ (ದಾನಗಳ) ಲೆಕ್ಕಪತ್ರ ನಿರ್ವಹಿಸುವ ಕಾರ್ಯಕ್ಕೆ ನಿಯುಕ್ತಗೊಳಿಸಿದರು. ಅವರು(ರ) ಖಿಲಾಫತ್ ರಕ್ಷಕರು ಎಂದರು ಕರೆಯಲ್ಪಡುತ್ತಿದ್ದರು.

ಹಝ್ರತ್ ಉಮರ್ ಫಾರೂಖ್ (ರ) ಅವರ ಮೇಲೆ 23 ಝಿಲ್–ಹಜ್ಜ್ 23 ಹಿಜರಿಯಂದು ಮಾರಣಾಂತಿಕ ಹಲ್ಲೆಯಾಯಿತು. ಹಝ್ರತ್ ಉಮರ್ (ರ) ಖಿಲಾಫತ್ ಆಯ್ಕೆಗಾಗಿ ಒಂದು ಸಮಿತಿಯನ್ನು ರಚಿಸಿದ್ದರು. ಅದರಲ್ಲಿ ಹಝ್ರತ್ ಉಸ್ಮಾನ್(ರ)ರವರ ಹೆಸರು ಸರ್ವೋಪರಿಯಾಗಿತ್ತು.

ಹಲ್ಲೆಯ ನಾಲ್ಕು ದಿನಗಳ ನಂತರ ಹಝ್ರತ್ ಉಮರ್(ರ) 27 ಝಿಲ್ ಹಜ್ಜ್ 27 ಹಿಜರಿಗೆ ಅವರು ನಿಧನಗೊಂಡರು. ಅದರ ಮೂರು ದಿನಗಳ ನಂತರ ಬಹುಮತನದ ಅಭಿಪ್ರಾಯಗಳ ಮೇರೆಗೆ ಮೂರನೆಯ ಖಲೀಫರಾಗಿ ಆಯ್ಕೆ ಮಾಡಲಾಯಿತು.

ಹಝ್ರತ್ ಉಮರ್(ರ) ಬಿಟ್ಟು ಹೋದ ಆಡಳಿತ ವ್ಯವಸ್ಥೆಯನ್ನೇ ಅವರು ಜಾರಿಯಲ್ಲಿರಿಸಿದರು. ಯಾವುದೇ ವಿಶೇಷ ರೀತಿಯ ಬಲದಾವಣೆ ಮಾಡಲಿಲ್ಲ. ಆದರೆ ನಂತರ ಅಗತ್ಯಕ್ಕನುಸಾರವಾಗಿ ಅವರು ಕೆಲವು ರಾಜ್ಯಪಾಲರುಗಳನ್ನು ವರ್ಗಾಯಿಸಿದರು. ಅವರು (ಅ) ಇಸ್ಲಾಮಿ ಲೋಕವನ್ನು ಜುಮುಅ ನಮಾಝ್‌ನತ್ತ ವಿಶೇಷ ಗಮನ ಸೆಳೆದರು ಜುಮುಅ ನಮಾಝ್‌ಗಿಂತ ಮೊದಲು ಎರಡನೆ ಅಝಾನ್‌ನ ಪ್ರಾರಂಭ ಇವರಿಂದಲೇ ಆಯಿತು.

ಹಝ್ರತ್ ಉಸ್ಮಾನ್(ರ) ರವರ ಖಿಲಾಫತ್ ಅವಧಿಯಲ್ಲಿ ಹಲವು ಹೊಸ ನಿರ್ಮಾಣ ಕಾರ್ಯಗಳಾದವು. ವಿಶಾಲ ನಿರ್ಮಾಣ ಕಾರ್ಯಗಳ ಯೋಜನೆಗಳಾದವು ಮತ್ತು ಜನಕಲ್ಯಾಣದ ಕಾರ್ಯಗಳಾದವು. ಹಲವು Public Buildings, ರಸ್ತೆಗಳು, ಸೇತುವೆಗಳು, ಅತಿಥಿಗೃಹಗಳು, ಮತ್ತು ಪ್ರಯಾಣ ತಂಗುದಾಣಗಳು ನಿರ್ಮಾಣವಾದವು. ಅವರ(ರ) ಅವಧಿಯಲ್ಲಿ ವಿಜಯಿಯಾದ ಕ್ಷೇತ್ರಗಳಲ್ಲಿ ಸೈನಿಕ ಠಾಣಗಳನ್ನು ನಿರ್ಮಿಸಲಾಯಿತು. ಅದೇ ರೀತಿಯಲ್ಲಿ ರಾಷ್ಟ್ರೀಯ ಜಾನುವಾರ ಮೇವುಠಾಣಗಳನ್ನು ಹೆಚ್ಚಿಸಲಾಯಿತು. ಅಂತೂ ಜನರಿಗೆ ಮೊದಲಿಗಿಂತ ಹೆಚ್ಚು ಸವಲತ್ತುಗಳನ್ನು ಲಭಿಸುವಂತಾಯಿತು.

ಹಝ್ರತ್ ಉಸ್ಮಾನ್(ರ) ರವರ ಖಿಲಾಫತ್ ಅವಧಿಯಲ್ಲಿ ದೇಶ ದೇಶಗಳು ವಿಜಯ ಸಾಧಿಸುತ್ತಿದ್ದಂತೆಯೇ, ತಂಡೋಪತಂಡವಾಗಿ ಜನರು ಇಸ್ಲಾಮಿನಲ್ಲಿ ಸೇರುತ್ತಿದ್ದಂತೆ, ಇಸ್ಲಾಮಿಕ್ ಆಡಳಿತಗಳಲ್ಲಿ ಖಿಲಾಫತ್ ಮತ್ತು ಕೇಂದ್ರ ಎರಡನ್ನು ಮುಗಿಸುವ ಸಂಚಿನ ಅನ್ವಯ ಯಮನ್ ನಿವಾಸಿಯ ಒಬ್ಬ ಕುತ್ಸಿತ ಯಹೂದಿ ಅಬ್ದುಲ್ಲ ಬಿನ್ ಸಬಾ ನೇತೃತ್ವದಲ್ಲಿ ಅಪಾಯಕರ ಬೆಳವಣಿಗೆಗಳು ತಲೆ ಎತ್ತಲು ಶುರುವಾದವು. ಅದೇ ಸಂಚುಗಳ ಪರಿಣಾಮವಾಗಿ ಅದು ಹಝ್ರತ್ ಉಸ್ಮಾನರ ಹುತಾತ್ಮ ರೂಪದಲ್ಲಿ ಪ್ರಕಟವಾಯಿತು.

ಶಹೀದ್ ಆದಾಗ ಅವರ ವಯಸ್ಸು 82 ವರ್ಷಗಳಾಗಿತ್ತು. ಅವರು ಅತ್ಯಂತ ದೇವಭಯಭಕ್ತಿಯುಳ್ಳವರು, ಸಜ್ಜನ ಸ್ವಭಾವದವರು, ಪರಿಪೂರ್ಣ ಮಾನವರಾಗಿದ್ದರು. ಅವರ ಇಡೀ ವಯಸ್ಸು ಇಸ್ಲಾಮ್ ಧರ್ಮದ ಸೇವೆಯಲ್ಲಿ ಮತ್ತು ದೇವಾರಾಧನೆಗಳಲ್ಲಿ ಕಳೆಯಿತು. ಹಝ್ರತ್ ಪೈಗಂಬರ್(ಸ) ರವರಿಗೆ ಹೆಚ್ಚು ವಿಶೇಷ ಪ್ರೀತಿಯುಳ್ಳ ಸಹಾಬರ ಪೈಕಿ ಇವರಾಗಿದ್ದರು. ಹಝ್ರತ್ ಪೈಗಂಬರ್(ಸ) ಹಲವು ಸಂದರ್ಭದಲ್ಲಿ ಇವರ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದರು. ಪವಿತ್ರ ಪ್ರವಾದಿಯರ ಇಬ್ಬರು ಪುತ್ರಿಯರು ಒಬ್ಬರ ನಂತರ ಮತ್ತೊಬ್ಬರನ್ನು ಇವರು ವಿವಾಹವಾದರು. ಅವರಿಂದ ಇವರಿಗೆ "ಝುನ್ನೂರೈನ್" ಎಂಬ ಬಿರುದು ಲಭಿಸಿತು.

ಯಾವ ರೀತಿ ಅವರು ಇಸ್ಲಾಮಿನ ಉನ್ನತಿಗಾಗಿ, ಖುರ್‌ಆನ್‌ನ ಪ್ರಚಾರಕ್ಕಾಗಿ, ಖಿಲಾಫತ್ ಸ್ಥಾಪನೆಗಾಗಿ ತನ್ನ ಸಂಪತ್ತು, ಪ್ರಾಣ, ಸಮಯ ಮತ್ತು ಮಾನವೆಲ್ಲಾ ಸಮರ್ಪಿಸಿದರು, ತುಂಬಾ ನಿಷ್ಠೆಯಿಂದ ದೇವನ ಕಾರ್ಯಗಳಲ್ಲಿ ತೊಡಗಿದರು, ಮತ್ತು ಕಿಡಿಗೇಡಿತನದ ಸಮಯದಲ್ಲಿ ಶಕ್ತಿ ಸಾಮರ್ಥ್ಯವಿದ್ದವರಾದರೂ ಶಾಂತಿಯ ಸರದಾರರಾಗಿ ತಾಳ್ಮೆಯಂತಹ ಮಾದರಿಯನ್ನು ತೋರಿಸಿಕೊಟ್ಟರೆಂದರೆ ಬರುವ ಪೀಳಿಗೆಗಳು ಅಂತ್ಯತೀರ್ಮಾನದ ದಿನದವರೆಗೆ ಅವರ ಈ ಪವಿತ್ರವಾದ ಆಡಳಿತ ಮರೆಯಲಾರರು. ಇನ್‌ಶಾ ಅಲ್ಲಾಹ್.

ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್ ರವರ ಸ್ಮರಣೆ ಭಾಷಣದ ಈ ಎರಡನೆಯ ಭಾಗದಲ್ಲಿ ಸಯ್ಯದ್‌ನಾ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ರವರ ಉತ್ಕೃಷ್ಟ ಸಹಾಬಿ ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್ (ರ) ರವರ ಪವಿತ್ರ ಚರಿತ್ರೆಯ

ಬಗ್ಗೆ ಒಂದಿಷ್ಟು ವಿಷಯಗಳನ್ನು ವಿವರಿಸುವೆನು.

ನಾವು ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ರವರ ಪವಿತ್ರ ಹಸ್ತದಲ್ಲಿ ಬೈಅತ್ ಮಾಡುವವರ ಚರಿತ್ರೆಯನ್ನು ಅಧ್ಯಯನ ಮಾಡುವಾಗ, ನಿಸ್ಸಂಶಯವಾಗಿಯೂ ನಮ್ಮ ಮುಂದೆ ಬರುವ ವಿಷಯವೇನೆಂದರೆ ಯಾವ ಗುಣಗಳು ಹಝ್ರತ್ ಪೈಗಂಬರ್(ಸ) ರವರುಗಳದ್ದಾಗಿದ್ದವೋ. ಅದೇ ಗುಣಗಳು ಅವರಂತೆಯೇ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ರವರ ಸಹಾಬರಲ್ಲಿ ಕಾಣಬಹುದಾಗಿದೆ.

ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ರವರ ಓರ್ವ ಸಜ್ಜನ ಸಹಾಬಿ ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್‌ರವರ ಪವಿತ್ರ ಚರಿತ್ರೆಯ ಕೆಲವು ಆಯ್ಕೆ ಘಟನೆಗಳನ್ನು ಪ್ರಸ್ತುತಪಡಿಸಿದರು.

ಸಭಿಕರೇ! ಹಜ್‌ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್‌ರವರ ಸಂಬಂಧ ಓರ್ವ ಗೌರವಾನ್ವಿತ ಕುಟುಂಬ ಗೋರಿ ಕುಟುಂಬದಿಂದಾಗಿತ್ತು. ಅವರು ಮಾಲೀರ್ ಕೋಟ್ಲಾ ರಾಜ್ಯದ ನಾಯಕರಾಗಿದ್ದರು. ಅವರ ಪೂರ್ವಜರು ಶೇಖ್ ಸದರ್ ಜಹಾಂ ಸಾಹಿಬ್ ಓರ್ವ ದೇವಭಕ್ತ ಮತ್ತು ಜಲಾಲಾಬಾದ್ ಸರ್ವಾನಿ ಸಮುದಾಯದ ಪಠಾಣರಾಗಿದ್ದರು. ಅವರ ತಂದೆಯ ಹೆಸರು ನವಾಬ್ ಗುಲಾಂ ಮುಹಮ್ಮದ್ ಖಾನ್ ಸಾಹಿಬ್ ಆಗಿತ್ತು. ಅವರು 1870 ರಲ್ಲಿ ನವಾಬ್ ಬೇಗಂ ಸಾಹಿಬರ ಒಡಲಿನಿಂದ ಹುಟ್ಟಿದರು. ಅವರು ಅವರ ತಾಯಿಯ ಮೊದಲನೆಯ ಮತ್ತು ಸಹೋದರರಲ್ಲಿ ಮೂರನೆಯವರಾಗಿದ್ದರು. ಬಾಲ್ಯದಿಂದಲೇ ಅವರಲ್ಲಿ ಧಾರ್ಮಿಕ ಉತ್ಸುಕತೆ ಮತ್ತು ನಿಷ್ಠೆ ಜನ್ಮ ತಾಳಿತ್ತು. ಹಜ್‌ರತ್ ಅಖದಸ್ ಮಸೀಹ್ ಮೌಊದ್(ಅ) ರೊಂದಿಗೆ ನೇರ ಸಂಬಂಧ ಹೊಂದುವುದಕ್ಕಿಂತ ಮೊದಲು ಹಝ್ರತ್ ನವಾಬ್ ಸಾಹಿಬರ ಕುಟುಂಬದ ಓರ್ವ ಗೌರವಾನ್ವಿತ ಉತ್ತಮ ಸಂಬಂಧ ಹೊಂದಿದವರಾಗಿದ್ದರು. ಅದು ಅಂತಿಮವಾಗಿ ಹುಝೂರ್ (ಅ) ರವರು ಮಾಲೀಕ್ ಕೋಟ್ಲಾ ಆಗಮಿಸಲು ಕಾರಣವಾಯಿತು. 1884 ರಲ್ಲಿ ಹುಝೂರ್(ಅ) ಈ ಪ್ರಯಾಣ ಏಕೆ ಹಮ್ಮಿಕೊಂಡಿದ್ದರು ಎಂದರೆ ನವಾಬ್ ಇಬ್ರಾಹಿಂ ಅಲಿ ಖಾನ್ ಸಾಹಿಬರು ಬರಾಹಿನ್ ಅಹ್ಮದಿಯಾ ಪ್ರಕಟಣೆಯಲ್ಲಿ ಭಾಗಿಯಾಗಿದ್ದರು. ಅವರು ಅಸ್ವಸ್ಥರಾದ ಸುದ್ದಿ ತಿಳಿದು ದುಆ ಮಾಡಲು ಆಗಮಿಸಿದ್ದರು ಹೀಗೆ ಅವರನ್ನು ವಿಚಾರಿಸಲು ಮತ್ತು ಅಭಿನಂದಿಸುವ ಉದ್ದೇಶವಾಗಿತ್ತು.

ಹಝ್ರತ್ ನವಾಬ್ ಸಾಹಿಬರ ಪಾಲನೆ–ಪೋಷಣೆ ಪ್ರಾರಂಭದಿಂದಲೂ ಧಾರ್ಮಿಕ ಪರಿಸರದಲ್ಲಾಗಿತ್ತು. ವಯಸ್ಸಿನ ಪ್ರಾರಂಭಿಕ ಹಂತದಲ್ಲೇ ಅವರು ತಮ್ಮ ಗುರುಗಳಿಂದ ಹಝ್ರತ್ ಮಸೀಹ್ ಮೌಊದ್ ರವರ ಬಗ್ಗೆ ತಿಳಿದಿದ್ದರು. ಅವರ ಮೇಲೆ ಧರ್ಮದ ಪ್ರಭಾವ ಬಹಳಷ್ಟು ಇತ್ತು. ಆ ದಿನಗಳಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಯಾವ ದಾವೆಯನ್ನು ಸಾರಿರಲಿಲ್ಲ. ಕ್ರಮೇಣ ಹಝ್ರತ್ ಅಖದಸ್ ಅಲೈಹಿಸ್ಸಲಾಮ್ ಅವರ ವಿವರಗಳು ಅವರಿಗೆ ತಲುಪುತ್ತಿದ್ದವು. ಹಝ್ರತ್ ನವಾಬ್ ಸಾಹಿಬ್ 1899 ರಲ್ಲಿ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ರವರೊಡನೆ ಪತ್ರ ವ್ಯವಹಾರ ಪ್ರಾರಂಭಿಸಿದರು. ಹಝುರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್ 1890 ರಲ್ಲಿ 20 ವರ್ಷದ ವಯಸ್ಸಿನಲ್ಲಿ ಖಾದಿಯಾನ್‌ಗೆ ಐತಿಹಾಸಿಕ ಪ್ರಯಾಣ ಮಾಡಿದರು. ಅವರ ಗುಣಗಳಲ್ಲಿ ಅಲ್ಲಾಹನ ಕಡೆಯಿಂದ ಸದ್ಗುಣಗಳು ಸ್ಥಾಪಿತವಾಗಿದ್ದವು. ಈ ಪ್ರಯಾಣ ಅವರು ಅಹ್ಮದಿಅತ್‌ಗೆ ಸೇರುವ ಮೊದಲು ಸತ್ಯವನ್ನು ಅರಿಯಲು ಬೆಳೆಸಿದ್ದರು. ಕೆಲವು ಪ್ರಶ್ನೆಗಳ ತೃಪ್ತಿಕರ ಉತ್ತರಗಳನ್ನು ಪಡೆದ ನಂತರ ಅವರು ತಡಮಾಡದೆ ಬೈಅತ್ತಿನ ಪತ್ರ ಬರೆದರು. ಬೈಅತ್ ರಿಜಿಸ್ಟರ್‌ನಲ್ಲಿ ಅವರ ಬೈಅತ್ ಸಂಖ್ಯೆ 210 ಮತ್ತು ಬೈಅತ್ ಮಾಡಿದ ದಿನಾಂಕ 19 ನವೆಂಬರ್ 1890 ಎಂದು ನಮೂದಿಸಲಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) "ಇಝಾಲಾ ಅವ್‌ಹಾಮ್" ತನ್ನ ಗ್ರಂಥದಲ್ಲಿ ಹಝ್ರತ್ ನವಾಬ್ ಸಾಹಿಬ್ ಮತ್ತು ಅವರ ಕುಟುಂಬದ ಬಗ್ಗೆ ವಿವರಗಳನ್ನು ನೀಡಿದ್ದಾರೆ.

ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ಹಝ್ರತ್ ನವಾಬ್ ಸಾಹೀಬರಿಗೆ ಬರೆದ ಪತ್ರಗಳಲ್ಲಿ ಪದೇ ಪದೇ ಕೆಲ ಸಮಯಕ್ಕಾದರೂ ತಮ್ಮ ಸಹವಾಸದಲ್ಲಿರಲು ಹೇಳುತ್ತಿದ್ದರು. ಹುಜೂರ್(ಅ) ತನ್ನ ಪತ್ರದ ಕೊನೆಭಾಗದಲ್ಲಿ ಹೇಳಿದರು. ನಾನು ಬಯಸುವುದೇನೆಂದರೆ ಹೇಗಾದರೂ ಮಾಡಿ 27 ಡಿಸೆಂಬರ್ 1892 ರಂದು ನಡೆಯುವ ಜಲ್ಸದಲ್ಲಿ ತಾವು ಅವಶ್ಯವಾಗಿ ಹಾಜರಾಗಬೇಕು.

ಹಾಗೆ ಹಝ್ರತ್ ನವಾಬ್ ಸಾಹೇಬ್ ಈ ಜಲ್ಸದಲ್ಲಿ ಭಾಗವಹಿಸಿದರು. ಹಝ್ರತ್ ಮಸೀಹ್ ಮೌಊದ್(ಅ) ರವರ ಗಮನ ಮತ್ತು ಪ್ರೀತಿ ಹಾಗೂ ಪ್ರಾರ್ಥನೆಗಳ ಪರಿಣಾಮವಾಗಿ ಅಲ್ಲಾಹನು ತನ್ನ ಅನುಗ್ರಹದಿಂದ ನವಾಬ್ ಸಾಹೇಬರ ಎಲ್ಲಾ ಕಷ್ಟಗಳನ್ನು ನಿವಾರಿಸಿದಂತಾಯಿತು. ಮತ್ತು ಹೃದಯಶುದ್ಧಿಯೊಂದಿಗೆ ಖಾದಿಯಾನ್‌ಗೆ ಹಿಜರತ್ ಮಾಡುವ ಭಾಗ್ಯ ದೊರೆಯಿತು. ಹಿಜ್‌ರತ್ ಮಾಡಿದ ನಂತರ ಅವರು ಎರಡು ಸಣ್ಣ ಕೊಠಡಿಗಳಲ್ಲಿ ವಾಸ ಮಾಡಿದರು ಅದು 'ಅದ್ದಾರ್" ಹೊಂದಿಸಲ್ಪಟ್ಟಿದ್ದವು.

ಹಝ್ರತ್ ಮಸೀಹ್ ಮೌಊದ್(ಅ) ರವರ ಪ್ರೀತಿ ಆಯಾಯಾ ಸಂದರ್ಭಗಳಲ್ಲಿ ವ್ಯಕ್ತವಾಗುತ್ತಿತ್ತು. ಹುಝೂರ್(ಅ) ಅವರಿಗೆ ಖಾದಿಯಾನಿನಲ್ಲಿ ಮನೆ ನಿರ್ಮಿಸಲು ಹಲವು ಸಲ ಆಗ್ರಹಪಡಿಸಿದರು. ಅಲ್ಲಾಹನು ಅವರ ಮನೆಗಳನ್ನು ತುಂಬಾ ಅನುಗ್ರಹಗಳಿಂದ ತುಂಬಿದನು. ಹಝ್ರತ್ ನವಾಬ್ ಸಾಹಿಬ್ ಅವರ ಮೊದಲ ಪತ್ನಿಯಿಂದ ಇಬ್ಬರು ಹೆಣ್ಣುಮಕ್ಕಳು ಅವರಲ್ಲಿ ಒಬ್ಬಳು ಅಮತುಸ್ಸಲಾಂ ಕೆಲವು ತಿಂಗಳುಗಳಲ್ಲಿ ವಫಾತ್ ಹೊಂದಿದಳು. ಇನ್ನೊರ್ವಳು ಪುತ್ರಿ ಹಝ್ರತ್ ಬುಝೈನಖ್ ಬೇಗಂ ಸಾಹಿಬ್ ಹಝ್ರತ್ ಮಿರ್ಝಾ ಶರೀಫ್ ಅಹ್ಮದ್ ಸಾಹಿಬ್‌ರ ಪತ್ನಿಯಾಗಿದ್ದರು. ಅವರ ಜನನ 19 ಮೇ 1893 ರಲ್ಲಾಗಿತ್ತು. ಅದರ ನಂತರ ಅಲ್ಲಾಹನು ಅವರಿಗೆ 4 ಪುತ್ರರನ್ನು ದಯಪಾಲಿಸಿದನು.

ಅಲ್ಲಾಹನ ವಿಧಿಯನ್ವಯ 17 ಫೆಬ್ರವರಿ 1908 ರಂದು ಹಝ್ರತ್ ಮಸೀಹ್ ಮೌಊದ್(ಅ) ರವರ ಹಿರಿಯ ಪುತ್ರಿ ಹಝ್ರತ್ ನವಾಬ್ ಮುಬಾರಕಾ ಬೇಗಂ ಸಾಹಿಬ ಅವರ ವಿವಾಹ ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್‌ಸಾಹಿಬ್‌ರೊಂದಿಗಾಯಿತು. ಹಝ್ರತ್ ಮೌಲ್ವಿ ನೂರುದ್ದೀನ್ ಸಾಹಿಬ್ ಅವರ ನಿಕಾಹ್ ಪಠಿಸಿದರು. ಹಝ್ರತ್ ಮಸೀಹ್ ಮೌಊದ್(ಅ) ಅವರ ನಿಧನದ ನಂತರ 14 ಮಾರ್ಚ್ 1909 ರಂದು ಹಝ್ರತ್ ನವಾಬ್ ಮುಬಾರಕಾ ಬೇಗಂ ಸಾಹಿಬ ಹಝುರತ ನವಾಬ್ ಸಾಹಿಬರ ಮನೆಗೆ ಬಂದರು. ಹಝುರತ್ ನವಾಬ್ ಸಾಹಿಬ್‌ರ ಮೊದಲ ಪತ್ನಿ ಅವರ ಏಕೈಕ ಪುತ್ರಿ ಹಝ್ರತ್ ನವಾಬ್ ಬುಝೈನಬ್ ಬೇಗಂ ಸಾಹಿಬ ಅವರ ವಿವಾಹ ಹಝ್ರತ್ ಮಸೀಹ್ ಮೌಊದ್(ಅ)ರವರ ಪ್ರೀತಿಯ ಪುತ್ರ ಹಝುರತ್ ಮಿರ್ಜಾ ಶರೀಫ್ ಅಹ್ಮದ್ ಸಾಹಿಬರೊಂದಿಗೆ 9 ಮೇ 1909 ರಂದು ಆಯಿತು. ಹಝ್ರತ್ ಮಸೀಹ್ ಮೌಊದ್ (ಅ) ಅವರು ತಮ್ಮ ಜೀವಿತ ಕಾಲದಲ್ಲೇ ಈ ಸಂಬಂಧ ನಿಶ್ಚಯಿಸಿದರು. ಹಝ್ರತ್ ಬುಝೈತಬ್ ಸಾಹಿಬರು ಹಝ್ರತ್ ಖಲೀಫತುಲ್ ಮಸೀಹ್ ಪಂಚಮರ ಅಜ್ಜಿಯ ಸಂಬಂದಿಕರಾಗಿದ್ದರು. ನವಾಬ್ ಸಾಹಿಬ್ ಮತ್ತು ಹಝ್ರತ್ ನವಾಬ್ ಮುಬಾರಕಾ ಬೇಗಂ ಸಾಹಿಬಾರ ನಡುವೆ 27 ವರ್ಷಗಳ ಅಂತರವಿದೆ. ಆದರೂ ಸಹ ಹಝ್ರತ್ ನವಾಬ್ ಸಾಹಿಬ್ ಹಝ್ರತ್ ನವಾಬ್ ಮುಬಾರಕಾ ಬೇಗಂ ಸಾಹಿಬಾ ಅವರ ಬುದ್ಧಿವಂತಿಕೆ, ತಿಳುವಳಿಕೆ, ಪ್ರೀತಿ ಮತ್ತು ನಿಷ್ಠೆ ಮತ್ತು ನೈತಿಕತೆಯನ್ನು ಗೌರವಿಸುತ್ತಿದ್ದರು. ಅವರು ಪವಿತ್ರ ತಂದೆಯ ಪವಿತ್ರ ಮಗಳಾಗಿದ್ದಾರೆ ಎಂಬ ತಿಳುವಳಿಕೆ ಅವರಿಗಿತ್ತು. ಹಝ್ರತ್ ನವಾಬ್ ಸಾಹಿಬ್ ಎಲ್ಲಾ ಸಣ್ಣ ಸಣ್ಣ ವಿಷಯಗಳಲ್ಲಿ ಹಝ್ರತ್ ಬೇಗಂ ಸಾಹಿಬರಿಂದ ಸಲಹೆ ಪಡೆಯಲು ಪ್ರಯತ್ನಿಸುತ್ತಿದ್ದರು.

ಒಂದು ಸಂದರ್ಭದಲ್ಲಿ ಹೊಸ ವರ್ಷದ ಕ್ಯಾಲೆಂಡರ್ ಒಂದನ್ನು ಹಝ್ರತ್ ಬೇಗಮ್ ಸಾಹಿಬ ಅವರಿಗೆ ನೀಡಿ ಅದರ ಮೇಲೆ ಕೆಲವೊಂದು ಕವಿತೆ ಸಾಲುಗಳನ್ನು ಬರೆಯಲು ಇಚ್ಛಿಸಿದರು. ಹಝ್ರತ್ ಬೇಗಂ ಸಾಹಿಬ ಕ್ಯಾಲೆಂಡರ್‌ನ ಮುಖಪುಟದ ಮೇಲೆ ಹೀಗೆ ಬರೆದರು:

ಓಝುಲ್ ಖುದಾಕಾ ಸಾಯಾ ಹಮ್ ಪೆ ರಹೆ ಹಮೇಶ್
ಹರ್ ದಿನ್ ಚಢ್ಹೆ ಮುಬಾರಕ್ ಹರ್ ಶಬ್ ಬಖೈರ್ ಗುಝ್ರೆ

ಅವರು ಹೇಳುತ್ತಾರೆ: ಹಝ್ರತ್ ನವಾಬ್ ಸಾಹಿಬ್ ಪ್ರತಿ ವರ್ಷ ಹೊಸ ಕ್ಯಾಲೆಂಡರ್ ಮೇಲೆ ಅದೇ ಕವನ ಸಾಲುಗಳನ್ನು ಬರೆಯುತ್ತಿದ್ದರು. ಅದೇ ರೀತಿ ಹಝ್ರತ್ ನವಾಬ್ ಸಾಹಿಬ ಯಾವಾಗಲೂ ಕವನ ಸಾಲುಗಳನ್ನು ಹೇಳಲು ಇಚ್ಛಿಸುತ್ತಿದ್ದರು.

ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ನವಾಬ್ ಸಾಹಿಬರಿಗೆ ಪದೇ ಪದೇ ಖಾದಿಯಾನಿಗೆ ಬರುತ್ತಿರಲು ಮತ್ತು ಖಾದಿಯಾನಿಯಲ್ಲಿ ಮನೆ ನಿರ್ಮಿಸಲು ಹೇಳುತ್ತಿದ್ದರು. ಆದ್ದರಿಂದ ಹಝ್ರತ್ ನವಾಬ್ ಸಾಹಿಬ್ ಹಿಜರತ್‌ಗಿಂತ ಮುಂಚಿತವಾಗಿ ಒಂದೆರಡು ಕೊಠಡಿಗಳನ್ನು ದಾರುಲ್ ಮಸೀಹ್‌ಗೆ ಸಂಬಂಧಿಸಿ ಅದರ ಪೂರ್ವಕ್ಕೆ ನಿರ್ಮಿಸಿದರು. ಕೆಲವು ವರ್ಷಗಳ ನಂತರ ಅದನ್ನು ಬೀಳಿಸಿ ಒಂದು ಸಶಕ್ತ ಚೌಬಾರ (ಜಗುಲಿ) ನಿರ್ಮಿಸಿದರು. ಈ ಚೌಬರ (ಜಗುಲಿ) "ಅದ್ದಾರ್"ನ ಭಾಗವೇ ಆಗಿದೆ. ಪ್ರಥಮ ಖಿಲಾಫತ್ ಅವಧಿಯಲ್ಲಿ ಅವರು ಖಾದಿಯಾನಿಂದ ದೂರದಲ್ಲಿ ಒಂದು ಬಯಲು ಪ್ರದೇಶದಲ್ಲಿ ದಾರುಸ್ಸಲಾಂ ಅರಮನೆಯೊಂದನ್ನು ನಿರ್ಮಿಸಿದರು. ಅಲ್ಲೊಂದು ತೋಟವು ಸಹ ನಿರ್ಮಿಸಿದರು.

ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ನವಾಬ್ ಸಾಹಿಬರಿಗೆ ಪತ್ರ ಒಂದನ್ನು ಕಳುಹಿಸಿದರು, ಅದರಲ್ಲಿ ಖಾದಿಯಾನ್ ಬರುವಾಗ ಫೋನೋಗ್ರಾಫ್ ಜೊತೆಗೆ ತರಲು ಹೇಳಿದರು. ಏಕೆಂದರೆ ಆ ಮೂಲಕ ಅನ್ಯ ದೇಶವಾಸಿಯವರಿಗೆ ಅಲ್ಲಾಹನ ಕಡೆ ಕರೆ ನೀಡಲು ಸಂದೇಶಗಳನ್ನು ತುಂಬಿ ಕಳುಹಿಸೋಣ ಎಂದು. ಹಾಗೆ ಹಝ್ರತ್ ನವಾಬ್ ಸಾಹಿಬ ಫೋನೋಗ್ರಾಫ್ ಖಾದಿಯಾನ್‌ಗೆ ತಂದರು ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಕವಿತೆ "ಆನಿಝ್ ಆ ರಹೀ ಹೈ ಏ ಫೋನೋಗ್ರಾಫ್ ಹೇ, ಮತ್ತು ಇತರ ಕೆಲವು ಕವಿತೆಗಳು ಮತ್ತು ಭಾಷಣಗಳು ತುಂಬಿಸಿದರು. ಹೀಗೆ

ಅನ್ಯದೇಶಗಳಿಗೆ ಇಸ್ಲಾಮಿನ ಪ್ರಚಾರದ ಸಂದೇಶ ಕಳುಹಿಸುವ ಭಾಗ್ಯ ಹಝ್ರತ್ ನವಾಬ್ ಸಾಹಿಬರಿಗೆ ದೊರೆಯಿತು.

ಹಝ್ರತ್ ನವಾಬ್ ಸಾಹಿಬ್ ಓರ್ವ ಮಾನವತವಾದಿ, ಅವರು ಉತ್ತಮ ವ್ಯವಹಾರಿಕ ಜ್ಞಾನವುಳ್ಳವರು ಮತ್ತು ಬುದ್ಧಿವಂತರು ಆಗಿದ್ದರು. ಆದ್ದರಿಂದ ಎಲ್ಲಾ ಸಮಸ್ಯೆಗಳಿಗೆ ಅವರು ಸ್ವಯಂ ಪರಿಹಾರ ಹುಡುಕುತ್ತಿದ್ದರು. ದ್ವೇಷ ಕೋಪ ಎಂಬುದು ನಾಮಮಾತ್ರಕ್ಕೂ ಇರಲಿಲ್ಲ. ಸತ್ಯವನ್ನು ಬಹುಬೇಗ ಸ್ವೀಕರಿಸುವ ಗುಣ ಹೊಂದಿದ್ದರು. ಪ್ರಾಥಮಿಕ ಧಾರ್ಮಿಕ ಶಿಕ್ಷಣದ ನಂತರ ಲಾಹೋರಿನ Aitchison College ಗೆ ಸೇರಿದರು. ಅದು ಸರಕಾರವು ಪಂಜಾಬಿನ ರಾಜಕುಮಾರರಿಗೆ ಮಾತ್ರ ಸ್ಥಾಪಿಸಿದರು. ಮಹಿಳೆಯರ ಸುಧಾರಣೆಗೋಸ್ಕರ ಅವರು ಒಂದು ಸಂಸ್ಥೆ (ಅಂಜುಮನ್) ಮುಸ್ಲಿಹಲ್ ಇಖ್ವಾನ್ ಸ್ಥಾಪಿಸಿದರು. ಮತ್ತು ಶಾಲೆ ಒಂದನ್ನು ಸಹ ಸ್ಥಾಪಿಸಿದರು. ಅದರ ಒಟ್ಟು ಖರ್ಚುಗಳನ್ನು ತಾವೇ ನಿರ್ವಹಿಸುತ್ತಿದ್ದರು. ಅವರಿಗೆ ಸಾರ್ವತ್ರಿಕ ಶಿಕ್ಷಣದ ಬಗ್ಗೆ ತುಂಬಾ ಆಸಕ್ತಿ ಇತ್ತು. ಮದರಸ ಅಹ್ಮದಿಯಕ್ಕಾಗಿ ಹಲವು ಸಂದರ್ಭದಲ್ಲಿ ಸಾಂಪತ್ತಿಕ ನೆರವು ನೀಡಿದರು. ಮತ್ತು ಅವರ ಉದಾರ ಕೊಡುಗೆಳಿಂದಾಗಿಯೇ ಖಾದಿಯಾನ್‌ನಲ್ಲಿ College ಸ್ಥಾಪನೆಯಾಯಿತು.

ಅವರ ಗುಣಗಳಲ್ಲಿ ಉದಾರತೆ ಬೇರೂರಿತ್ತು. ಜಮಾಅತಿನ ಬಡವರು ಅವರಿಂದ ಸುಖ ಜೀವನ ನಡೆಸುತ್ತಿದ್ದರು. ಅವರು ಎಂದೂ ದು:ಖಿತ ಹಾಗೂ ಚಿಂತಿತರಾಗಿ ಕಾಣುತ್ತಿರಲಿಲ್ಲ. ಸದಾ ಮುಖದ ಮೇಲೆ ನಗು ಹಾಗೂ ಸಂತೋಷ ನೆಲೆನಿಲ್ಲುತ್ತಿತ್ತು. ಮತ್ತು ಅಲ್ಲಾಹನ ಮೇಲೆ ಪರಿಪೂರ್ಣ ಭರವಸೆ ಹಾಗೂ ನಿಷ್ಠೆಯಿತ್ತು. ವಿನಯ ಎಷ್ಟರ ಮಟ್ಟಿಗೆ ಇತ್ತೆಂದರೆ ಅವರು ಮಸ್ಜಿದ್ ಮುಬಾರಕ್‌ನಲ್ಲಿ ಕೊನೆಯ ಸಾಲಿನಲ್ಲಿ ಚಪ್ಪಲಿ ಬಿಡುವ ಜಾಗದ ಸಮೀಪ ಕುಳಿತುಕೊಳ್ಳುತ್ತಿದ್ದರು. ಸಂಘಟನೆಯ ಕಾರ್ಯಗಳಲ್ಲಿ ಯಾವಾಗಲೂ ಮುಂಚೂಣಿಯಲ್ಲಿರುತ್ತಿದ್ದರು.

ಹಝ್ರತ್ ನವಾಬ್ ಸಾಹಿಬ್ ಹಝ್ರತ್ ಖಲೀಫತುಲ್ ಮಸೀಹರೊಂದಿಗೆ ತುಂಬಾ ಆತ್ಮೀಯ ಹಾಗೂ ಅನುಸರಣೆಯ ಸಂಬಂಧ ಹೊಂದಿದ್ದರು. ಅದರ ಫಲವಾಗಿಯೇ ಹಝ್ರತ್ ಖಲೀಫತುಲ್ ಮಸೀಹ್ ಪ್ರಥಮ ಅವರ ಅಂತಿಮ ಎರಡು ವಾರಗಳವರೆಗೆ ನವಾಬ್ ಸಾಹಿಬ್‌ರಿಗೆ ಅವರ ಸೇವೆ ಮಾಡುವ ಭಾಗ್ಯ ಲಭಿಸಿತು. ವೈದ್ಯರು ಅವರಿಗೆ ಜನರಿಂದ ದೂರ ಮುಕ್ತ ಪ್ರದೇಶದಲ್ಲಿ ವಾಸಿಸಲು ಸಲಹೆ ನೀಡಿದಾಗ ಹಝ್ರತ್ ನವಾಬ್ ಸಾಹಿಬ್ ತನ್ನ ಅರಮನೆ ದಾರುಸ್ಸಲಾಂನ ಒಂದು ಭಾಗ ಅವರಿಗಾಗಿ ಖಾಲಿ ಮಾಡಿಕೊಟ್ಟರು.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಅವರು 27 ಫೆಬ್ರವರಿ 1914 ರಂದು ಇಲ್ಲಿಗೆ ಬಂದರು ಮತ್ತು ಈ ಜಾಗವನ್ನು ಬಹುವಾಗಿ ಮೆಚ್ಚಿದರು. ಎರಡು ವಾರಗಳ ನಂತರ 13 ಮಾರ್ಚ್ 1914 ರಂದು ಹಝ್ರತ್ ಖಲೀಫತುಲ್ ಮಸೀಹ್ ಪ್ರಥಮರು ದಾರುಸ್ಸಲಾಂನಲ್ಲೇ ನಿಧನಗೊಂಡರು.

ಜನವರಿ 1, 1903 ರ ಮುಂಜಾನೆಯ ವಾಯುವಿಹಾರದಲ್ಲಿ ಹಝ್ರತ್ ಅಖ್‌ದಸ್ ಮಸೀಹ್ ಮೌಊದ್(ಅ) ನವಾಬ್ ಸಾಹಿಬ್‌ರನ್ನು ಸಂಬೋಧಿಸಿ ಹೇಳಿದರು. ರಾತ್ರಿ ಒಂದು ದಿವ್ಯಸ್ವಪ್ನದಲ್ಲಿ ನಿಮ್ಮ ಚಿತ್ರ ನನ್ನ ಮುಂದೆ ಬಂತು ಮತ್ತು 'ಹುಜ್ಜತುಲ್ಲಾಹ್" ಎಂಬ ಪದ ಅವತರಣಗೊಂಡಿತು. ಅದರ ಅರ್ಥ ಹೀಗೆ ತಿಳಿದುಬಂತು. ನೀವು ತಮ್ಮ ಮನೆತನ ಮತ್ತು ಸಮುದಾಯದಿಂದ ಬೇರ್ಪಟ್ಟು ಬಂದ ಕಾರಣ ಅಲ್ಲಾಹನು ನಿಮ್ಮ ಹೆಸರು "ಹುಜ್ಜತುಲ್ಲಾಹ್" ಎಂದು ಹೆಸರಿಸಿರುವನು. ಅಂದರೆ ನೀವು ಅವರ ಮೇಲೆ ಹಜ್ಜತ್ ಆಗಿದ್ದೀರಿ. ಅವರು ಹಲವು ಸಂದರ್ಭಗಲಲ್ಲಿ ಸಾಂಪತ್ತಿಕ ತ್ಯಾಗದ ವಿವಿಧ ಕಾರ್ಯಗಳಲ್ಲಿ ಭಾಗವಹಿಸಿದವರಾಗಿದ್ದರು. ನೆರವು ನೀಡಿದವರಾಗಿದ್ದರು. ಹಾಗೆಯೇ ಕಟ್ಟಡಗಳ ವಿಸ್ತಾರದಲ್ಲಾಗಲಿ ಪುನರ್ ನಿರ್ಮಾಣಗಳಲ್ಲಾಗಲಿ ಹೆಜ್ಜೆ ಹೆಜ್ಜೆಗೆ ಹಣ ಒದಗಿಸುತ್ತಿದ್ದರು. ಅವುಗಳಲ್ಲಿ ಅಹ್ಮದಿಯಾ ಮದರಸಾ, ಮಿನಾರ್ತುಲ್ ಮಸೀಹ್, ಮತ್ತು ಕೇಂದ್ರಿಯ ಗ್ರಂಥಾಲಯ ಇತ್ಯಾದಿಗಳಾಗಿವೆ. ಅವರು ಖಾದಿಯಾನಿಯಲ್ಲಿ ಹಲವು ಸಾರ್ವಜನಿಕ ಕಲ್ಯಾಣ ಕಾರ್ಯಗಳನ್ನು ಕೈಗೊಂಡರು. ರಸ್ತೆಗಳನ್ನು ಸರಿಪಡಿಸಿದರು. ಚರಂಡಿಗಳನ್ನು ನಿರ್ಮಿಸಿದರು. ಅಲ್ಲದೇ ರೋಗಿಗಳ ಸಹಾಯಕ್ಕಾಗಿ ಒಂದು ದೊಡ್ಡ ಮೊತ್ತವನ್ನೇ ಪ್ರಸ್ತುತಪಡಿಸಿದರು. ಇವುಗಳಲ್ಲದೆ ಸಂಘಟನೆಯ ಪ್ರಥಮ ಪತ್ರಿಕೆ ಅಲ್‌ಹಕಮ್‌ಗೆ ನೆರವು, ದಾರುಝ್–ಝುಫಾ (ವೃದ್ಧಾಶ್ರಮ) ಗೋಸ್ಕರ ಭೂಮಿ ಮತ್ತು ಅಲ್‌ಫಝುಲ್ ಜಾರಿಗೊಳಿಸಲು ಸಹ ಅವರ ಸಾಂಪತ್ತಿಕ ತ್ಯಾಗದ ಉನ್ನತ ಉದಾಹರಣೆಗಳಾಗಿವೆ.

ಅಲ್‌ಫಝುಲ್ ಜಾರಿಗೊಳಿಸಲು ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್‌ಸಾಹಿಬ್ ಕೆಲ ಒಂದು ರುಪಾಯಿಗಳು ನಗದು ಮತ್ತು ಕೆಲ ಭೂಮಿಯನ್ನು ಈ ಕಾರ್ಯಕ್ಕಾಗಿ ಒದಗಿಸಿಕೊಟ್ಟರು. ಅಲ್ಲದೇ ತನ್ನ ಮನೆಯ ಕೆಳಗಿನ ಅಂತಸ್ತು ಸಹ ನೀಡಿದರು. ಮುಖಬರಹ ವ್ಯವಸ್ಥೆಗೋಸ್ಕರ ಹಝ್ರತ್ ಮೌಲ್ವಿ ನೂರುದ್ದೀನ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ರಚಿಸಿದರು. ಜನವರಿ 1906 ರಲ್ಲಿ ಸದರ್ ಅಂಜುಮನ್ ಅಹ್ಮದಿಯಾ ಸ್ಥಾಪನೆಯಾದಾಗ, ಅದರ ಸದಸ್ಯರಲ್ಲಿ ಹಝ್ರತ್ ನವಾಬ್ ಸಾಹಿಬ್‌ರವರು ಸಹ ಭಾಗಿಯಾಗಿದ್ದರು. ಅವರಿಗೆ 1900 ರಿಂದ 1918 ರವರೆಗೆ ವಿವಿಧ ಹುದ್ದೆಗಳಲ್ಲಿ ಸಂಘಟನೆಯ ಸೇವೆ ಮಾಡುವ ಅವಕಾಶ ಲಭ್ಯವಾಯಿತು. ಸದರ್ ಅಂಜುಮನ್ ಅಹ್ಮದಿಯಾ ಸ್ಥಾಪನೆಯ ಮೊದಲು 6 ಜನವರಿಯಿಂದ ಡಿಸೆಂಬರ್ 5, 1902 ರವರೆಗೆ ಮೊದಲು Review ಪತ್ರಿಕೆಯ Assistant Financial Secretary ಮತ್ತು ನಂತರ ಅವರು Financial secretary ಆಗಿ ಕಾರ್ಯ ನಿರ್ವಹಿಸಿದರು. 1909 ರಲ್ಲಿ ಅವರು ಸದರ್ ಅಂಜುಮನ್ ಅಹ್ಮದಿಯಾದ ಅಮೀನ್‌ರಾಗಿ ನಿಮಿತ್ತಗೊಂಡರು. 1911 ರಲ್ಲಿ ಅವರು ಸದರ್ ಅಂಜುಮನ್ ಅಹ್ಮದಿಯಾ ವತಿಯಿಂದ ನಾಝಿರ್ ಹುದ್ದೆಯಲ್ಲಿ ನಿಯುಕ್ತರಾದರು. 1915 ಮತ್ತು 1916 ರ ವರ್ಷಗಳವರೆಗೆ ಹಝ್ರತ್ ನವಾಬ್ ಸಾಹಿಬ್ ಸದರ್ ಅಂಜುಮನ್ ಅಹ್ಮದಿಯಾದ ಜನರಲ್ ಸೆಕ್ರೆಟರಿಯಾಗಿ ನಿಯುಕ್ತರಾದರು.

ಹಝ್ರತ್ ನವಾಬ್ ಸಾಹಿಬ್ ಸಾಹಿತ್ಯ ಮತ್ತು ಕಂಠಸ್ಥ ವಿಷಯಗಳಲ್ಲಿ ಪ್ರಾಮಾಣಿಕರಾಗಿದ್ದರು. ತಮ್ಮ ಮಕ್ಕಳಿಗೂ ಮತ್ತು ಇತರರಿಗೂ ಈ ಕುರಿತು ಪ್ರೇರಣೆ ನೀಡುತ್ತಿದ್ದರು. ಅವರು ತಮ್ಮ ಹಿರಿಯ ಸಹೋದರರು, ಸಹಾಬರವರು ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಕುಟುಂಬದ ಬಗ್ಗೆ ತುಂಬಾ ಗೌರವ ಭಾವನೆ ಹೊಂದಿದ್ದರು.

ಹಝ್ರತ್ ನವಾಬ್ ಸಾಹಿಬ್ ನಿಷ್ಠೆ ದೃಢಚಿತ್ತತೆಯಲ್ಲಿ ಉನ್ನತಸ್ಥಾನ ಪಡೆದಿದ್ದರು. ಯಾವ ಪರಿಸ್ಥಿತಿಗಳಲ್ಲಿ ಅವರು ಅಹ್ಮದಿಅತ್ ಸ್ವೀಕರಿಸಿದರು ಮತ್ತು ಯಾವ ಸಾಹಸದಿಂದ ಅದನ್ನು ವ್ಯಕ್ತಪಡಿಸಿದರು, ಅದು ಅವರದ್ದೇ ಆದ ಒಂದು ವಿಶಿಷ್ಟ ಗುಣವಾಗಿದೆ. ಅವರು ಅತ್ಯಂತ ಗೌರವಸ್ಥರು ಮತ್ತು ಕಾಲದ ಕಿಡಿಗೇಡಿತನದಿಂದಾಗಿ ಪರದೆ ವಹಿಸುವುದಕ್ಕೆ ತುಂಬಾ ಆಸಕ್ತಿಹೊಂದಿದವರಾಗಿದ್ದರು. ನಮಾಝ್, ಉಪವಾಸಗಳ ಪಾಲನೆ, ಪವಿತ್ರ ಖುರ್‌ಆನ್ ಪಠಣ, ಇತರ ಧಾರ್ಮಿಕ ಚಟುವಟಿಕೆಗಳಲ್ಲಿ ಯಾವಾಗಲೂ ತೊಡಗಿಸಿಕೊಂಡಿರುತ್ತಿದ್ದರು. ಅವರು ನಿತ್ಯವು ರಾತ್ರಿಯಲ್ಲಿ ಏಳುವುದು, ತಹಜ್ಜುದ್ ನಿರ್ವಹಿಸಿಸುವುದು ಮಾಮೂಲು ಮಾಡಿಕೊಂಡಿದ್ದರು. ಅವರ ಧರ್ಮಪತ್ನಿಯಾದ ನವಾಬ್ ಮುಬಾರಕ್ ಬೇಗಂ ಸಾಹಿಬಾ ಈ ಕುರಿತು ಹೇಳುತ್ತಾರೆ.

"ರಾತ್ರಿ ವೇಳೆ ತಹಜ್ಜುದ್‌ನಲ್ಲಿ ಪ್ರಾರ್ಥನೆಯಲ್ಲಿ ತೊಡಗಿದಾಗ ಅಲ್ಲಾಹನ ಪ್ರಕಾಶವು ಕೊಠಡಿಯಲ್ಲೆಲ್ಲಾ ಆವರಿಸಿದಂತೆ ಕಾಣುತ್ತಿತ್ತು."

ಹಝ್ರತ್ ನವಾಬ್ ಸಾಹಿಬ್ ಬೆಳಗ್ಗಿನ ನಮಾಝ್‌ಗಿಂತ ಮೊದಲು ಪವಿತ್ರ ಖುರ್‌ಆನ್ ಪಠಿಸುತ್ತಿದ್ದರು, ಪವಿತ್ರ ಖುರ್‌ಆನ್ ಒಂದು ಸಮುದ್ರವಿದ್ದಂತೆ ಅದರೊಳಗೆ ಮುಳುಗಿ ಮರಳಿದರೆ ಬರಿ ಕೈ ಬರಲಾರವು ಎಂದು ಹೇಳುತ್ತಿದ್ದರು. ಹಝ್ರತ್ ನವಾಬ್ ಸಾಹಿಬ್ ದಿನನಿತ್ಯವೇನು ದಿನಚರಿ ಬರೆಯುತ್ತಿರಲಿಲ್ಲ. ಆದರೆ ಎಷ್ಟು ಅವರು ಬರೆದಿದ್ದಾರೋ ಅದರಿಂದ ಅವರ ಚರಿತ್ರೆಯ ಒಂದಿಷ್ಟು ಅಮೂಲ್ಯವಾದ ಭಾಗ ಸ್ವಯಂ ಅವರ ಲೇಖನದಿಂದಾಗಿ ನಮ್ಮ ಮುಂದೆ ಇದೆ.

10 ಫೆಬ್ರವರಿ 1945 ರಲ್ಲಿ 75 ವಯಸ್ಸಿನಲ್ಲಿ ಹಝ್ರತ್ ನವಾಬ್ ಸಾಹಿಬ್ ನಿಧನಹೊಂದಿದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**

ಅವರ ಪಾರ್ಥಿವ ಶರೀರಕ್ಕೆ ಹಝ್ರತ್ ಖಲೀಫತುಲ್ ಮಸೀಹ್ ದ್ವಿತಿಯರು (ರ) ಹೆಗಲು ಕೊಟ್ಟರು. ಬಿಹಿಷ್ತಿ ಮುಕ್‌ಬರ ಖಾದಿಯಾನ್‌ಗೆ ಹತ್ತಿರದಲ್ಲಿರುವ ತೋಟದಲ್ಲಿ ಹಝುರತ್ ಖಲೀಫತುಲ್ ಮಸೀಹ್ ದ್ವಿತೀಯರು(ರ) ಅವರ ಜನಾಝು ನಮಾಜು ನಿರ್ವಹಿಸಿದರು. ಅವರ ಶರೀರ ವಿಶೇಷ ಆವರಣದಲ್ಲಿ ಧಫನ್ ಮಾಡಲಾಯಿತು. ಅಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಅವರ ಸಮಾಧಿಯೂ ಇದೆ. ಅಲ್ಲಾಹನು ಅವರ ಸ್ಥಾನ ಉನ್ನತಿಕರಿಸಲಿ ಮತ್ತು ತನ್ನ ಸಾಮಿಪ್ಯ ಕರುಣಿಸಲಿ. ಆಮೀನ್.

ಸಭಿಕರೇ! ಸಯ್ಯದನಾ ಹಝ್ರತ್ ಉಸ್ಮಾನ್‌ಗೆ(ರ) ಸಹಾಬ ಹಝ್ರತ್ ಅಖ್‌ದಸ್ ರಸೂಲುಲ್ಲಾಹ್(ಸ) ಮತ್ತು ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ, ಸಹಾಬಿ ಹಝ್ರತ್ ಮಸೀಹ್ ಮೌಊದ್(ಅ) ಅವರ ಚರಿತ್ರೆಗಳ ಆಯ್ದ ಘಟನೆಗಳನ್ನು ಆಲಿಸಿರುವಿರಿ. ಈ ಘಟನೆಗಳಿಂದ **"ವಆಖರೀನ ಮಿನ್‌ಹುಮ್ ಲಮ್ಮಾ ಯಲ್‌ಹಖೂ ಬಿಹಿಮ್"** ನಿಜವಾದ ಚಿತ್ರಣ ನಮ್ಮ ಮುಂದೆ ಬರುವಂತಾಗುತ್ತದೆ. ಇಬ್ಬರ ಘಟನಾವಳಿಗಳಲ್ಲಿ ಎಷ್ಟೊಂದು ಸಾಮ್ಯತೆಗಳಿವೆ. ಹಝ್ರತ್ ಅಖ್‌ದಸ್ ಅವರ ಈ ಕವನ ಸಾಲುಗಳು ಎಷ್ಟೊಂದು ಸತ್ಯವಾಗಿವೆ.

ಮುಬಾರಕ್ ವೋಜೊ ಅಬ್ ಈಮಾನ್ ಲಾಯಾ
ಸಹಾಬ(ರ) ಸೆ ಮಿಲಾ ಜಬ್ ಮುಜ್ಹ್‌ಕೊ ಪಾಯಾ
ವಹೀ ಮಯೆ ಉನ್‌ಕೊ ಸಾಖಿ ನೆ ಪಿಲಾದೀ
**ಫಸುಬ್‌ಹಾನಲ್ಲಝೀ ಅಖ್‌ಝುಲ್ ಅಆದೀ**

(ಈಗ ವಿಶ್ವಾಸ ತಂದವರು ಭಾಗ್ಯವಂತರು, ನನ್ನನ್ನು ಪಡೆದವರು ಸಹಾಬರೊಂದಿಗೆ ಸೇರಿದರು. ಅವರಿಗೆ ನೀಡಿದ ಮಧ್ಯವೇ ಇವರೂ ಸೇವಿಸಿದರು. **ಫಸುಬ್‌ಹಾನಲ್ಲಝಿ ಫಖ್‌ಝುಲ್ ಅಆದಿ**)

*********

ಜಲ್ಸ ಸಾಲಾನ ಖಾದಿಯಾನ್ 2023ರ ಭಾಷಣ

## ಹಝ್ರತ್ ಪೈಗಂಬರ್(ಸ)ರ ಮಹಿಳೆ ಸಹಾಬೀಯರ ಅಪ್ರತಿಮ ತ್ಯಾಗಗಳು.

(ಮುಕರ್‌ರಮಾ ಅಮತುಲ್ ವಸೀ ಸಾಹಿಬ ನಾಯಿಬ್ ಸದರ್ ಲಜ್ನಾ ಇಮಾಅಲ್ಲಾಹ್ ಭಾರತ)

ಗೌರವಾನ್ವಿತ ಸಭಾಧ್ಯಕ್ಷರೇ ಹಾಗೂ ಸಭಿಕರೇ!

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತಹೂ

ಇಂದು ಈ ಅನುಗ್ರಹದಾಯಕ ಸಭೆಯಲ್ಲಿ ವಿನೀತೆಯ ಭಾಷಣದ ಶೀರ್ಷಿಕೆ

**“ಹಝ್ರತ್ ಪೈಗಂಬರ್(ಸ)ರ ಮಹಿಳೆ ಸಹಾಬೀಯರ ಅಪ್ರತಿಮ ತ್ಯಾಗಗಳು”**

ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ನುಡಿಯುತ್ತಾನೆ:

**ಮನ್ ಅಮಲ ಸಾಲಿಹಮ್ಮಿನ್ ಝಕರಿನ್ ಅವ್ ಉನ್ಸಾ ವಹುವಾ ಮುಮಿನುನ್ ಫಲನುಹ್‌ಯಿಯನ್ನಹೂ ಹಯಾತನ್ ತೈಯಿಬತನ್, ವಲನಜ್‌ಝಿಯನ್ನಹುವ್ ಅಜ್ರಹುವ್ ಬಿಅಹ್ಸನಿ ಮಾ ಕಾನೂ ಯಅ್‌ಮಲೂನ.** (ಅಲ್–ನಹ್ಲ್: 98)

ಅಂದರೆ, ಪುರುಷನಾಗಲಿ, ಸ್ತ್ರೀಯಾಗಲಿ ಸತ್ಯವಿಶ್ವಾಸಿಯಾಗಿದ್ದುಕೊಂಡು ಸತ್ಕರ್ಮ ಮಾಡಿದರೆ ಖಂಡಿತವಾಗಿಯೂ ನಾವು ಅವರಿಗೆ ಪರಿಶುದ್ಧ ಜೀವನವನ್ನು ದಯಪಾಲಿಸುವೆವು. ಅವರ ಸದ್ವರ್ತನೆಗೆ ತಕ್ಕುದಾದ ಪ್ರತಿಫಲವನ್ನು ಸಹ ನಾನು ನಿಶ್ಚಯವಾಗಿಯೂ ನೀಡುವೆವು.

ಅಂತೆಯೇ, ಒಂದು ಹದೀಸ್ ಹೀಗಿದೆ:

ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಹೇಳುತ್ತಾರೆ, ನಾನು ಹಝ್ರತ್ ಪೈಗಂಬರ್(ಸ) ಅವರಿಗೆ ಹೀಗೆ ಹೇಳುವುದನ್ನು ಕೇಳಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು:

ನಾನು ನನ್ನ ಸಹಾಬೀಯರ ಭಿನ್ನಾಭಿಪ್ರಾಯದ ಬಗ್ಗೆ ಸರ್ವಶಕ್ತನಾದ ಅಲ್ಲಾಹನನ್ನು ಕೇಳಿದಾಗ ಅಲ್ಲಾಹನು ನನಗೆ ಹೀಗೆ ದೇವವಾಣಿಯನ್ನು ಅವತರಿಸಿದನು. ಎಲ್ಯೆ ಮುಹಮ್ಮದ್! ನನಗೆ, ನಿಮ್ಮ ಸಹಬೀಯರು ಆಕಾಶದಲ್ಲಿನ ನಕ್ಷತ್ರಗಳಂತೆ ಇದ್ದಾರೆ. ಕೆಲವು ಇತರರಿಗಿಂತ ಪ್ರಕಾಶಮಾನವಾಗಿವೆ, ಆದರೆ ದೇವಪ್ರಕಾಶವು ಪ್ರತಿಯೊಬ್ಬರಲ್ಲೂ ಇದೆ. ಆದ್ದರಿಂದ, ಯಾರೊಬ್ಬನು ನಿಮ್ಮ ಸಹಾಬೀಯರನ್ನು ಅನುಸರಿಸುತ್ತಾನೊ ನನ್ನ ಪ್ರಕಾರ, ಅವನು ಮಾರ್ಗದರ್ಶಿಸಲ್ಪಡುತ್ತಾನೆ. ಹಝ್ರತ್ ಉಮರ್(ರ) ಹೀಗೂ ಹೇಳಿದರು: ಅಂದರೆ ಹುಝೂರ್(ಸ) ಹೇಳಿದರು ನನ್ನ ಸಹಾಬೀಯರು ನಕ್ಷತ್ರಗಳಂತೆ ಉದ್ದಾರೆ, ಅವರಲ್ಲಿ ಯಾರನ್ನು ನೀವು ಅನುಸರಿಸುತ್ತೀರೊ ಅವರು ಅನುಗ್ರಹಿಸಲ್ಪಡುತ್ತೀರಿ.

(ಮಿಶ್ಕಾತ್ ಕಿತಾಬುಲ್–ಮುನಾಕಿಬ್ ಮನಾಕಿಬ್ ಸಹಾಬಾ)

ಹಝ್ರತ್ ಖಲೀಫತುಲ್ ಮಾಸಿಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ನುಡಿಯುತ್ತಾರೆ:

“ಪವಿತ್ರ ಖುರ್‌ಆನ್‌ನಿಂದ ನಮಗೆ ತಿಳಿದು ಬರುವುದೇನೆಂದರೆ, ಧರ್ಮದ ಇತಿಹಾಸದಲ್ಲಿ ಮಹಿಳೆಯರಿಗೆ ಮಹತ್ತರವಾದ ಸ್ಥಾನವಿದೆ. ಮತ್ತು ಅಲ್ಲಾಹನು ಮಹಿಳೆಯರ ಶ್ಲಾಘನೀಯ ಕಾರ್ಯಗಳನ್ನು ಸಾಕ್ಷಿಯಾಗಿ ವಿವರಿಸಿದ್ದಾನೆ ಮತ್ತು ಯಾವ ಕಾರ್ಯಗಳ ಕಾರಣದಿಂದ ಪುರುಷನು ಪ್ರತಿಫಲಕ್ಕೆ ಅರ್ಹನೆಂದು ಹೇಳಲಾಗಿದ್ದೇಯೊ ಅಂತಹ ಪ್ರಶಂಸನೀಯ ಮತ್ತು ಪ್ರಮುಖ ಕಾರ್ಯಗಳಿಂದಾಗಿ ಮಹಿಳೆಯರಿಗೂ ಈ ಪ್ರತಿಫಲವನ್ನು ನೀಡಲಾಗಿದೆ.” (ಜೂನ್ 2018 ರಲ್ಲಿ ಜಲ್ಸ ಸಾಲಾನದ ಸಂದರ್ಭದಲ್ಲಿ ನೀಡಿದ ಭಾಷಣ)

ಆತ್ಮೀಯ ಸಭಿಕರೇ! ಈ ಆದೇಶಗಳನ್ನು ಅನುಸರಿಸಲು, ನಾವು ಮಹಿಳೆ ಸಹಾಬೀಯರ ಜೀವನಚರಿತ್ರೆಗಳನ್ನು ಮತ್ತು ಅವರ ಪರಿಶುದ್ಧ ಜೀವನದ ಅಪ್ರತಿಮ ತ್ಯಾಗಗಳನ್ನು ಪುನರಾವರ್ತಿಸುವುದು ಅವಶ್ಯಕವಾಗಿದೆ ಏಕೆಂದರೆ, ಪ್ರತಿನಿತ್ಯ ಈ ಪ್ರಜ್ವಲಿಸುವ ಉದಾಹರಣೆಗಳು ನಮ್ಮ ಮುಂದೆ ಇರಲಿ ಮತ್ತು ನಮ್ಮ ವಿಶ್ವಾಸಕ್ಕೆ ದೃಢತೆ ನೀಡುತ್ತಿರಲಿ ಮತ್ತು ನಮ್ಮಲ್ಲಿ ಹಾಗೂ ನಮ್ಮ ಮಕ್ಕಳಲ್ಲಿ ನಾವು ಇಸ್ಲಾಮಿಗಾಗಿ ನಮ್ಮ ಜೀವನ, ನಮ್ಮ ಸಂಪತ್ತು, ನಮ್ಮ ಸಮಯ ಮತ್ತು ಸಂತತಿಗಳನ್ನು ತ್ಯಾಗ ಮಾಡಲು ಪ್ರತಿನಿತ್ಯ ಸಿದ್ಧರಾಗುವ ಮನೋಭವ ಉಂಟಾಗುತ್ತಾ ಇರಲಿ.

ಹಝ್ರತ್ ಪೈಗಂಬರ್(ಸ.ಅ) ಅವರ ಮಹಿಳೆ ಸಹಬೀಯರ(ರ) ಜೀವನವನ್ನು ಅಧ್ಯಯನ ಮಾಡಿದರೆ ನಮಗೆ ಅವರ ಇಸ್ಲಾಂ ಧರ್ಮಕ್ಕಾಗಿ ವಿವಿಧ ರೀತಿಯ ತ್ಯಾಗಗಳ ಉದಾಹರಣೆಗಳನ್ನು ಕಾಣಬಹುದು ಅಂತಹ ಉದಾಹರಣೆಗಳು ಯಾವುದೇ ಧರ್ಮದಲ್ಲಿ ಕಂಡುಬರುವುದಿಲ್ಲ. ಒಂದೆಡೆ ಆರ್ಥಿಕ ತ್ಯಾಗದ ಜ್ವಲಂತ ನಿದರ್ಶನವಿದ್ದರೆ ಇನ್ನೊಂದೆಡೆ ಭಾವನೆಗಳ ತ್ಯಾಗಗಳಿವೆ ಮತ್ತೊಂದೆಡೆ ಜೀವ ತ್ಯಾಗಗಳನ್ನು ನೀಡುತ್ತಿರುವ ಉದಾಹರಣೆಗಳನು ಕಾಣಬಹುದು.

ಇಸ್ಲಾಮಿನ ಆಕಾಶದಲ್ಲಿ ಇಂತಹ ಅಸಂಖ್ಯಾತ ವಿಶ್ವಾಸವರ್ಧಕ ದರ್ಶನಗಳಿವೆ, ಈ ಸಹಾಬೀಯರು ಪ್ರಕಾಶಮಾನವಾದ ನಕ್ಷತ್ರಗಳಂತೆ ಹೊಳೆಯುತ್ತಿದ್ದಾರೆ. ಹಝ್ರತ್ ಪೈಗಂಬರ್(ಸ)ರ ಮಹಿಳೆ ಸಹಾಬೀಯರ ಅನುಕರಣೀಯ ತ್ಯಾಗಗಳ ಸುದೀರ್ಘ ಸರಣಿಗಳಾಗಿವೆ. ಕೆಲವೇ ನಿಮಿಷಗಳ ಭಾಷಣದಲ್ಲಿ ಅವುಗಳನ್ನೆಲ್ಲವನ್ನು ಪ್ರಸ್ತಾಪಿಸುವುದು ಬಹಳ ಕಷ್ಟದ ಸಂಗತಿ. ಇಂದು ನಾನು ಕೆಲವು ಸಹಾಬೀಯರ ತ್ಯಾಗಗಳನ್ನು ಮಾತ್ರ ಉಲ್ಲೇಖಿಸುತ್ತೇನೆ. ಅವರು ಸರ್ವಶಕ್ತನಾದ ಅಲ್ಲಾಹ್ ಮತ್ತು ಅವನ ಸಂದೇಶವಾಹಕರಿಗೆ ತೋರಿಸಿದ ನಿಷ್ಠೆ, ಭಕ್ತಿ ಮತ್ತು ಪ್ರೀತಿಯ ಅದ್ಭುತ ಉದಾಹರಣೆಗಳನ್ನು ಸ್ಥಾಪಿಸಿದರು. ಅವರು ಧರ್ಮಕ್ಕಾಗಿ ತ್ಯಾಗಗಳನ್ನು ಅರ್ಪಿಸಿದರು, ಕಷ್ಟಗಳನ್ನು ಸಹಿಸಿಕೊಂಡರು ಮತ್ತು ಯುದ್ಧದ ಸಂದರ್ಭದಲ್ಲಿ ವಿವಿಧ ಸೇವೆಗಳನ್ನು ಮಾಡಿದರು.

ಆತ್ಮೀಯ ಸಭಿಕರೇ! ಎಲ್ಲಾ ರೀತಿಯ ತ್ಯಾಗಗಳಲ್ಲಿ ಆದ್ಯತೆಯ ಸ್ಥಾನವನ್ನು ಹೊಂದಿರುವ ಉಮ್ಮುಲ್–ಮುಮಿನೀನ್ ಹಝ್ರತ್ ಖದೀಜಾ(ರ) ಅವರನ್ನು ನಾನು ಮೊದಲನೆಯದಾಗಿ ಉಲ್ಲೇಖಿಸುತ್ತೇನೆ.

ನಲವತ್ತನೇ ವಯಸ್ಸಿನಲ್ಲಿ, ಅವರು ಹಝ್ರತ್ ಪೈಗಂಬರ್(ಸ) ಅವರೊಂದಿಗೆ ವಿವಾಹವಾದರು. ಅವರು ತಮ್ಮ ಪೂರ್ವಜರಿಂದ ಪಿತ್ರಾರ್ಜಿತವಾಗಿ ಬಂದ ಸಂಪೂರ್ಣ ಸಂಪತ್ತನ್ನು ಬಹಳ ಶ್ರಮವಹಿಸಿ ಕಷ್ಟಪಟ್ಟು ದುಡಿದು ಹೆಚ್ಚಿಸಿಕೊಂಡಿದ್ದನ್ನು ಹಝ್ರತ್ ಪೈಗಂಬರ್(ಸ) ಅವರ ಸನ್ನಿಧಿಯಲ್ಲಿ ಅರ್ಪಿಸಿದರು, ಏಕೆಂದರೆ ಅವರ ಮನಸ್ಸು ನನ್ನ ಒಡನಾಡಿ ವಿಶ್ವಾಸಾರ್ಹ ಮತ್ತು ಪ್ರಾಮಾಣಿಕ ಎಂದು ಖಚಿತವಾಗಿ ಸಾಕ್ಷಿ ನೀಡಿತು. ಇದೊಂದು ಮಹಾನ್ ತ್ಯಾಗವಾಗಿದ್ದು. ಇಸ್ಲಾಮಿನ ದೃಢತೆಯಲ್ಲಿ ಈ ಭಂಡವಾಳವು ಪ್ರಮುಖ ಪಾತ್ರ ವಹಿಸಿದೆ. ಇಡೀ ಪ್ರಪಂಚವು ಹಝ್ರತ್ ಪೈಗಂಬರ್(ಸ) ಅವರಲ್ಲಿ ಯಾವುದೇ ರೀತಿಯ ಸಂಪತ್ತಿನ ದುರಾಸೆಯನ್ನು ಹೊಂದಿಲ್ಲ ಎಂಬ ವಿಷಯ ಅವರ ವ್ಯಕ್ತಿತ್ವದಲ್ಲಿ ಕಂಡಿತು, ಅವರು(ಸ) ಬಡವರು ಮತ್ತು ನಿರ್ಗತಿಕರ ಬಗ್ಗೆ ಸಹಾನುಭೂತಿ ಹೊಂದಿದ್ದರು ಎಂದು ಅರಿತುಕೊಂಡಿತು. ಗುಲಾಮರನ್ನು ವಿಮೋಚನೆಗೊಳಿಸುವ ಮೂಲಕ, ಮಾನವ ಹಕ್ಕುಗಳ ಬಗ್ಗೆ ಅವರ ಬದ್ಧತೆ ಸ್ಪಷ್ಟವಾಗುತ್ತದೆ. ಓರ್ವ ಮಹಿಳೆಯ ತ್ಯಾಗವು ಬಹಳಷ್ಟು ಉಪಯೋಗಕರವಾಗಿತ್ತು ಅದರ ಬಗ್ಗೆ ಸ್ವತಃ ಹಝ್ರತ್ ಪೈಗಂಬರ್(ಸ) ಅವರು ದೃಢೀಕರಿಸುತ್ತಾ ಹೀಗೆ ಹೇಳಿರುವರು:

ಇತರರಿಗೆ ಸಾಧ್ಯವಾಗದಿದ್ದಾಗ ಖದೀಜಾ(ರ) ತಮ್ಮ ಸಂಪತ್ತಿನಿಂದ ನನಗೆ ಬೆಂಬಲ ನೀಡಿದರು. (ಮುಸ್ನದ್ ಅಹ್ಮದ್ ಸಂಪುಟ–6, ಪುಟ–118)

ಆರಾಧನೆಯಲ್ಲಿ ತಮ್ಮ ಪತಿಯ ಮೋಹವನ್ನು ಕಂಡ ಅವರು ಬಿಡದೆ ಸಹಾಯಕರಾಗಿ ಮನಃಪೂರ್ವಕವಾಗಿ ಸೇವೆ ಮಾಡತೊಡಗಿದರು. ಹಿರಾ ಗುಹೆಯಲ್ಲಿ ಆರಾಧನೆಯ ಸಮಯದಲ್ಲಿ, ಅವರು(ರ) ಹೆಚ್ಚು ಕಡಿಮೆ ಐವತ್ತೈದು ವರ್ಷ ವಯಸ್ಸಿನವನಾಗಿದ್ದಿರಬಹುದು. ಅವರು ಸ್ವತಃ ಹಝ್ರತ್ ಪೈಗಂಬರ್(ಸ) ಅವರಿಗಾಗಿ ಆಹಾರವನ್ನು ತಯಾರಿಸುತ್ತಿದ್ದರು ಮತ್ತು ಕೆಲವೊಮ್ಮೆ, ಅವರ ಆರಾಧನೆಯು ಸ್ವಲ್ಪ ಕಾಲ ಸುದೀರ್ಘವಾದರೆ ಅವರು ಸ್ವತಃ ಆಹಾರವನ್ನು ತೆಗೆದುಕೊಂಡು ಹಿರಾ ಗುಹೆಗೆ ಹೋಗುತ್ತಿದ್ದರು, ಹಿರಾ ಗುಹೆಯ ಸಂಕಷ್ಟದ ರಸ್ತೆ ಮತ್ತು ಎತ್ತರವನ್ನು ಗಮನದಲ್ಲಿಟ್ಟುಕೊಂಡು ಆ ಮಹಾನ್ ಮಹಿಳೆಯ ತ್ಯಾಗವನ್ನು ಅಂದಾಜು ಮಾಡಿರಿ. ಇದು ಎಂತಹ ಮಹತ್ಕಾರ್ಯವಾಗಿದ್ದು, ಸರ್ವಶಕ್ತನಾದ ಅಲ್ಲಾಹನಿಂದ ಪ್ರಶಂಸೆಯ ಸಂದೇಶವು ಲಭಿಸಿತು. ಹಝ್ರತ್ ಜಿಬ್ರೀಲ್ ಅಲೈಹಿಸ್ಸಲಾಮ್ ಬಂದು ಹೇಳಿದರು:

“ಯಾ ರಸೂಲಲ್ಲಾಹ್!! ಹಝ್ರತ್ ಖದೀಜಾ(ರ) ಅವರು ನಿಮ್ಮ ಬಳಿಗೆ ತಿನ್ನಲು ಅಥವಾ ಕುಡಿಯಲು ಏನಾದರೂ ಇರುವ ಪಾತ್ರೆಯೊಂದಿಗೆ ಬರುತ್ತಿದ್ದಾರೆ, ಅವರು ಇಲ್ಲಿಗೆ ಬಂದು ತಲುಪಿದಾಗ ಸರ್ವಶಕ್ತನಾದ ಅಲ್ಲಾಹನು ಮತ್ತು ನನ್ನ ಪರವಾಗಿ ಅವರಿಗೆ ನಲಾಮ್ ತಿಳಿಸಿರಿ ಮತ್ತು ಸ್ವರ್ಗದಲ್ಲಿರುವ ನಿಶ್ಶಬ್ಧ ಹಾಗೂ ಆಯಾಸವಿರದ ಮುತ್ತುಗಳ ಅರಮನೆಯ ಬಗ್ಗೆ ಅವರಿಗೆ ಶುಭವಾರ್ತೆಯನ್ನು ನೀಡಿ. (ಸಹೀಹ್ ಮುಸ್ಲಿಂ, ಕಿತಾಬುಲ್ ಫಝಾಎಲುಸ್ಸಹಾಬ, ಅಧ್ಯಾಯ ಫಝಲ್ ಖದೀಜಾ)

ಹಝ್ರತ್ ಪೈಗಂಬರ್(ಸ) ಅವರಿಗೆ ಪ್ರವಾದಿತ್ವದ ಸ್ಥಾನವನ್ನು

ನೀಡಿದಾಗ, ಆ ಸಮಯದಲ್ಲಿ ಇಬ್ಬರ ನಡುವಿನ ಸ್ನೇಹಕ್ಕೆ ಹದಿನೈದು ವರ್ಷಗಳಾಗಿತ್ತು. ಈ ಮಹಾನ್ ದೃಢ ಸಂಕಲ್ಪವುಳ್ಳ ಮಹಿಳೆ ಹಝ್ರತ್ ಪೈಗಂಬರ್(ಸ) ಅವರ ಬೆಂಬಲದಲ್ಲಿ ಎಂತಹ ವಾಕ್ಯವನ್ನು ಹೇಳಿದರು ಎಂದರೆ ಅದು ಹಝ್ರತ್ ಪೈಗಂಬರ್(ಸ) ಅವರ ಉತ್ತಮ ವ್ಯಕ್ತಿತ್ವಕ್ಕೆ ಸಾಕ್ಷಿಯಾಯಿತು. ಹಝ್ರತ್ ಖದೀಜಾ(ರ) ಹೇಳಿದರು: "ಸರ್ವಶಕ್ತನಾದ ಅಲ್ಲಾಹನು ನಿಮ್ಮನ್ನು ಎಂದಿಗೂ ಅವಮಾನಿಸುವುದಿಲ್ಲ, ಏಕೆಂದರೆ ನೀವು(ಸ) ನಿಮ್ಮ ಸಂಬಂಧಿಕರನ್ನು ಉತ್ತಮ ರೀತಿಯಲ್ಲಿ ವರ್ತಿಸುತ್ತೀರಿ ಮತ್ತು ಸತ್ಯವನ್ನು ಮಾತನಾಡುತ್ತೀರಿ. ನೀವು(ಸ) ಜನರ ಹೊರೆಯನ್ನು ಹೊರುತ್ತೀರಿ ಮತ್ತು ಆತಿಥ್ಯವನ್ನು ತೋರಿಸುತ್ತೀರಿ ಮತ್ತು ಸಂಕಷ್ಟದಲ್ಲಿರುವ ಜನರಿಗೆ ಸಹಾಯ ಮಾಡುತ್ತೀರಿ. ಇಂತಹ ಒಳ್ಳೆಯ ನೀತಿಯುಳ್ಳವರು ಅವರಿಗೆ ಏನು ಅಪಾಯವಾಗಬಹುದು?" (ಬುಖಾರಿ ಕಿತಾಬ್ ಬದಅಲ್ ವಹೀ)

ನೀವು(ರ) ಇಸ್ಲಾಂ ಮತ್ತು ಇಸ್ಲಾಂ ಧರ್ಮದ ಸ್ಥಾಪಕರ ವಿರೋಧದ ತೀವ್ರತೆಯನ್ನು ಸಹ ನೋಡಿದ್ದೀರಿ. 7 ನೇ ನಬವೀಯಲ್ಲಿ, ಖುರೈಶರು ಇಸ್ಲಾಂ ಧರ್ಮವನ್ನು ನಾಶಮಾಡುವ ಈ ಯೋಜನೆಯನ್ನು ಹೂಡಿದರು, ಅಂದರೆ ಮುಹಮ್ಮದ್(ಸ) ಮತ್ತು ಅವರ(ಸ) ಕುಟುಂಬವನ್ನು ಶಿಅ್‌ಬ ಅಬೀ ತಾಲಿಬ್‌ನಲ್ಲಿ ಸುತ್ತುವರಿಯಬೇಕು. ಈ ಮುತ್ತಿಗೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಜೊತೆಗೆ ಹಝ್ರತ್ ಖದೀಜಾ(ರ) ಕೂಡ ಸೇರಿದ್ದರು. ಮೂರು ವರ್ಷಗಳ ಈ ಅವಧಿಯು ನಿರಂತರ ತ್ಯಾಗಗಳಲ್ಲಿ ಕಳೆಯಿತು. ಅವರು ತೆರೆದ ಆಕಾಶದ ಕೆಳಗೆ ಹಸಿವು, ಬಾಯಾರಿಕೆ, ತೀವ್ರ ಹವಾಮಾನ, ಪ್ರೀತಿಪಾತ್ರರಿಂದ ಬೇರ್ಪಡುವಿಕೆ ಮತ್ತು ಇಂತಹ ಅನೇಕ ತೊಂದರೆಗಳನ್ನು ಸಹಿಸಿಕೊಂಡರು. ಆದರೆ ಅವರು ಹಝ್ರತ್ ಪೈಗಂಬರ್(ಸ) ಅವರನ್ನು ಬಿಡಲಿಲ್ಲ. ಆದರೆ ಕ್ಷಾಮಗಳು ತಮ್ಮ ಪರಿಣಾಮವನ್ನು ತೋರಿಸಿದವು ಮತ್ತು ಹಝ್ರತ್ ಪೈಗಂಬರ್(ಸ)ರ ಈ ನಿಷ್ಠಾವಂತ ಪತ್ನಿ ಆ ದಿನಗಳ ಕಷ್ಟತೆಗಳನ್ನು ಸಹಿಸಲಾರದೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** – ಹಝ್ರತ್ ಖದೀಜಾ(ರ) ಅವರ ಅಗಲಿಕೆಯ ದುಃಖವನ್ನು ಹಝ್ರತ್ ಪೈಗಂಬರ್(ಸ) ಮರೆಯಲಾಗಲಿಲ್ಲ. ಅವರು ಎಷ್ಟು ಅದೃಷ್ಟವಂತ ಮಹಿಳೆಯಾಗಿದ್ದರು ಎಂದರೆ ಅವರ ಬಗ್ಗೆ ಹಝ್ರತ್ ಪೈಗಂಬರ್(ಸ) ಹೇಳಿದರು:

"...ಖದೀಜಾ(ರ) ಅವರಿಗಿಂತ ಉತ್ತಮರು ಯಾರೂ ಇರಲಾರರು. ಇಡೀ ಜಗತ್ತು ನನ್ನನ್ನು ನಿರಾಕರಿಸಿದಾಗ ಅವರು ನನ್ನನ್ನು ನಂಬಿದರು ಮತ್ತು ಇಡೀ ಜಗತ್ತು ನನ್ನನ್ನು ನಿರಾಕರಿಸಿದಾಗ ಅವರು ನನ್ನನ್ನು ದೃಢಪಡಿಸಿದರು ಮತ್ತು ಎಲ್ಲಾ ಜನರು ನನ್ನನ್ನು ತ್ಯಜಿಸಿದಾಗ ಅವರು ತನ್ನ ಸಂಪತ್ತಿನಿಂದ ಕರುಣೆ ಮತ್ತು ದಯೆಯನ್ನು ತೋರಿಸಿದರು ಓ ಆಯಿಶಾ! ನಾನೇನು ಮಾಡಲಿ ಖದೀಜಾಳ ಪ್ರೀತಿಯನ್ನು ನನಗೆ ನೀಡಲಾಗಿದೆ ಮತ್ತು ನನ್ನ ಹೃದಯದಲ್ಲಿ ಇರಿಸಲಾಗಿದೆ. (ಮುಸ್ಲಿಂ ಕಿತಾಬ್ ಅಲ್–ಫಝಾಎಲ್, ಫಝುಲ್ ಖದೀಜಾ)

ಗೌರವಾನ್ವಿತ ಮೌಲಾನಾ ದೋಸ್ತ್ ಮುಹಮ್ಮದ್ ಸಾಹಿಬ್ ಶಾಹಿದ್ ಅವರ ಮಾತುಗಳಲ್ಲಿ ನಾನು ನಿಮಗೆ ಗೌರವ ಸಲ್ಲಿಸುತ್ತೇನೆ. ಅವರು ಹೇಳುತ್ತಾರೆ:

ಉಮ್ಮುಲ್ ಮುಮಿನೀನ್ ಹಝ್ರತ್ ಖದೀಜಾ(ರ)! ಇಂದು ಈ ಜಗತ್ತಿನಲ್ಲಿ ಇಲ್ಲ ಮತ್ತು ಅವರ ಖಬರ್ ಗುರುತಿಗಳು ಸಹ ಕಣ್ಮರೆಯಾಗಿವೆ. ಆದರೆ ಅವರ ಕೆಲಸ ಮತ್ತು ಹೆಸರು ಎರಡೂ ಶಾಶ್ವತವಾಗಿ ಜೀವಂತವಾಗಿ ಉಳಿದುಕೊಂಡಿದೆ, ಅದೇ ರೀತಿ ಹಝ್ರತ್ ಪೈಗಂಬರ್(ಸ) ಅವರ ಅನುಗ್ರಹದಾಯಕ ತುಟಿಗಳಿಂದ ಹೊಗಳಿಕೆಯ ಮಾತುಗಳು ವಾತಾವರಣದಿಂದ ಅಳಿಸಲಾಗುವುದಿಲ್ಲ. ಅವುಗಳು ಹಝ್ರತ್ ಪೈಗಂಬರ್(ಸ) ಅವರ ಪ್ರತಿಯೊಬ್ಬ ಪ್ರೇಮಿಯ ಹೃದಯ ಮತ್ತು ಮನಸ್ಸಿನಲ್ಲಿ ಖಂಡಿತವಾಗಿಯೂ ಸುರಕ್ಷಿತವಾಗಿದೆ ಮತ್ತು ಅಂತ್ಯ ಕಾಲದವರೆಗೂ ಪ್ರತಿಧ್ವನಿಸುತ್ತಲೇ ಇರುತ್ತದೆ. ಹಝ್ರತ್ ಖದೀಜಾ(ರ) ವೈಭವ ಮತ್ತು ಪವಿತ್ರತೆಯ ಶಾಶ್ವತ ಸಿಂಹಾಸನದ ಮೇಲೆ ಕುಳಿತಿರುವ ಜೀವಂತ ಪ್ರವಾದಿ ಮತ್ತು ಸಕಲ ಪ್ರವಾದಿಗಳ ಚಕ್ರವರ್ತಿ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಮೊದಲ ಜೀವನ ಸಂಗಾತಿಯಾಗಿ ಖಂಡಿತವಾಗಿಯೂ ಎರಡು ಲೋಕಗಳ ರಾಣಿಯಾಗಿದ್ದಾರೆ.

ಮುಹಮ್ಮದ್(ಸ)ರ ಭಗವಂತನ ಆಣೆ! ಜಗತ್ತಿನ ಯಾವುದೇ ಮಹಾಶಕ್ತಿಯು ಸಹ ಈ ಆಧ್ಯಾತ್ಮಿಕ ಕಿರೀಟವನ್ನು ನಿಮ್ಮಿಂದ ಕಸಿದುಕೊಳ್ಳಲು ಸಾಧ್ಯವಿಲ್ಲ ಅಥವಾ ನಿಮ್ಮ ಸ್ವರ್ಗೀಯ ರಾಜ್ಯವು ಎಂದಿಗೂ ಪಥನವಾಗಲು ಸಾಧ್ಯವಿಲ್ಲ. **ಅಲ್ಲಾಹುಮ್ಮ ಸಲ್ಲಾ ಅಲಾ ಸಯ್ಯಿದಿನಾ ವ ಮೌಲನಾ ಮುಹಮ್ಮದಿನ್ ವ ಅಲಾ ಅಝ್ವಾಜಿ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್ ಇನ್ನಕ ಹಮೀದುಮ್ಮಜೀದ್."**

ಎರಡನೆಯ ಉಲ್ಲೇಖವು ಹಝ್ರತ್ ಪೈಗಂಬರ್(ಸ) ರವರ ಅತ್ಯಂತ ಪ್ರೀತಿಯ ಪತ್ನಿ ಹಝ್ರತ್ ಆಯಿಷಾ(ರ) ಅವರದ್ದಾಗಿದೆ. ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಪೈಗಂಬರ್(ಸ) ಅವರಿಗೆ ಹಝ್ರತ್ ಆಯಿಶಾ(ರ) ಅವರು ರೇಷ್ಮೆ ಕರವಸ್ತ್ರದಲ್ಲಿ ಸುತ್ತಿದ ಹಾಗೆ ಅವರ ಚಿತ್ರವನ್ನು ದರ್ಶನದಲ್ಲಿ ತೋರಿಸಿದನು. ಹಝ್ರತ್ ಆಯಿಷಾ(ರ) ತಮ್ಮ ಜೀವನದಲ್ಲಿ ಹೆಚ್ಚು ಕಡಿಮೆ ಒಂಬತ್ತು ವರ್ಷಗಳನ್ನು ಮಾತ್ರ ಪ್ರವಾದಿಯವರೊಂದಿಗೆ ಕಳೆದರು. ಈ ಕೆಲವು ವರ್ಷಗಳಲ್ಲಿ, ಹಝ್ರತ್ ಆಯಿಶಾ(ರ.ಅ) ಹಝ್ರತ್ ಪೈಗಂಬರ್(ಸ) ರಿಂದ ಧರ್ಮವನ್ನು ಕಲಿಯಲು ಪ್ರತಿ ಕ್ಷಣ ಕಳೆದರು ಮತ್ತು ಅವರ(ಸ) ಚಲನವಲನಗಳನ್ನು ಬಹಳ ಎಚ್ಚರಿಕೆಯಿಂದ ಗಮನಿಸಿದರು ಮತ್ತು ಅವರು ಎಷ್ಟರ ಮಟ್ಟಿಗೆ ಧರ್ಮದ ಬಗ್ಗೆ ಕಲಿತರು ಎಂದರೆ ಅವರನ್ನು ಮುಜ್‌ತಹಿದೀನ್ ಸಹಾಬಿಗಳಲ್ಲಿ ಎಣಿಸಲ್ಪಡುತ್ತಾರೆ.

ಜಾಮಿಯಾ ತಿರ್ಮಿದಿಯಲ್ಲಿ ಹಝ್ರತ್ ಅಬು ಮೂಸಾ ಅಶ್‌ಅರಿ ಅವರು ಹೇಳುತ್ತಾರೆ, ನಮಗೆ ಎಂದಾದರು ಯಾವುದಾದರು ಧಾರ್ಮಿಕ ಸಮಸ್ಯೆ ಎದುರಾದರೆ ನಾವು ಹಝ್ರತ್ ಆಯಿಷಾ(ರ) ರವರನ್ನು ಕೇಳುತ್ತಿದ್ದೆವು ಅವರಿಂದ ನಮಗೆ ಆ ಸಮಸ್ಯೆಗೆ ಸೂಕ್ತವಾದ ಉತ್ತರ ದೊರಕುತ್ತಿತ್ತು. ಹಝ್ರತ್ ಆಯಿಷಾ(ರ) ಅವರು ಬಹಳ ಚಿಕ್ಕ ವಯಸ್ಸಿನಲ್ಲಿ ಹಝ್ರತ್ ಪೈಗಂಬರ್(ಸ) ಅವರನ್ನು ವಿವಾಹವಾಗಿದ್ದರೂ ಸಹ. ಅವರು ಹಝ್ರತ್ ಪೈಗಂಬರ್(ಸ) ಅವರನ್ನು ಸಂಪೂರ್ಣವಾಗಿ ಬೆಂಬಲಿಸಿದರು. ಹಝ್ರತ್ ಪೈಗಂಬರ್(ಸ) ತಪಸ್ವಿ ಜೀವನವನ್ನು ನಡೆಸಿದರು. ಅನೇಕ ಅನೇಕ ದಿನಗಳವರೆಗೆ ಮನೆಯಲ್ಲಿ ಬೆಂಕಿ ಉರಿಯುತ್ತಿರಲಿಲ್ಲಲ್ಲಾ ಕಾಲದಲ್ಲಿ ಮಣ್ಣಿನ ಮನೆಯಾಗಿರುತ್ತಿತ್ತು. ಹಝ್ರತ್ ಆಯಿಷಾ(ರ) ಮನೆಗೆಲಸವನ್ನೆಲ್ಲ ಮಾಡುತ್ತಿದ್ದರು. ಹಿಟ್ಟನ್ನು ಬೆರೆಸುತ್ತಿದ್ದರು. ಆಹಾರವನ್ನು ತಯಾರಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ)ರ ಹಾಸಿಗೆಯನ್ನು ಯಾವಾಗಲೂ ತಮ್ಮ ಕೈಗಳಿಂದ ಸರಿಪಡಿಸುತ್ತಿದ್ದರು. ತಲೆ ಕಡೆ ನೀರು ಮತ್ತು ಮಿಸ್ವಾಕ್ ಅನ್ನು ಇಡುತ್ತಿದ್ದರು. ಹಝ್ರತ್ ಆಯಿಷಾ(ರ) ಹೇಳುತ್ತಿದ್ದರು: ನಮ್ಮಲ್ಲಿ ಪ್ರತಿಯೊಬ್ಬ ಪತ್ನಿಯರು ಒಂದು ಜೊತೆ ಬಟ್ಟೆಯನ್ನು ಹೊರತುಪಡಿಸಿ ಬೇರೆ ಯಾವುದೇ ಬಟ್ಟೆಗಳನ್ನು ಹೊಂದಿರಲಿಲ್ಲ. ಅವರು ಹಝ್ರತ್ ಪೈಗಂಬರ್(ಸ) ರೊಂದಿಗೆ ಯುದ್ಧಗಳಲ್ಲಿಯೂ ಭಾಗವಹಿಸುತ್ತಿದ್ದರು ಮತ್ತು ಗಾಯಾಳುಗಳಿಗೆ ನೀರು ಕೊಡುತ್ತಿದ್ದರು.

ವಿಜಯದ ಅವಧಿಯು ಪ್ರಾರಂಭವಾದಾಗ ಮತ್ತು ಯುದ್ಧ ಸಂಪತ್ತನ್ನು ಹೇರಳವಾಗಿ ಬರಲು ಪ್ರಾರಂಭಿಸಿದಾಗ, ಹಝ್ರತ್ ಪೈಗಂಬರ್(ಸ)ರ ಧರ್ಮಪತ್ನಿಯರು ಸಹ ಜೀವನಾಂಶವನ್ನು ಹೆಚ್ಚಿಸುವಂತೆ ಒತ್ತಾಯಿಸಿದರು. ಹಝ್ರತ್ ಪೈಗಂಬರ್(ಸ) ಅವರಿಗೆ ಈ ಮಾತು ಇಷ್ಟವಾಗಲಿಲ್ಲ ಅವರು ಒಂದು ತಿಂಗಳ ಕಾಲ ತಮ್ಮ ಎಲ್ಲಾ ಪತ್ನಿಯರಿಂದ ಬೇರ್ಪಟ್ಟರು. 'ಈಲಾ' ವಿನ ಅವಧಿ ಮುಗಿದಾಗ, ಹಝ್ರತ್ ಪೈಗಂಬರ್(ಸ) ಮೊದಲು ಹಝ್ರತ್ ಆಯಿಷಾ(ರ) ಅವರ ಬಳಿಗೆ ಬಂದು ಅಲ್ಲಾಹನ ಆಜ್ಞೆಯನ್ನು ಸೂರಾ ಅಲ್–ಅಹ್‌ಝಾಬ್‌ನ ವಚನ 28–29 ಗಳನ್ನು ತಿಳಿಸಿದರು, ಅದರ ಅನುವಾದ ಹೀಗಿದೆ: ಎಲೈ ಪ್ರವಾದಿ, ನಿನ್ನ ಪತ್ನಿಯರೊಡನೆ ಹೇಳು: 'ನೀವು ಐಹಿಕ ಜೀವನವನ್ನೂ ಅದರ ಆಡಂಭರವನ್ನೂ ಬಯಸುವಿರಾದರೆ ಬನ್ನಿರಿ, ನಾನು ನಿಮಗೇನಾದರೂ ಪರಿಹಾರಧನ ನೀಡಿ ಯಥೋಚಿತವಾದ ರೀತಿಯಲ್ಲಿ ನಿಮ್ಮನ್ನು ಬಿಟ್ಟು ಬಿಡುವೆನು. 'ಆದರೆ ನೀವು ಅಲ್ಲಾಹನನ್ನೂ ಅವನ ಸಂದೇಶವಾಹಕನನ್ನೂ ಪರಲೋಕದ ಗೃಹವನ್ನೂ ಬಯಸುವಿರಾದರೆ, ನಿಮ್ಮ ಪೈಕಿ ಸತ್ಕರ್ಮಿಗಳಿಗೆ ಅಲ್ಲಾಹನು ಮಹತ್ವದ ಪ್ರತಿಫಲವನ್ನು ಸಿದ್ಧಪಡಿಸಿಟ್ಟಿದ್ದಾನೆ.' ಹಝ್ರತ್ ಪೈಗಂಬರ್(ಸ) ಹೇಳಿದರು:

"ನನಗೆ ಇದರ ಉತ್ತರ ಬೇಕು."

ಆತ್ಮೀಯ ಸಬೀಕರೇ!! ನಿಸ್ಸಂದೇಹವಾಗಿ, ತಾತ್ಕಾಲಿಕವಾಗಿ ಯುದ್ಧ ದಂಪತ್ತು ಬಹಳಷ್ಟು ಪ್ರಮಾಣದಲ್ಲಿ ಬರುತ್ತಿದ್ದುದನ್ನು ನೋಡಿದ ಧರ್ಮಪತ್ನಿಯರೆಲ್ಲರು ಜೀವನಾಂಶವನ್ನು ಹೆಚ್ಚಿಸುವಂತೆ ಒತ್ತಾಯಿಸುತ್ತಿದ್ದರು. ಆದರೆ ಹಝ್ರತ್ ಪೈಗಂಬರ್(ಸ)ರು ಬೇಸರಗೊಳ್ಳುವುದು ಯಾಗಿರೂ ಇಷ್ಟವಿರಲಿಲ್ಲ. ಹಝ್ರತ್ ಆಯಿಷಾ(ರ) ತಕ್ಷಣವೇ ಉತ್ತರಿಸಿದರು, ಓ ನನ್ನ ಯಜಮಾನರೇ! ನಾನು ಅಲ್ಲಹನು ಮತ್ತು ಸಂದೇಶವಾಹಕ ಮತ್ತು ಪರಲೋಕವನ್ನು ಪ್ರೀತಿಸುತ್ತೇನೆ. ಉಳಿದ ಪತ್ನಿಯರೂ ಕೂಡ ಅದೇ ಉತ್ತರವನ್ನು ನೀಡಿದರು. ಮತ್ತು ಪ್ರಪಂಚದ ಎಲ್ಲಾ ಮುಸ್ಲಿಂ ಮಹಿಳೆಯರಿಗೆ ಮಾದರಿಯಾದರು.

ಹಝ್ರತ್ ಪೈಗಂಬರ್(ಸ)ರು ನಿಧನ ಹೊಂದಿದಾಗ ಹಝ್ರತ್ ಆಯಿಷಾ(ರ) ಕೇವಲ ಇಪ್ಪತ್ತು ವರ್ಷ ವಯಸ್ಸಿನವರಾಗಿದ್ದರು. ಅವರು ಬಹಳ ತಾಳ್ಮೆ ಮತ್ತು ಪರಿಶ್ರಮವನ್ನು ತೋರಿಸಿದರು. ಅವರ ಕೋಣೆಯು ಹಝ್ರತ್ ಪೈಗಂಬರ್(ಸ) ಅವರ ಅಂತಿಮ ವಿಶ್ರಾಂತಿ ಸ್ಥಳವಾಯಿತು.

ನಂತರ ಅದೇ ಕೋಣೆಯಲ್ಲಿ ಹಝ್ರತ್ ಅಬೂಬಕರ್(ರ) ಅವರನ್ನು ದಫನ್ ಮಾಡಲಾಯಿತು. ಭಾವನೆಗಳ ಒಂದು ದೊಡ್ಡ ತ್ಯಾಗವು ಹಝ್ರತ್ ಆಯಿಷಾ(ರ) ಅವರೊಂದಿಗೆ ಸಂಬಂಧಿಸಿದೆ. ಅವರು ತಮ್ಮ ಕೊಠಡಿಯಲ್ಲಿ ಉಳಿದ ಜಾಗವನ್ನು ತಮಗಾಗಿ ಮೀಸಲಾಗಿ ಇರಿಸಿಕೊಂಡಿದ್ದರು, ಆದರೆ ಹಝ್ರತ್ ಉಮರ್(ರ) ತಮ್ಮ ಪುತ್ರನನ್ನು ಹಝ್ರತ್ ಆಯಿಷಾ(ರ) ಅವರ ಬಳಿಗೆ ಅವರನ್ನು ಅಲ್ಲಿ ದಫನ್ ಮಾಡಲು ಅನುಮತಿ ಕೇಳಲಿ ಕಳುಹಿಸಿದಾಗ ಹಝ್ರತ್ ಆಯಿಷಾ(ರ) ಹೇಳಿದರು. ಈ ಸ್ಥಳವನ್ನು ನಾನು ನನಗಾಗಿಯೇ ಮೀಸಲಿಟ್ಟಿದ್ದೆ, ಆದರೆ ಇಂದು ನಾನು ನನ್ನ ವ್ಯಕ್ತಿತ್ವಗಿಂರ ಉಮರ್(ರ) ಅವರಿಗೆ ಆದ್ಯತೆ ನೀಡುತ್ತೇನೆ. ಖಲೀಫರ ಆಸೆಯನ್ನು ಈಡೇರಿಸಲು ಅತ್ಯಂತ ಪ್ರೀತಿಯ ಪತಿ ಮತ್ತು ಮಹಾನ್ ತಂದೆಯೊಂದಿಗೆ ದಫನ್ ಆಗಬೇಕೆಂಬ ತಮ್ಮ ಆಸೆಯನ್ನು ತ್ಯಾಗ ಮಾಡಿದ್ದು ಹಝ್ರತ್ ಆಯಿಷಾ(ರ) ಅವರ ಮಹಾನ್ ತ್ಯಾಗವಾಗಿದೆ.

ಕೇಳುಗರೇ! ಹಝ್ರತ್ ಉಮ್ಮೆ ಸಲಮಾ(ರ) ಅವರ ಸ್ಥಿತಿಯನ್ನು ಅವಲೋಕಿಸಿರಿ, ಅವರು ಬಹಳ ಪ್ರೀತಿ ಮತ್ತು ಸೂಕ್ಷ್ಮವಾಗಿ ಪೋಷಣೆ ಪಡೆದರು. ಮುಸಲ್ಮಾನರಾದ ನಂತರ ಅವರು ತಮ್ಮ ಪತಿಯೊಂದಿಗೆ ಅಬಿಸೀನಿಯಾಗೆ ವಲಸೆ ಹೋದರು. ಅವರ ಪತಿ ಅಬು ಸಲಮಾ ಹಝ್ರತ್ ಪೈಗಂಬರ್(ಸ) ಅವರ ಮಲ ಸಹೋದರರಾಗಿದ್ದರು. ಹಿಜ್ರತ್ ಮಾಡುವವರಲ್ಲಿ ಮೊದಲ ಮಹಿಳೆ ಇವರಾಗಿದ್ದರು. ಅಬಿಸೀನಿಯಾದಿಂದ ಹಿಂದಿರುಗಿದ ನಂತರ, ಅವರು ಮದೀನಾಗೆ ವಲಸೆ ಹೋಗಲು ಬಯಸಿದ್ದರು. ಏಕೆಂದರೆ ಮೆಕ್ಕಾದ ಭೂಮಿ ಮೊದಲಿಗಿಂತ ಹೆಚ್ಚು ರಕ್ತಪಿಪಾಸು ಆಗಿತ್ತು. ವಲಸೆಯ ಸಮಯದಲ್ಲಿ, ಅವರ ಗೋತ್ರದವರು ವಿರೋಧಿಸಿದರು. ಮತ್ತು ಅವರನ್ನು ಹೋಗಲು ಬಿಡಲಿಲ್ಲ. ಅಂತಿಮವಾಗಿ, ಅಬುಸಲಮಾ(ರ) ಒಬ್ಬರೇ ಮದೀನಾಕ್ಕೆ ಹೋದರು. ಅವರು ಹೋದ ನಂತರ ಅವರ ಅತ್ತೆಮನೆಯವರು ಬಂದು ಅವರ ಮುಗ್ಧ ಮಗು ಸಲ್ಮಾನನ್ನು ಇವನು ನಮ್ಮವನು ಎಂದು ಹೇಳಿ ಕಸೆದುಕೊಂಡು ಕರೆದೊಯ್ದರು. ಉಮ್ಮೆ ಸಲಮಾ(ರ) ತೀವ್ರ ನೋವಿನಿಂದ ಬಳಲುತ್ತಿದ್ದರು. ಹಗಲು ಸಮಯದಲ್ಲಿ ಭಯಭೀತರಾಗಿ ಮೈದಾನಕ್ಕೆ ಹೋಗುತ್ತಿದ್ದರು. ಮತ್ತು ಇಡೀ ದಿನ ಅಳುತ್ತಿದ್ದರು. ಒಂದು ವರ್ಷ ಇದೇ ಪರಿಸ್ಥಿತಿ ಇತ್ತು. ಕೊನೆಗೆ ಅವರ ಸೋದರ ಸಂಬಂಧಿ ಕನಿಕರಪಟ್ಟು ಹೇಳಿದರು: "ದೇವರ ದಾಸರೇ! ಈ ವಿನಮ್ರ ಬಡ ಮಹಿಳೆಯನ್ನು ನೀವು ಏಕೆ ಮುಕ್ತಗೊಳಿಸಬಾರದು. ಆಗ ಅವರಿಗೆ ಸ್ವಲ್ಪ ಕರುಣೆ ಬಂತು. ಮತ್ತು ಅವರು ತಮ್ಮ ಗಂಡನ ಬಳಿಗೆ ಹೋಗಲು ಅವಕಾಶ ಮಾಡಿಕೊಟ್ಟರು. ಅತ್ತಿಗೆ ಮನೆಯವರೂ ಕರುಣೆದೋರಿ ಅವರಿಗೆ ಅವರ ಪುತ್ರನನ್ನು ನೀಡಿದರು. ನಂತರ ಅವರು ಮದೀನಾ ತಲುಪಿದರು. ಅವರ ಪತಿ ಅಬು ಸಲಮಾ(ರ) ಮಹಾನ್ ಕುದುರೆ ಸವಾರರಾಗಿದ್ದರು. ಉಹುದ್ ಯುದ್ಧದಲ್ಲಿ ಅವರು ಚೇತರಿಸಿಕೊಳ್ಳಲು ಸಾಧ್ಯವಾಗದಂತಹ ಗಾಯಗಳನ್ನು ಅನುಭವಿಸಿದರು. ಸ್ವಲ್ಪ ಸಮಯದ ನಂತರ, ಅವನ ಗಾಯವು ಸಿಡಿಯಿತು ಮತ್ತು ಅವರು ನಿಧನ ಹೊಂದಿದರು. ಅವರ ನಿಧನದ ಸುದ್ದಿಯನ್ನು ತಿಳಿದ ಹಝ್ರತ್ ಪೈಗಂಬರ್(ಸ) ಅವರ ಮನೆಗೆ ಬಂದರು. ಅಲ್ಲಿ ಅನಾಹುತ ಸಂಬವಿಸಿತ್ತು. ಉಮ್ಮೆ ಸಲಮಾ(ರ) ಹೇಳುತ್ತಿದ್ದರು: ಓಹ್, ಈ ಬಡತನದಲ್ಲಿ ಇದು ಎಂತಹ ಸಾವು. ಹಝ್ರತ್ ಪೈಗಂಬರ್(ಸ) ಅವರಿಗೆ ತಾಳ್ಮೆ ವಹಿಸಲು ಸಲಹೆ ನೀಡಿದರು ಮತ್ತು ಅಲ್ಲಾಹನು ಅವರಿಗಿಂತ ಉತ್ತಮ ಉತ್ತರಾಧಿಕಾರಿಯನ್ನು ನೀಡಲಿ ಎಂದು ಪ್ರಾರ್ಥಿಸಿ ಎಂದು ಹೇಳಿದರು, ಅಬು ಸಲಮಾ(ರ) ಅವರ ನಮಾಝೆ ಜನಾಝದಲ್ಲಿ 9 ತಕ್ಬೀರ್ಗಳನ್ನು ಪಠಿಸಲಾಯಿತು ಮತ್ತು ಜನರು ಕೇಳಿದಾಗ ಅವರು(ಸ) ಹೇಳಿದರು: ಅವರು ಒಂದು ಸಾವಿರ ತಕ್ಬೀರ್‌ಗಳಿಗೆ ಅರ್ಹರಾಗಿದ್ದರು. ಆ ಸಮಯದಲ್ಲಿ ಉಮ್ಮೆ ಸಲಮಾ(ರ) ಗರ್ಭಿಣಿಯಾಗಿದ್ದರು. ಗರ್ಭಧಾರಣೆಯ ಅವಧಿ ಮುಗಿದ ನಂತರ, ಹಝ್ರತ್ ಪೈಗಂಬರ್(ಸ) ಅವರು ನಿಕಾಹ್ ಸಂದೇಶವನ್ನು ಕಳುಹಿಸಿದರು. ಅದಕ್ಕೆ ಉಮ್ಮೆ ಸಲಮಾ(ರ) ಅವರು ಕ್ಷಮೆಯಾಚಿಸುತ್ತಾ ಹೇಳಿದರು: ನಾನು ತುಂಬಾ ಉತ್ಸಾಹಿ ಮಹಿಳೆಯಾಗಿದ್ದೇನೆ, ನನಗೆ ಮಕ್ಕಳಿದ್ದಾರೆ ಮತ್ತು ನನಗೂ ವಯಸ್ಸಾಗಿದೆ. ಹಝ್ರತ್ ಪೈಗಂಬರ್(ಸ) ಆ ಎಲ್ಲಾ ಮನ್ನಿಸುವಿಕೆಯ ಬಗ್ಗೆ ಅವರನ್ನು ಸಮಾಧಾನಪಡಿಸಿದರು, ಹೀಗೆ ಅವರು ಹಝ್ರತ್ ಪೈಗಂಬರ್(ಸ) ಅವರನ್ನು ವಿವಾಹವಾದರು.

ಮೊದಲು ಶಹೀದ್ ಆಗುವಂತಹ ಮುಸ್ಲಿಂ ಮಹಿಳೆ ಹಝ್ರತ್ ಸುಮ್ಮೆಯಾ(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಏಳನೆಯವರಾಗಿದ್ದರು. ಬಹುದೇವತಾವಾದಿಗಳು ಅವರನ್ನು ಬಹುದೇವತಾರಾಧನೆಗೆ ಒತ್ತಾಯಿಸಲು ಎಲ್ಲ ಪ್ರಯತ್ನಗಳನ್ನು ಮಾಡಿದರು. ಬಿಸಿಲಿನಲ್ಲಿ ಕಬ್ಬಿಣದ ಕವಚವನ್ನು ಧರಿಸಿ ದಿನವಿಡೀ ಹಸಿವಿನಿಂದ ಬಾಯಾರಿಕೆಯಿಂದ ಮಕ್ಕಾದ ಬಿಸಿ ಮರಳಿನ ಮೇಲೆ ನಿಲ್ಲಿಸುತ್ತಿದ್ದರು, ಆದರೆ ಸಹನಶೀಲೆಯ ಮುಂದೆ ಅವರ ಎಲ್ಲಾ ಪ್ರಯತ್ನಗಳು ವ್ಯರ್ಥವಾಯಿತು. ಒಂದು ರಾತ್ರಿ, ಅಬು ಜಹಲ್ ಅವರನ್ನು ನಿಂದಿಸಲು ಪ್ರಾರಂಭಿಸಿದನು. ತದನಂತರ ಅವನ ಕೋಪವು ಎಷ್ಟು ಪ್ರಬಲವಾಯಿತು ಎಂದರೆ ಅವನು ಎದ್ದು ತಕ್ಷಣ ಈಟಿ ಎಸೆದನು, ಆ ಈಟಿಯಿಂದ ಹಝ್ರತ್ ಸುಮ್ಮೆಯಾ(ರ) ಶಹೀದ್ ಆದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

ಹಝ್ರತ್ ಉಮ್ಮೆ ಅಮ್ಮಾರಾ(ರ) ಅವರ ಸಂಬಂಧ ಬನೂ ನಜ್ಜಾರ್‌ಯಿಂದ ಇತ್ತು. ಅವರು ಮದೀನಾದಲ್ಲಿ ಜನಿಸಿದರು. ಹಿಜ್ರತ್ತಿನ ಮೂರನೇ ವರ್ಷದಲ್ಲಿ, ಸತ್ಯನಿಷೇಧಿಗಳ ಸೈನ್ಯದ ಆಗಮನದ ಸುದ್ದಿಯೊಂದಿಗೆ, ಯುದ್ಧದ ಸಿದ್ಧತೆಗಳು ಪ್ರಾರಂಭವಾದವು, ಆದ್ದರಿಂದ ಹಝ್ರತ್ ಉಮ್ಮೆ ಅಮ್ಮಾರಾ(ರ) ಯುದ್ಧದಲ್ಲಿ ಗಾಯಗೊಂಡವರಿಗೆ ಬ್ಯಾಂಡೇಜ್ ಮತ್ತು ನೀರು ಕುಡಿಸಲು ಜೊತೆಯಲ್ಲಿ ಹೋಗಲು ವಿನಂತಿಸಿದರು, ಅದನ್ನು ಸ್ವೀಕರಿಸಲಾಯಿತು. ಅವರು(ರ) ತಮ್ಮ ಪತಿ ಮತ್ತು ಇಬ್ಬರು ಗಂಡುಮಕ್ಕಳೊಂದಿಗೆ ಯುದ್ಧದಲ್ಲಿ ಭಾಗವಹಿಸಿದರು. ಗಾಯಾಳುಗಳಿಗೆ ನೀರು ಕೊಡುವಾಗ, ಹಝ್ರತ್ ಪೈಗಂಬರ್(ಸ) ಅಪಾಯದಲ್ಲಿ ಸಿಲುಕಿದ್ದನ್ನು ಕಂಡಾಗ, ಅವರು ತಮ್ಮ ನೀರಿನ ಚೀಲವನ್ನು ಎಸೆದು ಖಡ್ಗವನ್ನು ಎತ್ತಿಕೊಂಡು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ರಕ್ಷಿಸಲು ಪ್ರಾರಂಭಿಸಿದರು.

ಸತ್ಯನಿಷೇಧಿಗಳು ಪ್ರವಾದಿಯವರನ್ನು ಹಾನಿ ಉಂಟು ಮಾಡುವ ಸಲುವಾಗಿ ಅತ್ಯಂತ ಉಗ್ರವಾಗಿ ಆಕ್ರಮಣ ಮಾಡುತ್ತಿದ್ದರು. ನಿಮ್ಮ ಸುತ್ತಲೂ ಕೆಲವೇ ಜನರು ಉಳಿದಿದ್ದರು. ಅವರು ನಿಮ್ಮನ್ನು ರಕ್ಷಿಸಲು ತಮ್ಮ ಪ್ರಾಣದೊಂದಿಗೆ ಆಟವಾಡುತ್ತಿದ್ದರು. ಅಂತಹ ಸೂಕ್ಷ್ಮ ಮತ್ತು ಅಪಾಯಕಾರಿ ಸಂದರ್ಭದಲ್ಲಿ, ಈ ಧೈರ್ಯಶಾಲಿ ಮಹಿಳೆ ಅವರಿಗೆ(ಸ) ಸಹಾಯ ಮಾಡಿದರು. ಸತ್ಯನಿಷೇಧಿಗಳು ಹಝ್ರತ್ ಪೈಗಂಬರ್(ಸ)ರ ಮೇಲೆ ದಾಳಿ ಮಾಡಿದಾಗ, ಅವರು ಬಾಣಗಳು ಮತ್ತು ಖಡ್ಗಗಳಿಂದ ಅವರನ್ನು ತಡೆಯುತ್ತಿದ್ದರು. ಉಹದ್ ಯುದ್ಧದಲ್ಲಿ ಉಮ್ಮೆ ಅಮ್ಮಾರಾ(ರ) ಬಲ ಮತ್ತು ಎಡಭಾಗದಲ್ಲಿ ಸಮನಾಗಿ ಹೋರಾಡುವುದನ್ನು ನಾನು ನೋಡುತ್ತಿದ್ದೆ ಎಂದು ಸ್ವತಃ ಹಝ್ರತ್ ಪೈಗಂಬರ್(ಸ) ಹೇಳಿದ್ದಾರೆ. ಇಬ್ನ್ ಕಮಿಯಾ ಹಝ್ರತ್ ಪೈಗಂಬರ್(ಸ) ಅವರನ್ನು ಸಮೀಪಿಸಿದಾಗ, ಈ ಧೈರ್ಯಶಾಲಿ ಮಹಿಳೆ ಅವನನ್ನು ತಡೆದರು. ಆ ದುರ್ದೈವಿ ಖಡ್ಗದಿಂದ ಎಷ್ಟು ತೀವ್ರವಾಗಿ ಹೊಡೆದನು ಎಂದರೆ ಅದರಿಂದ ಆ ಅನುಭವಿ ಮಹಿಳೆಯ ಭುಜ ಗಾಯಗೊಂಡಿತು ಮತ್ತು ಆ ಏಟು ಎಷ್ಟು ತೀವ್ರವಾಗಿತ್ತೆಂದರೆ ಅದರಿಂದಾಗಿ ಅವರು(ರ) ಗುಹೆಯೊಳಗೆ ಬಿದ್ದರು. ಆದರೆ ಅವರು ಒಂದು ಹೆಜ್ಜೆ ಹಿಂದೆ ಸರಿಯದೆ ಮುಂದೆ ಸಾಗಿ ತಮ್ಮ ಖಡ್ಗದಿಂದ ಅವನ ಮೇಲೆ ತೀವ್ರವಾದ ದಾಳಿ ಮಾಡಿದರು. ಅವನು (ಇಬ್ನೆ ಕಮಿಯಾ) ಎರಡು ರಕ್ಷಾಕವಚವನ್ನು ಧರಿಸದಿದ್ದರೆ ಅವನು ಕೊಲ್ಲಲ್ಪಡುತ್ತಿದ್ದನು ಎಂಬ ಉತ್ಸಾಹದಿಂದ ಅವನನ್ನು ಹೊಡೆದರು.

ಕೇಳುಗರೇ! ಈಗ ಅಸ್ಮಾ ಬಿಂತ್ ಅಬಿ ಬಕರ್(ರ) ಅವರ ಬಗ್ಗೆ ಆಲಿಸಿರಿ. ವಿಶ್ವಾಸ ತಂದವರಲ್ಲಿ ನೀವು 18ನೇ ಯವರಾಗಿದ್ದರು. ಅವರ ಕಥೆ ಏನೆಂದರೆ, ಅವರ ಪುತ್ರ ಅಬ್ದುಲ್ಲಾ ಬಿನ್ ಝುಬೈರ್(ರ) ಹುತಾತ್ಮರಾದಾಗ, ಹಜ್ಜಾಜ್‌ನು ಅವರ ದೇಹವನ್ನು ಕಂಬಕ್ಕೆ ನೇತುಹಾಕಿದನು. 3 ದಿನಗಳ ನಂತರ, ಹಝ್ರತ್ ಅಸ್ಮಾ(ರ) ಸೇವಕಿಯೊಂದಿಗೆ ಪುತ್ರನ ಮೃತದೇಹಕ್ಕೆ ಬಂದರು. ಮೃತದೇಹವು ತಲೆಕೆಳಗಾಗಿ ನೇತಾಡುತ್ತಿತ್ತು. ಈ ದೃಶ್ಯವನ್ನು ಹೃದವನ್ನು ಹಿಡಿತದಲ್ಲಿಟ್ಟು ನೋಡಿದರು. ಮತ್ತು ಬಹಳ ಧೈರ್ಯದಿಂದ ತಾಳ್ಮೆವಹಿಸಿ ಹೀಗೆ ಹೇಳಿದರು:

"ಈ ಸವಾರನಿಗೆ ತನ್ನ ಕುದುರೆಯಿಂದ ಇಳಿಯಲು ಸಮಯವಾಗಲಿಲ್ಲವೇ?" ಕೆಲವು ದಿನಗಳ ನಂತರ, ಅಬ್ದುಲ್ ಮಲಿಕ್‌ನ ಆದೇಶವು ಬಂದಿತು, ಆದ್ದರಿಂದ ಹಜ್ಜಾಜ್ ಆ ಮೃತದೇಹವನ್ನು ಕೆಳಗಿಳಿಸಿ ಯಹೂದಿಯರ ಸ್ಮಶಾನದಲ್ಲಿ ಎಸೆದನು. ಹಝ್ರತ್ ಇಬ್ನ್ ಝುಬೈರ್(ರ) ರವರುದೇಹ ಭಾಗಗಳು ಬೇರೆ ಬೇರೆಯಾಗಿತ್ತು. ಸ್ನಾನಕ್ಕೆ ಯಾವುದಾದರು ಭಾಗ ಎತ್ತಿದರೆ ಅದು ಕೈಗೆ ಬರುತ್ತಿತ್ತು. ಮತ್ತು ಈ ಭಾಗಗಳ ಮೇಲೆಯೇ ಸರ್ವಶಕ್ತನಾದ ಅಲ್ಲಾಹನ ಕರುಣೆಯು ಅವತರಿಸುತ್ತಾ ಇದೆ ಎಂದು ಹಝ್ರತ್ ಅಸ್ಮಾ(ರ) ಈ ಪರಿಸ್ಥಿತಿಯನ್ನು ನೋಡಿ ತಾಳ್ಮೆವಹಿಸಿದರು. ಹಝ್ರತ್ ಅಸ್ಮಾ(ರ) ಅವರು ಅಬ್ದುಲ್ಲಾ ಅವರ ಮೃತದೇಹವನ್ನು ನೋಡುವವರೆಗೂ ನಾನು ಸಾಯಬಾರದು ಎಂದು ಪ್ರಾರ್ಥಿಸುತ್ತಿದ್ದರು. ಹೀಗೆ ಒಂದು ವಾರವೂ ಕಳೆದಿರಲಿಲ್ಲ ಅಷ್ಟರಲ್ಲಿ ಹಝ್ರತ್ ಅಸ್ಮಾ(ರ) ಅವರ ನಿಧನವಾಯಿತು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ನಿಧನದ ಸಂದರ್ಭದಲ್ಲಿ ಅವರು 100 ವರ್ಷ ವಯಸ್ಸಿನವರಾಗಿದ್ದರು.

ಹಝ್ರತ್ ಉಮ್ಮೆ ಅಬ್ಬನ್(ರ) ತನ್ನ ಪತಿಯ ಆಯುಧದೊಂದಿಗೆ ಯುದ್ಧಭೂಮಿಯನ್ನು ತಲುಪಿದರು. ಮತ್ತು ಮುಸ್ಲಿಮರೊಂದಿಗೆ, ಅವರು ರೋಮನ್ನರ ಮೇಲೆ ಬಾಣಗಳ ಸುರಿಮಳೆಗೈದರು. ಡಮಾಸ್ಕಸ್‌ನ ದೊರೆ

ಯಾವುದೇ ರೀತಿಯಲ್ಲಿ ಹಿಮ್ಮೆಟ್ಟಲು ಸಿದ್ಧರಿರಲಿಲ್ಲ. ಅವರು(ರ) ಪರಿಣಿತ ಬಿಲ್ಲುಗಾರರಾಗಿದ್ದರು ಮತ್ತು ಅವರು ಗುರಿ ಇಟ್ಟು ನೇರವಾಗಿ ಅವನ ಕಣ್ಣಿಗೆ ಬಾಣವನ್ನು ಹೊಡೆದರು. ಹೀಗೆ ಅವರು ಕಿರಿಚಾಡುತ್ತಾ ಹಿಂದಕ್ಕೆ ಓಡಿದನು. ಹೀಗೆ ನಂತರ ಎಲ್ಲಾ ರೋಮನ್ನರು ಓಡಿಹೋದರು.

ಹಝ್ರತ್ ಖನ್ಸಾ(ರ) ಅವರು ತಮ್ಮ ವಯಸ್ಸಾದ ವಯಸ್ಸಿನಲ್ಲಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಖಾದ್ಸಿಯಾ ಕದನದಲ್ಲಿ ಅವರು ತಮ್ಮ ನಾಲ್ಕು ಮಕ್ಕಳನ್ನು ಯುದ್ಧಭೂಮಿಗೆ ಕರೆದೊಯ್ದರು. ಮತ್ತು ಅವರನ್ನು ಉದ್ದೇಶಿಸಿ ಹೀಗೆ ಸಲಹೆ ನೀಡಿದರು ಪ್ರಿಯ ಪಯತ್ರರೇ! ನೀವು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದೀರಿ ಮತ್ತು ನಿಮ್ಮ ಸ್ವಂತ ಇಚ್ಛೆಯಿಂದ ಹಿಜ್ರತ್ ಮಾಡಿದ್ದೀರಿ, ಇಲ್ಲದಿದ್ದರೆ ನಿಮ್ಮ ದೇಶಕ್ಕೆ ನೀವು ಹೊರೆಯಾಗುತ್ತಿರಲಿಲ್ಲ. ಮತ್ತು ನಿಮಗೆ ಬರಗಾಲವಿರಲಿಲ್ಲ. ಇಷ್ಟೆಲ್ಲಾ ಆದರೂ ನೀವು ನಿಮ್ಮ ವೃದ್ಧೆ ತಾಯಿಯನ್ನು ಇಲ್ಲಿಗೆ ತಂದು ಪರ್ಷಿಯನ್ನರ ಮುಂದೆ ಇರಿಸಿದ್ದೀರ. ಅಲ್ಲಾಹನ ಆಣೆ! ನೀವು ಒಬ್ಬ ಪೋಷಕರ ಸಂತಾನವಾಗಿದ್ದೀರಿ. ನಾನು ನಿಮ್ಮ ತಂದೆಗೆ ದ್ರೋಹ ಮಾಡಿಲ್ಲ ಅಥವಾ ನಿಮ್ಮ ತಾಯಿಯ ಸಹೋದರರನ್ನ ಅವಮಾನಿಸಿಲ್ಲ. ಈ ಲೋಕವು ನಶಿಸಿಹೋಗಬೇಕಾಗಿದೆ ಮತ್ತು ಸತ್ಯನಿಷೇಧಿಗಳ ವಿರುದ್ಧ ಹೋರಾಡುವಲ್ಲಿ ದೊಡ್ಡ ಪ್ರತಿಫಲವಿದೆ ಎಂದು ನಿಮಗೆ ತಿಳಿದಿದೆ. ಸರ್ವಶಕ್ತನಾದ ಅಲ್ಲಾಹನು ನುಡಿಯುತ್ತಾನೆ: **ಯಾ ಅಯ್ಯುಹಲ್ಲಝೀನ ಆಮನೂ ಸಬ್ರೂ ವ ಸಾಬಿರೂ ರಾಬಿತೂ–** ಆದ್ದರಿಂದ, ಬೆಳಿಗ್ಗೆ ಎದ್ದು ಯುದ್ಧಕ್ಕೆ ಸಿದ್ಧರಾಗಿ. ಮತ್ತು ಕೊನೆಯವರೆಗೂ ಹೋರಾಡಿ. ಆದ್ದರಿಂದ, ನಾಲ್ವರು ಪುತ್ರರು ಒಟ್ಟಾಗಿ ತಮ್ಮ ಆಯುಧಗಳನ್ನು ಕೈಗೆತ್ತಿಕೊಂಡರು ಬಹಳ ಉತ್ಸಾಹದಿಂದ ಅವಿಶ್ವಾಸಿಗಳ ಮೇಲೆ ಬಿದ್ದರು. ಹಝ್ರತ್ ಖಾನ್ಸಾ(ರ) ಅವರು ತಮ್ಮ ಮಕ್ಕಳನ್ನು ಕಳುಹಿಸಿ ಕಾಡಿಗೆ ಹೋಗಿ ಪ್ರಾರ್ಥನೆ ಮಾಡಲು ಪ್ರಾರಂಭಿಸಿದರು. ಅಲ್ಲಾಹನು ಅನುಗ್ರಹಿಸಿದನು ಮತ್ತು ಮುಸ್ಲಿಮರು ವಿಜಯಶಾಲಿಯಾದರು ಮತ್ತು ಈ ಸಹಾಬಿಯ ನಾಲ್ಕು ಮಕ್ಕಳು ಜೀವಂತವಾಗಿ ಮರಳಿದರು.

ಆತ್ಮೀಯ ಕೇಳುಗರೇ! ಹಝ್ರತ್ ಉಮ್ಮೆ ಶರೀಕ್ ದೌಸೀಯಾ(ರ) ಅವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದಾಗ ಅವರ ಸಂಬಂಧಿಕರೆಲ್ಲರು ಅವರನ್ನು ನಿಂದಿಸಲು, ಸಂಕಷ್ಟಗಳನ್ನು ನೀಡಲು ಪ್ರಾರಂಭಿಸಿದರು. ಅವರನ್ನು ತೊಂದರೆ ನೀಡಲು ಒಂದು ಉಪಾಯ ಮಾಡಿದರು ಅದೇನೆಂದರೆ ಅವರಿಗೆ ಸುಡು ಬಿಸಿಲಿನಲ್ಲಿ ಹೊರಾಂಗಣದಲ್ಲಿ ಅವರಿಗೆ ನಿಲ್ಲಿಸಿ ಅವರಿಗೆ ಜೇನುತುಪ್ಪ ತಿನ್ನಿಸುತ್ತಿದ್ದರು ಅವರಿಗೆ ನೀರು ನೀಡುತ್ತಿರಲಿಲ್ಲ. ಇದರ ಪರಿಣಾಮವಾಗಿ ಅವರು ಪ್ರಜ್ಞಾಹೀನರಾಗುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ, ಅವರು ಇಸ್ಲಾಂ ಧರ್ಮವನ್ನು ತೊರೆಯಲು ಹೇಳುತ್ತಿದ್ದರು. ಆದರೆ ಅವರಿಗೆ ಆ ಪರಿಸ್ಥಿತಿಯಲ್ಲಿ ಏನೂ ಅರ್ಥವಾಗುತ್ತಿರಲಿಲ್ಲ. ಅವರಿಗೆ ವಿವರಿಸಲು ಅವರು ಆಕಾಶವನ್ನು ತೋರಿಸಿದರೆ, ಅವರು ಏಕದೇವೋಪಾಸನೆಯನ್ನು ನಿರಾಕರಿಸಲು ಬಯಸುತ್ತಿದ್ದಾರೆ ಎಂದು ಅವರು ಅರ್ಥಮಾಡಿಕೊಳ್ಳುತ್ತಿದ್ದರು. ಆದರೆ ಅದು ಎಂದಿಗೂ ಸಂಭವಿಸುವುದಿಲ್ಲ ಎಂದು ಅವರು ಉತ್ತರಿಸುತ್ತಿದ್ದರು.

ಹಝ್ರತ್ ಸಫಿಯಾ(ರ) ಬಿಂತ್ ಅಬ್ದ್ ಅಲ್-ಮುತ್ತಲಿಬ್ ಹಝ್ರತ್ ಪೈಗಂಬರ್(ಸ) ಅವರ ತಂದೆಯ ಸಹೋದರಿಯಾಗಿದ್ದರು ಮತ್ತು ಅವರಿಬ್ಬರ ವಯಸ್ಸು ಬಹುತೇಕ ಒಂದೇ ಆಗಿತ್ತು. ಅವರು ತುಂಬಾ ಶೌರ್ಯ ಮತ್ತು ಧೈರ್ಯಶಾಲಿ ಮಹಿಳೆಯಾಗಿದ್ದರು. ಅವರು ಅನೇಕ ಯುದ್ಧಗಳಲ್ಲಿ ಭಾಗವಹಿಸಿದ್ದರು, ಗಾಯಾಳುಗಳಿಗೆ ಬ್ಯಾಂಡೇಜ್ ಮಾಡುತ್ತಿದ್ದರು, ನೀರು ಕೊಡುತ್ತಿದ್ದರು ಮತ್ತು ಅಗತ್ಯವಿದ್ದರೆ, ಅವರು ಕತ್ತಿಯನ್ನು ಸಹ ಎತ್ತಿದರು. ಉಹುದ್ ಯುದ್ಧದಲ್ಲಿ ಯುದ್ಧದ ಹಾದಿ ಬದಲಾಯಿತು. ಮುಸ್ಲಿಮರು ಚದುರಲು ಪ್ರಾರಂಭಿಸಿದರು. ಅವರು ಈಟಿಯೊಂದಿಗೆ ಹೊರಗೆ ನಿಂತು ಮುಸ್ಲಿಮರನ್ನು ಹಿಂದಕ್ಕೆ ಹೋಗುವಂತೆ ಒತ್ತಾಯಿಸಿದರು. ಪರಿಣಾಮವಾಗಿ, ಮುಸ್ಲಿಮರು ಹಿಂತಿರುಗಿ ಹಝ್ರತ್ ಪೈಗಂಬರ್(ಸ) ಅವರನ್ನು ತಮ್ಮ ರಕ್ಷಣೆಗೆ ತೆಗೆದುಕೊಂಡರು.

ಹಝ್ರತ್ ಪೈಗಂಬರ್(ಸ) ಅವರಿಗೆ ಅವರ ಅಗಾಧ ಶೌರ್ಯಕ್ಕೆ ಬಹಳ ಆಶ್ಚರ್ಯವಾಯಿತು ಮತ್ತು ಅವರು (ಸ) ಅವರ ಪುತ್ರ ಝುಬೈರ್‌ಗೆ ಹೇಳಿದರು: ಓ ಜುಬೈರ್! ನಿನ್ನ ತಾಯಿ ಮತ್ತು ನನ್ನ ತಂದೆಯ ಸಹೋದರಿಯ ಶೌರ್ಯ ನೋಡಿ ಅನೇಕ ಧೀರರು ಓಡಿ ಹೋದರೂ ಆದರೆ ಅವರೂ ಒಬ್ಬಂಟಿಯಾಗಿ ಬಂಡೆಗಲ್ಲಿನಂತೆ ಅವಿಶ್ವಾಸಿಗಳ ಮಧ್ಯೆ ಹೋರಾಡುತ್ತಿದ್ದಾರೆ.

ಅದೇ ರೀತಿ ಉಹುದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ) ಅವರ ಚಿಕ್ಕಪ್ಪ ಹಝ್ರತ್ ಹಂಝಾ(ರ) ಅವರು ಶಹೀದ್ ಆದರು. ಸತ್ಯನಿಷೇಧಿಗಳು ಅವರ ಕಿವಿ, ಮೂಗು ಮತ್ತು ಕಣ್ಣುಗಳನ್ನು ಕತ್ತರಿಸಿದಾಗ, ಹಝ್ರತ್ ಪೈಗಂಬರ್(ಸ)ರು ಝುಬೈರ್ ಅವರಿಗೆ ಹೇಳಿದರು: ನನ್ನ ತಂದೆಯ ಸಹೋದರಿಯಾದ ಸಫಿಯಾಳನ್ನು ನನ್ನ ಚಿಕ್ಕಪ್ಪನ ಮೃತದೇಹದ ಬಳಿ ಕರೆದುಕೊಂಡು ಬರಬೇಡಿ ಇಲ್ಲವಾದರೆ ಅವರು ಅಣ್ಣನ ಮೃತದೇಹದ ಈ ಸ್ಥಿತಿಯನ್ನು ನೋಡಿ ದುಃಖದಲ್ಲಿ ಮುಳುಗಿ ಹೋಗುತ್ತಾರೆ. ಆದರೆ ಸಫಿಯಾ(ರ) ಅವರು ಮೃತ ದೇಹದ ಬಳಿ ತಲುಪಿದರು ಮತ್ತು ಹಝ್ರತ್ ಪೈಗಂಬರ್(ಸ) ಅವರಿಂದ ಅನುಮತಿ ಪಡೆದ ನಂತರ ಮೃತ ದೇಹವನ್ನು ನೋಡಿದರು, ನಂತರ ಅವರು **'ಇನ್ನಾ ಲಿಲ್ಲಾಹಿ ವನ್ನಾ ಇಲಾಹಿ ರಿಜಿ'ಉನ್'** ಎಂದು ಪಠಿಸಿ ಹೀಗೆ ಹೇಳಿದರು: ನಾನು ಇದನ್ನು ಅಲ್ಲಾಹನ ಮಾರ್ಗದಲ್ಲಿ ಮಹಾನ್ ತ್ಯಾಗವೆಂದು ಪರಿಗಣಿಸುವುದಿಲ್ಲ. ನಂತರ ಅವರು ಮಗ್‌ಫಿರತ್‌ಗಾಗಿ ದುಆ ಮಾಡುತ್ತಾ ಅಲ್ಲಿಂದ ಹೊರಟರು.

(ಮುಸ್ನದ್ ಅಹ್ಮದ್ ಬಿನ್ ಹನ್ಬಲ್, ಸಂಪುಟ-1, ಪುಟ-452)

ಅಹ್‌ಝಾಬ್ ಯುದ್ಧದ ಸಂದರ್ಭದಲ್ಲಿ ಅವರ(ರ) ವಯಸ್ಸು ಸುಮಾರು 58 ವರ್ಷವಾಗಿತ್ತು ಆದರೆ ಅವರ ಉತ್ಸಾಹವು ಯೌವನದ್ದಾಗಿತ್ತು. ಶೌರ್ಯದ ಸಾರವನ್ನು ತೋರಿಸಲು, ಯುದ್ಧದ ಸಂದರ್ಭದಲ್ಲಿ, ಸುರಕ್ಷತೆಗಾಗಿ ಮಹಿಳೆಯರು ಮತ್ತು ಮಕ್ಕಳನ್ನು ಕೋಟೆಯಲ್ಲಿ ಬಂಧಿಸಲಾಯಿತು. ಆ ಸಂದರ್ಭದಲ್ಲಿ ಅವರನ್ನು ಸಹ ಕೋಟೆಯಲ್ಲಿ ಇರಿಸಿದ್ದರು. ಯಹೂದಿ ಗೂಢಚಾರನೊಬ್ಬನು ಕೋಟೆಯ ಬಗ್ಗೆ ಮಾಹಿತಿ ತೆಗೆದುಕೊಳ್ಳುವುದನ್ನು ಅವರು ನೋಡಿದರು. ಅಪಾಯವನ್ನು ಗ್ರಹಿಸಿದ ಅವನು ಇಲ್ಲಿಂದ ಹಿಂತಿರುಗಲು ಬಿಡಬಾರದು ಎಂದು ಯೋಚಿಸಿದರು, ಆದ್ದರಿಂದ ಅವರು ಗುಡಾರದಿಂದ ಮರವನ್ನು ಕಿತ್ತು ಯಹೂದಿಯ ತಲೆಗೆ ಹೊಡೆದರು ಅವನ ತಲೆಯು ಸೀಳಿತು ಮತ್ತು ಅವನು ಮರಣ ಹೊಂದಿದನು. ನಂತರ ಅವರು ಅವನ ಕತ್ತಿಯಿಂದಲೇ ಅವನ ತಲೆಯನ್ನು ಕತ್ತರಿಸಿ ಕೋಟೆಯಿಂದ ಹೊರಗೆ ಎಸೆದರು. ಕೋಟೆಯಲ್ಲೂ ಸೈನ್ಯವಿದೆ ಎಂದು ಯಹೂದಿಗಳು ಓಡಿಹೋದರು. ಹೀಗೆ ಮಹಿಳೆಯರ ಶೌರ್ಯದಿಂದ ಮುಸ್ಲಿಮರು ದೊಡ್ಡ ನಷ್ಟದಿಂದ ಪಾರಾದರು.

ಹಝ್ರತ್ ಸುಮೈಯಾ(ರ) ಬಿಂತ್ ಖಭಾತ್- ಉಮ್ಮೆ ಅಮ್ಮಾರ್(ರ): ಬನಿ ಮಖ್ಝೂಮ್ ಅವರು ಅಮ್ಮಾರ್(ರ) ಮತ್ತು ಅವರ ತಂದೆ ಯಾಸಿರ್(ರ) ಮತ್ತು ಅವರ ತಾಯಿ ಸುಮೈಯಾ(ರ) ಅವರಿಗೆ ತುಂಬಾ ತೊಂದರೆ ನೀಡುತ್ತಿದ್ದರು, ಅವರ ಸ್ಥಿತಿಯನ್ನು ಓದಿದರೆ ನಮ್ಮ ದೇಹವು ನಡುಗುತ್ತದೆ. ಒಮ್ಮೆ, ಈ ಇಸ್ಲಾಂ ಧರ್ಮದ ಭಕ್ತರ ಸಮುದಾಯವು ಕೆಲವು ದೈಹಿಕ ಶಿಕ್ಷೆಯಿಂದ ಬಳಲುತ್ತಿರುವಾಗ, ಅಕಸ್ಮಿಕವಾಗಿ ಹಝ್ರತ್ ಪೈಗಂಬರ್(ಸ)ರು ಸಹ ಆ ಕಡೆಗೆ ಬಂದರು. ಅವರನ್ನು ನೋಡಿ ಬಹಳ ದುಃಖದ ಸ್ವರದಲ್ಲಿ ಹೇಳಿದರು: **ಸಬ್ರನ್ ಆಲ ಯಾಸಿರ ಫಇನ್ನ ಮೌಇದಕುಮುಲ್ ಜನ್ನ**- ಅಂದರೆ: ಎಲೈ ಯಾಸಿರ್ ಸಂತತಿಗಳೇ!! ತಾಳ್ಮೆ ಕಳೆದುಕೊಳ್ಳಬೇಡಿ ಏಕೆಂದರೆ ನಿಮ್ಮ ಕಷ್ಟಗಳಿಗೆ ಪ್ರತಿಯಾಗಿ ದೇವರು ನಿಮಗಾಗಿ ಸ್ವರ್ಗವನ್ನು ಸಿದ್ಧಪಡಿಸಿದ್ದಾನೆ. ಕೊನೆಯಲ್ಲಿ, ಅದೇ ಹಿಂಸೆಯ ಸ್ಥಿತಿಯಲ್ಲಿ ಯಾಸಿರ್ ಹುತಾತ್ಮರಾದರು, ಮತ್ತು ಕ್ರೂರ ಅಬು ಜಹ್ಲ್ ವೃದ್ಧ ವಯಸ್ಸಿನ ಸುಮೈಯಾರವರ ತೊಡೆಯ ಮೇಲೆ ಈಟಿಯನ್ನು ಎಸೆದನು, ಆ ಈಟಿಯು ಅವರ ದೇಹವನ್ನು ಅವರ ಗುಂಪ್ತಾಂಗವನ್ನು ಕತ್ತರಿಸಿತು ಮತ್ತು ಈ ಮುಗ್ಧ ಮಹಿಳೆಯು ಅದೇ ಸ್ಥಳದಲ್ಲಿ ಬಳಲುತ್ತಾ ನಿಧನ ಹೊಂದಿದರು.

ಅಂತಿಮವಾಗಿ, ನಾನು ಹಝ್ರತ್ ಫಾತಿಮಾ ಬಿಂತ್ ಮುಹಮ್ಮದ್ ಮುಸ್ತಫಾ(ಸ) ಅವರನ್ನು ಉಲ್ಲೇಖಿಸುತ್ತೇನೆ. ಹಝ್ರತ್ ಫಾತಿಮಾ(ರ) ಅವರನ್ನು ಹಝ್ರತ್ ಪೈಗಂಬರ್(ಸ) ಅವರು ಅಲ್ಲಾಹನಿಂದ ಆಯ್ಕೆ ಮಾಡಿದ ವಿಶ್ವದ ಕೆಲವೇ ಮಹಿಳೆಯರಲ್ಲಿ ಒಬ್ಬರು ಎಂದು ಪರಿಗಣಿಸಿದ್ದಾರೆ. ತಿರ್ಮಿದಿಯಲ್ಲಿ ಉಲ್ಲೇಖಿಸಲಾಗಿದೆ. ನಿಮಗೆ ಇಡೀ ಪ್ರಪಂಚದಲ್ಲಿ ಅನುಸರಿಸಲು ಅರ್ಹರಾದ ಮಹಿಳೆಯರಲ್ಲಿ ಮರ್ಯಮ್, ಖದೀಜಾ, ಫಾತಿಮಾ ಮತ್ತು ಆಸಿಯಾ ಇದ್ದಾರೆ ಅವರೇ ಸಾಕು.

ಹಝ್ರತ್ ಫಾತಿಮಾ(ರ) ಹಝ್ರತ್ ಪೈಗಂಬರ್(ಸ) ಅವರ ಕಿರಿಯ ಪುತ್ರಿಯಾಗಿದ್ದರು. ಅವರ ಸ್ಥಾನಮಾನದ ಬಗ್ಗೆ ಹಝ್ರತ್ ಪೈಗಂಬರ್(ಸ) ಹೇಳಿದರು:

ಫಾತಿಮಾಳ ಸಂತೋಷದಿಂದ ಅಲ್ಲಾಹನು ಮೆಚ್ಚುತ್ತಾನೆ ಮತ್ತು ಅವಳ ಅಸಮಾಧಾನದಿಂದ ಅಲ್ಲಾಹನು ಕೋಪಗೊಳ್ಳುತ್ತಾನೆ ..... ಫಾತಿಮಾ ಈ ಉಮ್ಮಾದ ಮಹಿಳೆಯರು, ಎಲ್ಲಾ ಪ್ರಪಂಚದ ಮಹಿಳೆಯರು, ಸ್ವರ್ಗಕ್ಕೆ ಹೋಗುವ ಮಹಿಳೆಯರು ಮತ್ತು ನಂಬುವ ಮಹಿಳೆಯರ ನಾಯಕಿಯಾಗಿದ್ದಾಳೆ. (ಅಝ್ವಾಜ್ ಮುತಾಹರಾತ್ ವಾ ಸಹಾಬಿಯಾತ್, ಪುಟ 292-293)

ಅದೇ ರೀತಿ "ಫಾತಿಮಾ ನನ್ನ ದೇಹದ ಭಾಗವಾಗಿದ್ದಾಳೆ, ಯಾರು ಆಕೆಯನ್ನು ಹಿಂಸಿಸುತ್ತಾರೋ ಅವರು ನನ್ನನ್ನು ಹಿಂಸಿಸುತ್ತಾರೆ."

(ತಝ್‌ಕಿರಃ ಸಹಾಬಿಯಾತ್, ಪುಟ-143)

ಅವರು ಹಝ್ರತ್ ಪೈಗಂಬರ್(ಸ) ಅವರ ಮಕ್ಕಳಲ್ಲಿ ಅತ್ಯಂತ

ಪ್ರೀತಿಯ ಪುತ್ರಿಯಾಗಿದ್ದರು. ಆದರೆ ಹಝ್ರತ್ ಪೈಗಂಬರ್(ಸ)ರು ಅವರ ಪ್ರೀತಿಯ ಪುತ್ರಿಗೆ ವರದಕ್ಷಿಣೆಯಾಗಿ ಕೊಟ್ಟ ವಸ್ತುಗಳು ಇವು: ಒಂದು ಪಲ್ಲಂಗ, ಹತ್ತಿಯ ಬದಲು ತಾಳೆ ಎಲೆಗಳನ್ನು ಹೊಂದಿರುವ ಚರ್ಮದ ಹಾಸಿಗೆ. ನಂತರ ಉದಾರತೆಯ ದಿನಗಳು ಬಂದಿವೆ ಎಂಬ ವಾಸ್ತವದ ಹೊರತಾಗಿಯೂ ಒಂದು ಛಾಗಲ್ (ನೀರಿಡುವ ಪಾತ್ರೆ), ಎರಡು ಮಣ್ಣಿನ ಕೊಡಪಾನ, ಒಂದು ಚರ್ಮದ ನೀರಿನ ಚೀಲ, ಮತ್ತೆರಡು ಗಿರಣಿಗಳು. ಆದರೆ ಹಝ್ರತ್ ಪೈಗಂಬರ್(ಸ) ಅವರು ತಮ್ಮ ಪ್ರೀತಿಯ ಪುತ್ರಿಗೆ ಪ್ರಪಂಚದ ಸೌಕರ್ಯಗಳಿಗೆ ಅಂಟಿಕೊಳ್ಳದಂತೆ ತರಬೇತಿ ನೀಡಿದ್ದು, ಅವರು ಮನೆಯ ಎಲ್ಲಾ ಕೆಲಸಗಳನ್ನು ಸ್ವತಃ ಮಾಡುತ್ತಿದ್ದರು. ಗಿರಣಿಯನ್ನು ರುಬ್ಬುವುದರಿಂದ ಕೈಯಲ್ಲಿ ಗುಳ್ಳೆಗಳು ರೂಪುಗೊಂಡಿದ್ದವು. ಒಮ್ಮೆ, ಹಝ್ರತ್ ಫಾತಿಮಾ(ರ) ಅವರು ಮನೆಕೆಲಸಗಳಿಗೆ ಸೇವಕಿಯನ್ನು ಒದಗಿಸುವಂತೆ ಹಝ್ರತ್ ಪೈಗಂಬರ್(ಸ) ಅವರನ್ನು ಕೇಳಿದರು, ಆದರೆ ಪ್ರತಿ ಪ್ರಾರ್ಥನೆಯ ನಂತರ ತಸ್‌ಬೀಹ್ ಮತ್ತು ತಹಮಿದ್ ಅನ್ನು ಪಠಿಸಲು ಹಝ್ರತ್ ಪೈಗಂಬರ್(ಸ)ರು ಸಲಹೆ ನೀಡಿದರು. ಹೀಗೆ ಅವರು ಹಝ್ರತ್ ಪೈಗಂಬರ್(ಸ) ಅವರ ಮಾತನ್ನು ಅನುಸರಿಸುತ್ತಿದ್ದರು.

ಒಮ್ಮೆ ಯಾರೋ ದುರದೃಷ್ಟವಂತನು ಹಝ್ರತ್ ಪೈಗಂಬರ್(ಸ)ರ ತಲೆಯ ಮೇಲೆ ಧೂಳನ್ನು ಎಸೆದನು. ಹಝ್ರತ್ ಪೈಗಂಬರ್(ಸ) ಮನೆಗೆ ಬಂದರು. ಹಝ್ರತ್ ಫಾತಿಮಾ(ರ) ಅವರ ತಲೆಯನ್ನು ತೊಳೆಯುತ್ತಿದ್ದರು ಅದರೊಂದಿಗೆ ಅಳುತ್ತಿದ್ದರು. ಹಝ್ರತ್ ಪೈಗಂಬರ್(ಸ) ಅವರಿಗೆ ಸಮಾಧಾನಪಡಿಸುತ್ತಾ ಹೇಳಿದರು: ಮಗಳೇ! ಅಳಬೇಡ. ಅಲ್ಲಾಹನು ನಿಮ್ಮ ತಂದೆಯ ರಕ್ಷಕನಾಗಿದ್ದಾನೆ. (ಅಹ್ಲ್ ಅಲ್-ಬೈತ್ ರಸುಲುಲ್ಲಾಹ್(ಸ), ಪುಟಗಳು 277-278)

ಹಝ್ರತ್ ಫಾತಿಮಾ(ರ) ಅವರು ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಯುದ್ಧಗಳಲ್ಲಿ ಭಾಗವಹಿಸಿ ಹಝ್ರತ್ ಪೈಗಂಬರ್(ಸ) ಅವರ ಸೇವೆ ಮಾಡಿದರು. ಹಝ್ರತ್ ಫಾತಿಮಾ(ರ) ಅವರಿಗೆ ಹಝ್ರತ್ ಪೈಗಂಬರ್(ಸ) ಅವರ ಮೇಲೆ ಆಳವಾದ ಪ್ರೀತಿ ಇತ್ತು. ಹಝ್ರತ್ ಪೈಗಂಬರ್(ಸ) ಅವರ ನಿಧನದ ನಂತರ, ಹಝ್ರತ್ ಫಾತಿಮಾ(ರ) ಎಂದಿಗೂ ನಗಲಿಲ್ಲ. ಮತ್ತು ಹಝ್ರತ್ ಪೈಗಂಬರ್(ಸ) ಮರಣ ಹೊಂದಿದ 6 ತಿಂಗಳ ನಂತರ, ಅವರು(ರ) ಸಹ ನಿಧನರಾದರು. ಆ ಸಮಯದಲ್ಲಿ ಅವರು ಕೇವಲ 29 ವರ್ಷ ವಯಸ್ಸಿನವರಾಗಿದ್ದರು.

ಆತ್ಮೀಯ ಕೇಳುಗರೇ! ಮನಸ್ಸು ಈ ಪ್ರೀತಿಯ ಸಹಬೀಯರ ಸದ್ಗುಣಗಳನ್ನು ಪ್ರಸ್ತಾಪಿಸುತ್ತಲೇ ಇರಬೇಕು ಎಂದು ಬಯಸುತ್ತದೆ. ಸರ್ವಶಕ್ತನಾದ ಅಲ್ಲಾಹನು ನಮಗೆ ತೌಫಿಕ್ ನೀಡಲಿ, ನಾವು ಅವರ ಉಲ್ಲೇಖದಿಂದ ನಮ್ಮಲ್ಲಿ ತಾತ್ಕಾಲಿಕ ಬದಲಾವಣೆಯನ್ನು ಅನುಭವಿಸದಿರಲು ಬದಲಿಗೆ ನಮ್ಮ ಜೀವನಗಳು ವಾಸ್ತವವಾಗಿ ಆ ಮಹಿಳೆ ಸಹಾಬೀಗಳ ಹೆಜ್ಜೆಗಳನ್ನು ಅನುಸರಿಸುವಂತಾಗಲಿ.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಮಹಿಳೆ ಸಹಾಬಿಗಳ ಮಾದರಿಯನ್ನು ಅನುಸರಿಸಲು ಮಹಿಳೆಯರಿಗೆ ಸಲಹೆ ನೀಡುತ್ತಾ ಹೇಳುತ್ತಾರೆ:

ನೀವು ನಿಮ್ಮ ಸ್ಥಾನವನ್ನು ಅರ್ಥಮಾಡಿಕೊಳ್ಳಿ ಮತ್ತು ನಿಮ್ಮೊಳಗೆ ಹೊಸ ಜಾಗೃತಿ ಮತ್ತು ಹೊಸ ಜೀವನವನ್ನು ರಚಿಸಲು ಪ್ರಯತ್ನಿಸಿ. ಸರ್ವಶಕ್ತನಾದ ಅಲ್ಲಾಹನು ನಿಮ್ಮ ಅಭಿವೃದ್ಧಿಗೆ ಅಂತ್ಯವಿಲ್ಲದ ಅವಕಾಶಗಳನ್ನು ಸೃಷ್ಟಿಸಿದ್ದಾನೆ ಎಂದು ನೀವು ತಿಳಿದಿರಬೇಕು. ನೀವು ಹಝ್ರತ್ ಆಯಿಷಾ(ರ) ಅವರನ್ನು ಅನುಕರಿಸಲು ಪ್ರಯತ್ನಿಸುತ್ತಿರಬೇಕು, ನೀವು ಹಝ್ರತ್ ಹಫ್ಸಾ(ರ) ಅವರನ್ನು ಸಹ ಅನುಕರಿಸಲು ಪ್ರಯತ್ನಿಸುತ್ತಿರಬೇಕು, ನೀವು ಹಝ್ರತ್ ಝೈನಬ್(ರ) ಅವರನ್ನು ಅನುಕರಿಸಲು ಪ್ರಯತ್ನಿಸುತ್ತಿರಬೇಕು, ತಮ್ಮ ಸಮಯದಲ್ಲಿ ಮಹಾನ್ ಕಾರ್ಯಗಳನ್ನು ಸಾಧಿಸಿದ ಸಹಾಬೀಯರನ್ನು ನೀವು ಅನುಕರಿಸಲು ಪ್ರಯತ್ನಿಸುತ್ತಿರಬೇಕು.

1997 ರಲ್ಲಿ ಜರ್ಮನಿಯಲ್ಲಿ ಮಾಡಿದ ಭಾಷಣದಲ್ಲಿ, ಹಝ್ರತ್ ಖಲೀಫತುಲ್ ಮಸಿಹ್ ರಾಬಿ(ರಹ್) ಹೇಳಿದರು:

.......ಅಲ್ಲಾಹನು ನಿಮಗೆ ಈ ಪದಗಳನ್ನು ಕೇಳುವ ಸಾಮರ್ಥ್ಯವನ್ನು ನೀಡಲಿ ಮತ್ತು ಅವುಗಳನ್ನು ನಿಮ್ಮ ಹೃದಯದಲ್ಲಿ ಜಾಗವನ್ನು ನೀಡಲಿ. ಮತ್ತು ಈ ವಿಷಯಗಳು ನಿಮ್ಮ ಹೃದಯದಲ್ಲಿ ಹಂಬಲವನ್ನು ಸೃಷ್ಟಿಸುವಂತಾಗಲಿ. ನಿಮಗಾಗಿ ವಿಭಿನ್ನ ಮಾದರಿಗಳು ಹೊರಹೊಮ್ಮಲಿ ಮತ್ತು ನೀವು ಈ ಮಾದರಿಗಳನ್ನು ಪವಿತ್ರ ಖುರ್‌ಆನ್ ಹೇಳುವಂತೆ ಮಾಡಬೇಕು, **ವಲಿಕುಲ್ಲಿ ವಿಜ್‌ಹತುನ್ ಹುವ ಮವಲ್ಲಿಹಾ ಫಸ್ತಬಿಖುಲ್ ಖೈರಾತ್**- (ಅಲ್‌ಬಖರ: 149)

ನಮ್ಮ ಪ್ರೀತಿಯ ಇಮಾಮ್ ಹಝ್ರತ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್(ಅತಬಅ) ಹಝ್ರತ್ ಪೈಗಂಬರ್(ಸ) ಅವರ ಸಹಾಬೀಯರ ಸ್ಥಾನಮಾನ ಮತ್ತು ಶ್ರೇಣಿ ಮತ್ತು ತ್ಯಾಗವನ್ನು ಉಲ್ಲೇಖಿಸುತ್ತಾ ಹೇಳುತ್ತಾರೆ:

"...ಇದು ನಮ್ಮಲ್ಲಿ ಮತ್ತು ನಮ್ಮ ಮಕ್ಕಳಲ್ಲಿ ನಾವು ರಚಿಸಬೇಕಾದ ಮಾನದಂಡವಾಗಿದೆ, ಇದರಿಂದ ನಾವು ಇಸ್ಲಾಂನ ಪುನರುಜ್ಜೀವನದಲ್ಲಿ ನಮ್ಮ ಪಾತ್ರವನ್ನು ವಹಿಸಬಹುದು. ಇವು ಬರೀ ಕೇಳಿದ ಕಥೆಗಳಲ್ಲ. ಸರ್ವಶಕ್ತನಾದ ಅಲ್ಲಾಹನೊಂದಿಗೆ ಸಂಪರ್ಕ ಸಾಧಿಸಲು, ಈ ಉದಾಹರಣೆಗಳನ್ನು ಜೀವನದ ಭಾಗವಾಗಿ ಮಾಡಬೇಕು. ಆರಾಧನೆ, ಹಝ್ರತ್ ಪೈಗಂಬರ್(ಸ)ರ ಮೇಲಿನ ಪ್ರೀತಿ, ಆರ್ಥಿಕ ಮತ್ತು ಜೀವನ ತ್ಯಾಗಗಳ ಮಾನದಂಡಗಳನ್ನು ಸ್ಥಾಪಿಸುವ ಅವಶ್ಯಕತೆಯಿದೆ. ನಿಜಕ್ಕೂ ಅಹ್ಮದಿ ಮಹಿಳೆಯರು ತ್ಯಾಗದ ಗುಣವನ್ನು ತೋರಿಸುತ್ತಿದ್ದಾರೆ, ಆದರೆ ವಿಶೇಷವಾಗಿ ಪತಿಯರು ಧಾರ್ಮಿಕ ಕಾರ್ಯಗಳಲ್ಲಿ ತಡೆಯಾಗುತ್ತಿರುವ ಆರ್ಥಿಕವಾಗಿ ಸ್ವತಂತ್ರವಾಗಿರುವ ಮಹಿಳೆಯರು ತಮ್ಮ ಸ್ಥಿತಿಯನ್ನು ನೋಡಿ ಅವರು ತಮ್ಮ ಪತಿಯರಿಗೆ ಹೇಳಿ: ಧರ್ಮದ ವಿಷಯದಲ್ಲಿ ನಾವು ನಿಮ್ಮ ಮಾತನ್ನು ಕೇಳುವುದಿಲ್ಲ. ಇನ್ನು ಜೀವ ತ್ಯಾಗದ ವಿಚಾರದಲ್ಲಿ ಧರ್ಮಕ್ಕಾಗಿ ಪ್ರಾಣ ತ್ಯಾಗ ಮಾಡುವ ಹೆಗ್ಗಳಿಕೆ ಅಹ್ಮದಿಯಾ ಜಮಾಅತ್ ಗೆ ಮಾತ್ರ ಇದೆ. ಮತ್ತು ಇದು ತಾಯಂದಿರ ತರಬೇತಿಯ ಪರಿಣಾಮವಾಗಿದೆ. ಪುರುಷರ ತ್ಯಾಗಕ್ಕೆ ಅವರ ತಾಯಿಯಂದಿರಿಗೂ ಪ್ರತಿಫಲವಿದೆ... ದಜ್ಜಾಲ್ ಪೈಶಾಚಿಕ ತಂತ್ರಗಳ ಜಾಲವನ್ನು ಬೀಸಿದ್ದಾನೆ ಎಂಬುದನ್ನು ಯಾವಾಗಲೂ ನೆನಪಿಡಿ. ಆರಾಧನೆ, ಹಝ್ರತ್ ಪೈಗಂಬರ್(ಸ)ರ ಮೇಲಿನ ಪ್ರೀತಿ ಬೆಳೆಯಲು ಪ್ರಯತ್ನಿಸುವುದು ಇಂದು ಅತ್ಯಂತ ಅವಶ್ಯಕವಾಗಿದೆ. ಮಕ್ಕಳ ತರಬೇತಿಗೆ ವಿಶೇಷ ಗಮನ ನೀಡಬೇಕು. ಅವರು ಯಾವಾಗಲೂ ಧರ್ಮವನ್ನು ಪ್ರಪಂಚದ ಮೇಲೆ ಆದ್ಯತೆ ನೀಡಬೇಕು ಎಂದು ಅವರ ಹೃದಯದಲ್ಲಿ ಇರಿಸಿ. ನಿಮ್ಮ ಪ್ರಾರ್ಥನೆಯಲ್ಲಿ ಎಂತಹ ನೋವನ್ನು ಉಂಡು ಮಾಡಿ ಎಂದರೆ ಅಲ್ಲಹನ ಕರುಣೆಯು ಉಕ್ಕಿ ಬರಬೇಕು ಇಂತಹ ಸ್ಥಿತಿಯನ್ನು ಸೃಷ್ಟಿಸಿಕೊಳ್ಳಿ ಮತ್ತು ನಮ್ಮ ಮಕ್ಕಳು ಲೌಕಿಕ ಭೋಗಗಳಲ್ಲಿ ಬೀಳುವ ಬದಲು ಅಲ್ಲಾಹನ ಧರ್ಮವನ್ನು ಕಲಿಯಲು, ಸಂಬಂಧ ಬೇಳೆಸುವುದರಲ್ಲಿ ಮತ್ತು ಹಝ್ರತ್ ಪೈಗಂಬರ್(ಸ)ರ ಪ್ರೀತಿಗಾಗಿ ಹಂಬಲಿಸುವಂತಾಗಲಿ.

ಅಲ್ಲಾಹನು ಪ್ರತಿಯೊಬ್ಬ ಅಹ್ಮದಿ ಮಹಿಳೆಗೆ ಈ ಮಾನದಂಡವನ್ನು ಸಾಧಿಸುವ ಸಾಮರ್ಥ್ಯವನ್ನು ನೀಡಲಿ. ಇಂದು, ಈ ಕಡೆಗೆ ಮಹಿಳೆಯರ ಗಮನವು ಪುರುಷರ ಸುಧಾರಣೆಗೆ ಕಾರಣವಾಗುತ್ತದೆ. ಅಲ್ಲಾಹನು ಎಲ್ಲಾ ಮಹಿಳೆಯರು, ಪುರುಷರು, ಮಕ್ಕಳು ಮತ್ತು ವೃದ್ಧರನ್ನು ಒಟ್ಟುಗೂಡಿಸಿ ನಿಜವಾದ ಸಮಾಜವನ್ನು ಸ್ಥಾಪಿಸುವಂತೆ ಮಾಡಲಿ, ಅದರ ಸ್ಥಾಪನೆಗಾಗಿ ಅಲ್ಲಾಹನು ವಾಗ್ದತ್ತ ಮೆಸ್ಸಿಹ್ ಅಲೈಹಿಸ್ಸಲಾಮ್ ಅವರನ್ನು ಕಳುಹಿಸಿದನು. ಅಲ್ಲಾಹನು ನಮಗೆ ತೌಫಿಕ್ ನೀಡಲಿ. ಆಮೀನ್

(ಮಹಿಳೆಯರಿಗೆ ಉದ್ದೇಶಿಸಿ ಸಂಬೋಧನೆ, ಜಲ್ಸ ಸಲಾನ ಯುಕೆ, 29-07-2023)

ಸರ್ವಶಕ್ತನಾದ ಅಲ್ಲಾಹನು ನಮ್ಮೆಲ್ಲ ಮಹಿಳೆಯರನ್ನು ಹುಝೂರ್ ಅನ್ವರ್(ಅತಬಅ) ಅವರ ಈ ಮಾತುಗಳನ್ನು ಅನುಸರಿಸುವ ಸಾಮರ್ಥ್ಯವನ್ನು ನೀಡಲಿ. ಮತ್ತು ಈ ಪವಿತ್ರ ಆತ್ಮಗಳ ಹಝ್ರತ್ ಪೈಗಂಬರ್(ಸ)ರ ಮಹಿಳೆ ಸಹಾಬೀಯರ ಹೆಜ್ಜೆಗುರುತುಗಳನ್ನು ಅನುಸರಿಸಲು ನಮಗೆ ಅವಕಾಶವನ್ನು ನೀಡಲಿ, ಅಲ್ಲಾಹನು ನಾವು ಅಹ್ಮದಿ ಮಹಿಳೆಯರಲ್ಲಿ ಈ ಉದಾಹರಣೆಗಳನ್ನು ಕಾಣುವಂತೆ ಮಾಡಲಿ, ಮತ್ತು ನಾವು ಆರಂಭಿಕ ಶತಮಾನಗಳ ಮಹಿಳೆಯರಂತೆ ಪ್ರತಿ ತ್ಯಾಗಕ್ಕೂ ಸಿದ್ಧರಾಗೋಣ. ಆಮೀನ್

**ಇನ್ನಸ್ಸಹಾಬತ ಕುಲ್ಲುಹಿಮ್ ಕಝುಕಾಇ**
**ಖಿರ್ ನವ್ವರು ವಜ್‌ಹಲ್ ವರಾ ಬಿಝಿಯಾಯಿ**
**ಯಾ ರಬ್ಬಿ ಫರ್ಹಮ್‌ನಾ ಬಿಸಹ್‌ಬಿ ಬಿಯ್ಯಿನಾ**
**ವಗ್‌ಫಿರ್ ವ ಅನ್ತಲ್ಲಾಹು ಝು ಅಲ್‌ಲಾಯಿ**

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದುನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಸಲ್ಲೈತಾ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುಮ್ಮಜೀದ್ ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್ತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುಮ್ಮಜೀದ್.**

**ಆಮೀನ್- ಅಲ್ಲಾಹುಮ್ಮ ಆಮೀನ್- ಸುಮ್ಮ ಆಮೀನ್**

...*...*...*...


**ವಿನಂತಿ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅವನ್ನು** ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಅಥವಾ ದೇವನ ಮಗನಲ್ಲ, ಮತ್ತು ಶಿಲುಬೆಗೇರಿಸುವಿಕೆಯ ಮೂಲಕ ಅವರ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಲಿಲ್ಲ ಎಂದು ಘೋಷಿಸಿದಾಗ, ಕ್ರೈಸ್ತರು ಅದೇ ರೀತಿ ವಿರೋಧಿಗಳಾಗಿದ್ದರು. ಅಗ್ನಿ ಆರಾಧಕರು ಮತ್ತು ನಕ್ಷತ್ರ-ಆರಾಧಕರು ಸಹ ಅವರು ತಮ್ಮ ದೇವರನ್ನು ಪೂಜಿಸುವುದನ್ನು ನಿಷೇಧಿಸಿದಾಗ ಕೋಪಗೊಂಡರು ಮತ್ತು ಅವರ ಉದ್ಧಾರಕ್ಕಾಗಿ ಒಂದೇ ದೇವನ ಕಡೆಗೆ ತಿರುಗುವಂತೆ ಅವರಿಗೆ ಸೂಚಿಸಿದರು. ಪ್ರಾಮಾಣಿಕವಾಗಿ, ಇವು ಜಗತ್ತಿನಲ್ಲಿ ಯಶಸ್ಸನ್ನು ಸಾಧಿಸಲು ಒಬ್ಬರು ಆಶಿಸಬಹುದಾದ ಸಾಧನಗಳೇ? **(ಬರಾಹೀನೆ ಅಹ್ಮದಿಯಾ, ಭಾಗ-2, ರೂಹಾನಿ ಖಝಾಇನ್ ಸಂಪುಟ-1, ಪುಟ-108)**

### ದೇವರ ನಿರ್ಧಾರಗಳಿಗೆ ಹಾಗೂ ಇಚ್ಛೆಗಳಿಗೆ ಪೂರ್ಣರೀತಿಯ ಸಮರ್ಪಣೆಗೈದ ಪ್ರವಾದಿ(ಸ)

ಪ್ರವಾದಿಗಳಲ್ಲಿ ಶ್ರೇಷ್ಠರಾದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವಿತದ ಸಂಭವಗಳನ್ನು ಅಧ್ಯಯನ ಮಾಡಿದರೆ ಅವರು ಆಂತರಿಕ ಪರಿಶುದ್ಧಿಯನ್ನು ಹೊಂದಿದವರಾಗಿದ್ದರೆಂದೂ ಒಳಗೊಂದು ಹೊರಗೊಂದು ಎಂಬ ದ್ವಿಗುಣವನ್ನು ಹೊಂದಿದವರಾಗಿರಲಿಲ್ಲವೆಂದೂ ಬಹಳ ಸ್ಪಷ್ಟವಾಗಿಯೂ ಪ್ರಕಾಶಮಾನವಾಗಿಯೂ ಎದ್ದು ತೋರುತ್ತದೆ. ಅವರು ದೇವನಿಗೆ ತಮ್ಮ ಜೀವವನ್ನು ಅರ್ಪಿಸಲು ಸದಾ ಸನ್ನದ್ಧರಾಗಿದ್ದರು. ಅವರು ಜನರ ಬಗ್ಗೆ ಭಯ ಮತ್ತು ಪ್ರತೀಕ್ಷೆಗಳಿಂದ ಸಂಪೂರ್ಣವಾಗಿ ವಿಮುಖರಾಗಿದ್ದು ಅಲ್ಲಾಹನ ಮೇಲೆ ಮಾತ್ರ ಭರವಸೆಯಿಡುವವರಾಗಿದ್ದರು. ಅವರು ದೇವನ ನಿರ್ಧಾರಗಳಿಗೆ ಮತ್ತು ಇಚ್ಛೆಗಳಿಗೆ ತನ್ನನ್ನು ಅಡಿಯಾಳನ್ನಾಗಿ ಮಾಡಿ, ಏಕದೇವವಿಶ್ವಾಸದ ಘೋಷಣೆಯಿಂದ ತನ್ನ ತಲೆಯ ಮೇಲೆ ಏನೆಲ್ಲ ಗಂಡಾಂತರ ಬರಬಹುದು ಮತ್ತು ಬಹುದೇವಾರಾಧಕರ ಕೈಗಳಿಂದ ಏನೆಲ್ಲ ದುಃಖ ಮತ್ತು ನೋವು ಅನುಭವಿಸಬೇಕಾಗಿ ಬರಬಹುದು ಎಂಬುದರ ಬಗ್ಗೆ ಸ್ವಲ್ಪವೂ ಲಕ್ಷಿಸದೆ ಕಾರ್ಯಪ್ರವೃತ್ತರಾಗಿದ್ದರು. ತನ್ನ ಭಗವಂತನ ಆಜ್ಞೆಯನ್ನು ಪಾಲಿಸುವಾಗ, ಅವರು ಎಲ್ಲಾ ದುಃಖಗಳು, ಕ್ಲೇಶ ಕಷ್ಟ ಮತ್ತು ತೊಂದರೆಗಳನ್ನು ಸ್ವೀಕರಿಸಿದರು. ಬೆದರಿಕೆಗಳಿಗೆ ಹೆದರಿಕೆಯಿಲ್ಲದ ಅವರು ಆಧ್ಯಾತ್ಮಿಕ ಪರಿಶ್ರಮದ ಎಲ್ಲಾ ಅವಶ್ಯಕತೆಗಳನ್ನು ಬೋಧಿಸಿದರು, ಮತ್ತು ಆಧ್ಯಾತ್ಮಿಕ ಉಪದೇಶವನ್ನು ಪೂರೈಸಿದರು. ಇತಿಹಾಸದುದ್ದಕ್ಕೂ ಇತರ ಎಲ್ಲಾ ಪ್ರವಾದಿಗಳು ದೇವನ ಮೇಲೆ ಅಂತಹ ನಂಬಿಕೆಯನ್ನು ತೋರಿಸಿದ, ಆತನ ಏಕತೆಯನ್ನು ಬೋಧಿಸಿದ, ವಿಗ್ರಹಾರಾಧನೆಯನ್ನು ತುಂಬಾ ಅಪಾಯದ ಸಂದರ್ಭದಲ್ಲಿ ನಿಷೇಧಿಸಿದ, ಮತ್ತು ಅನೇಕ ಶತ್ರುಗಳನ್ನು ಎದುರಿಸುವಾಗ ಸದಾ ಅಚಲ ಮತ್ತು ದೃಢವಾಗಿ ಉಳಿದುಕೊಂಡ ಯಾವ ಪ್ರವಾದಿಗಳು ಸಹ ಇಲ್ಲ ಎಂದು ನಾನು ನಿಮಗೆ ನಿಜವಾಗಿ ಹೇಳುತ್ತೇನೆ. ಈ ಘಟನೆಗಳ ಬಗ್ಗೆ ಯಾವುದೇ ಮಟ್ಟದ ಪ್ರಾಮಾಣಿಕತೆಯೊಂದಿಗೆ ಆಲೋಚಿಸುವ ಯಾರಾದರೂ ಪವಿತ್ರ ಪ್ರವಾದಿಯ(ಸ) ಆಂತರಿಕ ಸತ್ಯಕ್ಕೆ ಸಾಕ್ಷಿಯಾಗುತ್ತಾರೆ.

**(ಬರಾಹೀನೆ ಅಹ್ಮದಿಯಾ, ಭಾಗ-2, ರೂಹಾನಿ ಖಝಾಇನ್ ಸಂಪುಟ-1, ಪುಟ-111)**

### ಪ್ರಕಾಶಮಾನವಾದ ಬೋಧನೆಗಳನ್ನು ತರುವ ಮತ್ತು ಸಾಕ್ಷ್ಯಗಳು ಮತ್ತು ಪುರಾವೆಗಳೊಂದಿಗೆ ಎಲ್ಲರ ಬಾಯಿಯನ್ನು ಮುಚ್ಚಿಸುವ ಪ್ರವಾದಿ(ಸ)

ಪವಿತ್ರ ಪ್ರವಾದಿ(ಸ) ರವರಿಗೆ ದೈವಿಕ ಬೆಂಬಲ ದೊರೆತಿದೆ ಎಂದು ಸಾಬೀತುಪಡಿಸಲು ಇನ್ನೂ ಅನೇಕ ಚಿಹ್ನೆಗಳು ಇವೆ. ಉದಾಹರಣೆಗೆ, ಇಂತಹ ಪ್ರಬುದ್ಧ ಬೋಧನೆಯು ಬಡ, ಅಸಹಾಯಕ ಮತ್ತು ಅವಿದ್ಯಾವಂತ ಅನಾಥರಿಗೆ ಬಂದಿರುವುದರಲ್ಲಿ ಆಶ್ಚರ್ಯವಿಲ್ಲವೇ? ಪ್ರಬಲ ರಾಷ್ಟ್ರಗಳು ತಮ್ಮ ಆರ್ಥಿಕ, ಮಿಲಿಟರಿ ಮತ್ತು ಬೌದ್ಧಿಕ ಶಕ್ತಿಯ ಬಗ್ಗೆ ಹೆಮ್ಮೆಪಡುವ ಕಾಲದಲ್ಲಿ ಅವರು ಶತ್ರುಗಳಿಂದ ಖಂಡಿಸಲಾಗದ ಮತ್ತು ಆಧಾರಗಳಿಂದಲೂ ಸತ್ಯವಾದ ಸಾಕ್ಷ್ಯಗಳಿಂದಲೇ ಎಲ್ಲರನ್ನು ಮೂಕಸ್ಮಿತರನ್ನಾಗಿ ಮಾಡುವಂತಹ ಪ್ರಕಾಶಮಾನವಾದ ತತ್ವೋಪದೇಶಗಳನ್ನು ಈ ರೀತಿಯಲ್ಲಿ ನೆಲೆಗೊಳಿಸಿದುದು ಆಶ್ಚರ್ಯಕರವಾದ ಒಂದು ಸಂಭವವಲ್ಲವೇ? ಅವರ ದೌರ್ಬಲ್ಯದ ಹೊರತಾಗಿಯೂ, ಅವರು ಪ್ರಬಲ ಆಡಳಿತಗಾರರನ್ನು ಪದಚ್ಯುತಗೊಳಿಸಿ ಅವರನ್ನು ಸಾಮಾನ್ಯರೊಂದಿಗೆ ಬದಲಾಯಿಸಲಿಲ್ಲವೇ? ಇದು ದೈವಿಕ ಸಹಾಯದ ಸಂಕೇತವಲ್ಲದಿದ್ದರೆ, ಇನ್ನೇನು? ದೇವನ ಬೆಂಬಲವಿಲ್ಲದೆ ಯಾರಾದರೂ ಇಡೀ ಜಗತ್ತನ್ನು ಬುದ್ಧಿವಂತಿಕೆ, ಜ್ಞಾನ, ಶಕ್ತಿ ಮತ್ತು ಬಲದಿಂದ ಮೀರಿಸಬಹುದೇ? **(ಬರಾಹೀನೆ ಅಹ್ಮದಿಯಾ, ಭಾಗ-2, ರೂಹಾನಿ ಖಝಾಇನ್ ಸಂಪುಟ-1, ಪುಟ-118)**

### ಏಕದೇವತಾವಾದದ ಬೆಳಕಿನಿಂದ ಜಗತ್ತನ್ನು ಬೆಳಗಿಸಿದ ಮತ್ತು ಬಹುದೇವತಾವಾದ ಮತ್ತು ವಿಗ್ರಹಾರಾಧನೆಯ ಭದ್ರಕೋಟೆಯನ್ನು ನಾಶಪಡಿಸಿದ ಪ್ರವಾದಿ.

ವಿಗ್ರಹಾರಾಧನೆ, ಸೃಷ್ಟಿ-ಪೂಜೆ ಮತ್ತು ಎಲ್ಲಾ ರೀತಿಯ ದಾರಿ ತಪ್ಪಿದ ನಂಬಿಕೆಗಳು ಜಗತ್ತಿನಲ್ಲಿ ವ್ಯಾಪಿಸಿರುವ ಯುಗದಲ್ಲಿ ಪವಿತ್ರ ಪ್ರವಾದಿ(ಸ), ರ ಆಗಮನವಾಯಿತು ಎಂದು ಅಧ್ಯಾಯ ಒಂದರಲ್ಲಿ ವಿವರಿಸಲಾಗಿದೆ. ಎಲ್ಲಾ ಜನರು ನಿಜವಾದ ತತ್ವಗಳನ್ನು ತ್ಯಜಿಸಿ ಸರಿಯಾದ ಮಾರ್ಗದಿಂದ ದೂರ ಸರಿದಿದ್ದರು, ಮತ್ತು ಪ್ರತಿ ಧಾರ್ಮಿಕ ಪಂಗಡದ ಅನುಯಾಯಿಗಳು ಕೇವಲ ತಮ್ಮದೇ ಆದ ಆವಿಷ್ಕಾರದ ಮಾರ್ಗಗಳನ್ನು ಅನುಸರಿಸುತ್ತಿದ್ದರು. ಅರಬ್ಬರು ವಿಗ್ರಹಾರಾಧನೆಯಲ್ಲಿ ಮುಳುಗಿದ್ದರು, ಪರ್ಷಿಯನ್ನರು ಬೆಂಕಿಗೆ ಪೂಜಿಸುತ್ತಿದ್ದರು ಮತ್ತು ಭಾರತೀಯರು ವಿಗ್ರಹಾರಾಧನೆಯ ಜೊತೆಗೆ ನೂರಾರು ರೀತಿಯ ಸೃಷ್ಟಿ -ಪೂಜೆಗೆ ಬಲಿಯಾಗಿದ್ದರು. ಆ ಸಮಯದಲ್ಲಿಯೇ ಹಲವಾರು ಪುರಾತನ ಬರಹಗಳು ಮತ್ತು ಪುಸ್ತಕಗಳನ್ನು ಪುರಾಣಗಳನ್ನು ಒಳಗೊಂಡಂತೆ ಬರೆಯಲಾಗಿದ್ದು, ಆ ಮೂಲಕ ದೇವ ಪುರುಷರನ್ನು ಅಪವಿತ್ರ ಗೊಳಿಸಲಾಯಿತು ಮತ್ತು ಅವತಾರಗಳ ಆರಾಧನೆಗೆ ಅಡಿಪಾಯ ಹಾಕಲಾಯಿತು. ರೆವರೆಂಡ್ ಡೇವನ್ಪೋರ್ಟ್ ಮತ್ತು ಇತರ ಹಲವಾರು ಪಾಶ್ಚಿಮಾತ್ಯ ವಿದ್ವಾಂಸರ ಪ್ರಕಾರ ಕ್ರೈಸ್ತ ಧರ್ಮವು ಎಲ್ಲಕ್ಕಿಂತ ಕೆಟ್ಟ ಸ್ಥಿತಿಯಲ್ಲಿತ್ತು. ಅದರ ಪಾದ್ರಿಗಳ ಅನೈತಿಕತೆ ಮತ್ತು ವಿಶ್ವಾಸವಿಲ್ಲದ ಕಾರಣ ಅದು ತೀವ್ರವಾಗಿ ಕಳಂಕಿತವಾಯಿತು, ಮತ್ತು ಅದರ ಸಿದ್ಧಾಂತಗಳು ಸಹ ಒಂದು ಅಥವಾ ಎರಡಲ್ಲ ಹಲವಾರು ದೇವತೆಗಳ ಸ್ಥಾನಕ್ಕೆ ಏರಿತು. ಪವಿತ್ರ ಪ್ರವಾದಿ(ಸ) ರು ಆಧ್ಯಾತ್ಮಿಕ ಕ್ಷೀಣತೆಯ ಸಮಯದಲ್ಲಿ ಕಾಣಿಸಿಕೊಂಡರು, ಒಬ್ಬ ಮಹಾನ್ ಆಧ್ಯಾತ್ಮಿಕ ವೈದ್ಯ ಮತ್ತು ಸುಧಾರಕ ಮತ್ತು ಅಸಾಧಾರಣ ದೈವಿಕ ಮಾರ್ಗದರ್ಶನದ ಅಗತ್ಯವನ್ನು ತೀವ್ರವಾಗಿ ಅನುಭವಿಸಿದಾಗ, ಅವರ ಆಗಮನವು ದೈವಿಕ ಏಕತೆ ಮತ್ತು ಈ ನೀತಿವಂತನ ಬೆಳಕಿನಿಂದ ಜಗತ್ತೆ ಬೆಳಗಿತು. ವಿಗ್ರಹದಿಂದ ದೂರವಿರಲು ಪ್ರಯತ್ನಿಸಿ. ಮತ್ತು ಸೃಷ್ಟಿ ಪೂಜೆಯಿಂದ ದೂರವಿರಲು ಪ್ರಯತ್ನಿಸಿ. ಇದು ಎಲ್ಲಾ ದುಷ್ಟತನದ ಮೂಲವಾಗಿದೆ. ಸಮಯದ ಅಗತ್ಯತೆಗಳು ಮತ್ತು ಕಾಲದ ಎಲ್ಲಾ ಅವಶ್ಯಕತೆಗಳನ್ನು ಒಳಗೊಂಡಿದೆ. ಅವರು ದೇವನ ನಿಜವಾದ ಪ್ರವಾದಿ ಮಾತ್ರವಲ್ಲ, ಎಲ್ಲಾ ಪ್ರವಾದಿಗಳಲ್ಲಿ ಶ್ರೇಷ್ಠನೆಂಬುದಕ್ಕೆ ಸಾವಿರಾರು ಪುರಾವೆಗಳಿವೆ ಎಂಬ ಅವರ ಬೋಧನೆಯು ಎಷ್ಟು ಪರಿಣಾಮಕಾರಿ ಮತ್ತು ಬಲವಾಗಿತ್ತು. ಅವರ ಸತ್ಯವು ಅಷ್ಟೇ ಸ್ಪಷ್ಟವಾಗಿದೆ.

**(ಬರಾಹೀನೆ ಅಹ್ಮದಿಯಾ, ಭಾಗ-2, ರೂಹಾನಿ ಖಝಾಇನ್ ಸಂಪುಟ-1, ಪುಟ-114, ಅಡಿಟಿಪ್ಪಣಿ ಸಂಖ್ಯೆ-10)**

### ಸಾವಿರಾರು ಪ್ರವಾದಿಗಳ ಕಾರ್ಯವನ್ನು ಏಕೈಕವಾಗಿ ಸಾಧಿಸಿ ತೋರಿಸಿದ ಪ್ರವಾದಿ(ಸ)

ಹಝ್ರತ್ ಪೈಗಂಬರ್(ಸ) ಅವರನ್ನು ಸಕಲ ಬ್ರಹ್ಮಾಂಡವನ್ನು ಎದುರಿಸಬೇಕಾಗಿತ್ತು ಮತ್ತು ಹಝ್ರತ್ ಮಮ್‌ದೂಹ್ (ಪ್ರವಾದಿ ಉಹಮ್ಮದ್(ಸ)) ಅವರಿಗೆ ವಹಿಸಿಕೊಟ್ಟ ಕೆಲಸವು ವಾಸ್ತವವಾಗಿ ಸಾವಿರಾರು ಪ್ರವಾದಿಗಳ ಕಾರ್ಯವಾಗಿತ್ತು. ಆದರೆ ಆದಮ್‌ನ ಸಂತತಿಗಳು ಒಂದೇ ಜನಾಂಗ ಮತ್ತು ಒಂದೇ ಸಮುದಾಯದವರಂತೆ ಆಗಬೇಕು ಮತ್ತು ಈ ಸರಪಳಿಯು ಐಕ್ಯತೆಯಿಂದ ಪ್ರಾರಂಭವಾದಂತೆ ಪರಕೀಯತೆ ಮತ್ತು ಅಪರಿಚಿತತೆಯು ಏಕತೆಯಿಂದ ಮುಂದುವರಿಯಬೇಕು ಮತ್ತು ಕೊನೆಗೊಳ್ಳಬೇಕು ಎಂದು ದೇವರು ಅನುಮೋದಿಸಿದ್ದರಿಂದ, ಅಲ್ಲಾಹನು ಇಡೀ ಜಗತ್ತಿಗೆ ಕೊನೆಯ ಮಾರ್ಗದರ್ಶನವನ್ನು ಸಹಸಾಮ್ಯವಾಗಿ ನೀಡಿದನು.

**(ಬರಾಹೀನೆ ಅಹ್ಮದಿಯಾ ಭಾಗ-2, ರೂಹಾನಿ ಖಝಾಇನ್ ಸಂಪುಟ-1, ಪುಟ-116, ಅಡಿಟಿಪ್ಪಣಿ ಸಂಖ್ಯೆ 10)**

### ಹಝ್ರತ್ ಪೈಗಂಬರ್(ಸ) ಅವರು ಸಕಲ ಉದಾತ್ತ ನೈತಿಕತೆಗಳಲ್ಲಿ ಎಷ್ಟು ಪರಿಪೂರ್ಣರಾಗಿದ್ದಾರೆ ಎಂದರೆ ಅದನ್ನು ಹೆಚ್ಚು ಕಲ್ಪಿಸಿಕೊಳ್ಳಲಾಗುವುದಿಲ್ಲ

ಹಝ್ರತ್ ಪೈಗಂಬರ್(ಸ) ಅವರ ಸ್ವಭಾವವು ತುಂಬಾ ಸ್ಥಿರವಾಗಿತ್ತು ಮತ್ತು ಅವರು ಎಲ್ಲೆಡೆ ಸೌಮ್ಯ ಸ್ವಭಾವದವರಾಗಿರಲಿಲ್ಲ ಅಥವಾ ಅವರು ಎಲ್ಲಾ ಸ್ಥಳಗಳಲ್ಲಿ ಕೋಪಕ್ಕೆ ಒಳಗಾಗಲಿಲ್ಲ, ಬದಲಿಗೆ ಅವರು ವಿವೇಕಶಾಲಿಯಾಗಿದ್ದರಿಂದ ಸಂದರ್ಭೋಚಿತವಾಗಿ ವರ್ತಿಸುವ ಅನುಗ್ರಹದಾಯಕ ಸ್ವಭಾವದವರಾಗಿದ್ದರು, ಹೀಗೆ ಪವಿತ್ರ ಖುರ್‌ಆನ್ ಕೂಡ ಇದೇ ನಿಟ್ಟಿನಲ್ಲಿ ಸಮಗ್ರವಾದ ಮತ್ತು ಸಾಧಾರಣವಾದ ರೀತಿಯಲ್ಲಿ ಅವತರಿಸಿತು ಅಂದರೆ ಸಮಗ್ರವಾದ ತೀವ್ರತೆ, ಕರುಣೆ, ಭಯ, ಸಹಾನುಭೂತಿ, ಸೌಮ್ಯತೆ ಮತ್ತು ಕಠೋರತೆಯ ಸಂದರ್ಭಕ್ಕಾಗಿ ಅವತರಿಸಿತು...... ಅಂದರೆ, ಹಝ್ರತ್ ಪೈಗಂಬರ್(ಸ)ರ ಸಾಧಾರಣ ಸ್ವಭಾವದ ಅನುಗುಣವಾಗಿ

ಅವತರಿಸಲಾಯಿತು. ಇದರಲ್ಲಿ ಮೂಸಾವಿನ ಕಠೋರತೆಯ ಸ್ವಭಾವಂತೆ ಆಗಿರುವುದಿಲ್ಲ ಅಥವಾ ಯೇಸು ಮಸೀಹರ ಹಾಗೆ ಮತ್ತು ಸೌಮ್ಯತೆಯ ಸ್ವಭಾವವಿಲ್ಲ ಬದಲಿಗೆ ಕಠೋರತೆ, ಸೌಮ್ಯತೆ, ಕ್ರೋಧ ಮತ್ತು ಸಂತೋಷದ ಸಮಗ್ರವಾಗಿದೆ. ...... ಅದರ ಕುರಿತು ಇನ್ನೊಂದು ಸಥಳದಲ್ಲಿ ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಪೈಗಂಬರ್(ಸ) ಅವರನ್ನು ಉದ್ದೇಶಿಸಿ ಹೀಗೆ ಹೇಳಿರುವನು **ಇನ್ನಕ ಲ ಅಲಾ ಖುಲುಖಿನ್ ಅಝೀಮ್** ಅಂದರೆ ಓ ಪ್ರವಾದಿ, ನೀವು ಒಬ್ಬ ಮಹಾನ್ ಸೃಷ್ಟಿಯಾಗಿರುವೆ, ಅಂದರೆ ಹಝ್ರತ್ ಪೈಗಂಬರ್(ಸ) ಅವರು ಸಕಲ ಉದಾತ್ತ ನೈತಿಕತೆಗಳಲ್ಲಿ ಎಷ್ಟು ಪರಿಪೂರ್ಣರಾಗಿದ್ದಾರೆ ಎಂದರೆ ಅದನ್ನು ಹೆಚ್ಚು ಕಲ್ಪಿಸಿಕೊಳ್ಳಲಾಗುವುದಿಲ್ಲ. **(ಬರಾಹೀನೆ ಅಹ್ಮದಿಯಾ ಭಾಗ–3, ರೂಹಾನಿ ಖಝಾಈನ್, ಸಂಪುಟ–1, ಪುಟ–193, ಅಡಿಟಿಪ್ಪಣಿ–11)**

**ಅತ್ಯುನ್ನತ ತಿಳುವಳಿಕೆ ಮತ್ತು ಬುದ್ಧಿವಂತಿಕೆ, ಉನ್ನತ ಬುದ್ಧಿಶಕ್ತಿ ಮತ್ತು ಉನ್ನತ ನೈತಿಕ ಗುಣಗಳನ್ನು ಹೊಂದಿರುವ ಪ್ರವಾದಿ(ಸ)**

ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಪೈಗಂಬರ್(ಸ) ಅವರ ಹೃದಯವನ್ನು ಯಾವುದೇ ರೀತಿಯ ಪ್ರಕ್ಷುಬ್ಧತೆಯಿಲ್ಲದ ಸ್ಪಷ್ಟವಾದ ಗಾಜಿನೊಂದಿಗೆ ಹೋಲಿಸಿದ್ದಾನೆ. ಇದು **ಹೃದಯದ ಪ್ರಕಾಶ**ವಾಗಿದೆ. ಮತ್ತು ಅಲ್ಲಾಹನು ಹಝ್ರತ್ ಪೈಗಂಬರ್(ಸ) ಅವರ ತಿಳುವಳಿಕೆ ಮತ್ತು ಬುದ್ಧಿಶಕ್ತಿ ಮತ್ತು ಎಲ್ಲಾ ನೈಸರ್ಗಿಕ ಮತ್ತು ಸ್ವಾಭಾವಿಕ ನೈತಿಕ ಸದ್ಗುಣಗಳನ್ನು ಸೂಕ್ಷ್ಮವಾದ ಎಣ್ಣೆಗೆ ಹೋಲಿಸಿದನು, ಅದರಲ್ಲಿ ಸಾಕಷ್ಟು ಪ್ರಕಾಶವಿದೆ ಮತ್ತು ಅದು ದ್ವೀಪವನ್ನು ಪ್ರಜ್ವಲಗೊಳಿಸುವ ಸಾಧನವಾಗಿದೆ ಇದು **ಬುದ್ಧಿಯ ಪ್ರಕಾಶ**ವಾಗಿದೆ ಏಕೆಂದರೆ ಎಲ್ಲಾ ಆಂತರಿಕ ಸೂಕ್ಷ್ಮತೆಗಳಿಗೆ ಬುದ್ಧಿಶಕ್ತಿಯು ಮೂಲ ಮತ್ತು ಉದ್ದೇಶವಾಗಿದೆ. ತದನಂತರ ಈ ಎಲ್ಲಾ ಪ್ರಕಾಶಗಳ ಮೇಲೆ ಸ್ವರ್ಗೀಯ ಪ್ರಕಾಶವಾದ ದೈವವಾಣಿಯಾಗಿದೆ ಅವತೀರ್ಣವಾಗಿದ್ದು ವಿವರಿಸಿದರು. ಇದು **ದೇವವಾಣಿಯ ಪ್ರಕಾಶ**ವಾಗಿದೆ. ಹೀಗೆ ಮೂರು ವಿಧದ ಪ್ರಕಾಶಗಳು ಸಮಂಜಸವಾದಾಗ ಅದು ಜನರ ಮಾರ್ಗದರ್ಶನಕ್ಕೆ ಕಾರಣವಾಗುತ್ತದೆ. ಇದೇ ದೈವಿಕ ತತ್ವವಾಗಿದೆ ಅದು ದೈವವಾಣಿಯ ಬಗ್ಗೆ ಸರ್ವಶಕ್ತನಾದ ಅಲ್ಲಹನ ಕಡೆಯಿಂದ ಪ್ರಾಚೀನ ಕಾನೂನಾಗಿದೆ ಮತ್ತು (ಅಲ್ಲಾಹನ) ಪರಿಶುದ್ಧತೆಗೆ ಸೂಕ್ತವಾಗಿದೆ. **(ಬರಾಹೀನೆ ಅಹ್ಮದಿಯಾ ಭಾಗ–3, ರೂಹಾನಿ ಖಝಾಈನ್ ಸಂಪುಟ–1, ಪುಟ–197, ಅಡಿಟಿಪ್ಪಣಿ ಸಂಖ್ಯೆ–11)**

**ಉದಾರತೆ ಮತ್ತು ಔದಾರ್ಯ, ತಪಸ್ಸು ಮತ್ತು ತೃಪ್ತಿ, ಪುರುಷತ್ವ ಮತ್ತು ಧೈರ್ಯ ದೇವರ ಪ್ರೀತಿಯಲ್ಲಿ ಅನನ್ಯ ಹೋಲಿಸಲಾಗದ ಪ್ರವಾದಿ(ಸ)**

ಯಾವ ನೈತಿಕತೆ, ದಯೆ, ಔದಾರ್ಯ, ನಿಸ್ವಾರ್ಥತೆ, ಭಕ್ತಿ, ಶೌರ್ಯ, ವಿಜಯ, ಸಂತೃಪ್ತಿ ಮತ್ತು ಇಹಲೋಕದ ನಿರ್ಲಿಪ್ತತೆಗೆ ಸಂಬಂಧಿಸಿದ್ದು, ಅವು ಹಝ್ರತ್ ಪೈಗಂಬರ್(ಸ) ರವರ ವ್ಯಕ್ತಿತ್ವದಲ್ಲಿ ಯಾವ ಮಟ್ಟಕ್ಕೆ ಪ್ರಜ್ವಲಿಸಿದ್ದವು ಎಂದರೆ ಅವು ಮಸೀಹನು ಏಕೆ ಲೋಕದಲ್ಲಿ ಹಝ್ರತ್ ಪೈಗಂಬರ್(ಸ) ರವರಿಗಿಂತ ಮುಂಚೆ ಯಾವ ಪ್ರವಾದಿಯು ಅಂತಹ ವಿವರಣೆಯಿಂದ ಪ್ರಭುದ್ಧನಾಗಿರಲಿಲ್ಲ. ಏಕೆಂದರೆ ಸರ್ವಶಕ್ತನಾದ ದೇವನು ಅವರ ಮೇಲೆ ಅಪಾರ ಭಂಡಾರಗಳ ಬಾಗಿಲು ತೆರೆದಿದ್ದನು. ಆದ್ದರಿಂದ ಹಝ್ರತ್ ಪೈಗಂಬರ್(ಸ) ಅವೆಲ್ಲಾ ಅಲ್ಲಾಹನ ಮಾರ್ಗದಲ್ಲಿ ವ್ಯಯ ಮಾಡಿದರು. ಮತ್ತು ಒಂದು ಪೈಸೆಯ್ಟು ಸಹ ತನಗಾಗಿ ಖರ್ಚು ಮಾಡಲಿಲ್ಲ. ಅವರು ಯಾವುದೇ ಕಟ್ಟಡವನ್ನು ನಿರ್ಮಿಸಲಿಲ್ಲ. ಆಸ್ಥಾನಗಳನ್ನು ನಿರ್ಮಿಸಲಿಲ್ಲ. ಆದರೆ ಬಡವರ ಗುಡಿಸಲಿಗಿಂತ ಯಾವುದೇ ಆಧ್ಯತೆಯಿಲ್ಲದ ಸಣ್ಣ ಕಚ್ಚಾ ಗುಡಿಸಲಿನಲ್ಲಿ ವಾಸಿಸುತ್ತಿದ್ದರು. ಅವರ ಜೀವನಪೂರ್ಣ ಅದರಲ್ಲಿಯೇ ಕಳೆದರು. ದುಷ್ಕರ್ಮಿಗಳಿಗೆ ಸತ್ಕಾರ್ಯಗಳನ್ನು ತೋರಿ ತನ್ನ ಸಂಪತ್ತಿನಿಂದ ಕಷ್ಟದಲ್ಲಿದ್ದವರಿಗೆ ಸಂತೋಷವನ್ನು ಒದಗಿಸಿಕೊಟ್ಟರು. ಸಾಮಾನ್ಯವಾಗಿ ಮಲಗಲು ನೆಲದ ಮೇಲೆ ಹಾಸಿಗೆ ಮತ್ತು ವಾಸಿಸಲು ಸಣ್ಣ ಗುಡಿಸಲು ಮತ್ತು ತಿನ್ನಲು ಗೋಧಿ ರೊಟ್ಟಿ ಅಥವಾ ಹಸಿವನ್ನು ಸ್ವೀಕರಿಸಿದರು. ಲೌಕಿಕ ಸಂಪತ್ತು ಹೇರಳವಾಗಿ ನೀಡಲಾಯಿತು. ಆದರೆ ಎಂದೂ ಅದನ್ನು ತನ್ನ ಪವಿತ್ರ ಕೈಗಳಿಂದ ಸ್ವಾರ್ಥಕ್ಕೆ ಬಳಸಲಿಲ್ಲ. ಸದಾ ಬಡವರನ್ನು ಶ್ರೀಮಂತರ ಮೇಲೆ ಮತ್ತು ಬಡವರನ್ನು ಶ್ರೀಮಂತರ ಮೇಲೆ ಆಧ್ಯತೆ ನೀಡಿದರು. ತನ್ನ ಕೊನೆಯ ಉಸಿರಿನವರೆಗೂ ಅದೇ ಮಾರ್ಗದ ಮೇಲೆ ನಡೆದರು. ಅಲ್ಲಾಹನ ಹೊರತು ಯಾವ ಶಕ್ತಿಯ ಮುಂದೆ ತಲೆಬಾಗಲಿಲ್ಲ. ಸಾವಿರಾರು ಶತ್ರುಗಳ ವಿರುದ್ಧ ಯುದ್ಧಗಳಲ್ಲಿನಿಂತು, ಅಲ್ಲಿ ಕೊಲೆಗೀಡಾಗುವ ಸಂಭವವೇ ಹೆಚ್ಚಿತ್ತು. ಆದರೂ ಅಲ್ಲಾಹನ ಮೇಲೆ ಭರವಸೆ ನಿಷ್ಠೆ ಹೊಂದಿ ಸ್ಥಿರವಾಗಿ ನಿಂತು ತನ್ನ ಶೌರ್ಯ ತೋರಿಸಿದರು. ಅಂದಹಾಗೆ ಅವರು ತೋರಿದ ಉದಾರತೆ ಮತ್ತು ಔದಾರ್ಯ, ತಪಸ್ಸು ಮತ್ತು ತೃಪ್ತಿ, ಪುರುಷತ್ವ ಮತ್ತು ಧೈರ್ಯ, ದೇವರ ಪ್ರೀತಿಯಲ್ಲಿ ಅನನ್ಯ ಗುಣಗಳನ್ನು ಅಲ್ಲಾಹನು ಹಝ್ರತ್ ಖಾತಮಲ್ ಅಂಬಿಯಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರಲ್ಲಿ ಹೇಗೆ ಪ್ರಕಟಪಡಿಸಿದನು ಎಂದರೆ ಅಂತಹ ವಿವರಣೆ ಇಂದಿಗೂ ದೂರಲ್ಲೂ ಕಂಡು ಬಂದ ಉದಾಹರಣೆ ಇಲ್ಲ. ಮುಂದೆಯೂ ಇರಲಿಕ್ಕಿಲ್ಲ. **(ಬರಾಹೀನೆ ಅಹ್ಮದಿಯಾ ಭಾಗ–3, ರೂಹಾನಿ ಖಝಾಈನ್ ಸಂಪುಟ–1, ಪುಟ–289, ಅಡಿಟಿಪ್ಪಣಿ–11)**

**ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ಲಭಿಸಿದ ಅಭೂತಪೂರ್ವ ಗುಣಗಳಲ್ಲಿ ಯಾವ ನಬಿಯು ಸಹ ಸರಿಸಾಟಿಯಾಗಲು ಸಾಧ್ಯವಿಲ್ಲ. ದೇವದೂತರಿಗೂ ಸಹ ಈ ವಿಷಯದಲ್ಲಿ ಶಕ್ತಿ ತೋರಿಸುವುದು ಅಸಾಧ್ಯ.**

ವಾಸ್ತವವಾಗಿ ಹಝ್ರತ್ ಪೈಗಂಬರ್(ಸ) ಅವರಿಗೆ ಲಭಿಸಿದ ಅಭೂತಪೂರ್ವ ಗುಣಗಳಲ್ಲಿ ಯಾವ ನಬಿಯು ಸಹ ಸರಿಸಾಟಿಯಾಗಲು ಸಾಧ್ಯವಿಲ್ಲ. ಅಷ್ಟೇ ಅಲ್ಲ ದೇವದೂತರಿಗೂ ಸಹ ಈ ವಿಷಯದಲ್ಲಿ ಶಕ್ತಿ ತೋರಿಸುವುದು ಅಸಾಧ್ಯ. ಅಂದಹಾಗೆ ಹಝ್ರತ್ ಪೈಗಂಬರ್(ಸ) ರಿಗೂ ಇತರರಿಗೂ ಈ ವಿಷಯದಲ್ಲಿ ಯಾವ ಸಂಬಂಧವೂ ಇಲ್ಲ. ಆದರೆ ಓ ಸತ್ಯಸಂಶೋಧಕರೇ **ಅರ್ಷದಕಲ್ಲಾಹ್** ನೀವು ಈ ಮಾತನ್ನು ಗಮನಕಟ್ಟು ಆಲಿಸಿರಿ ಅಲ್ಲಾಹನು ಈ ಗುಣಗಳನ್ನು ನೀಡಲು ಕಾರಣವೇನೆಂದರೆ ಯಾವಾಗಲೂ ಕಾಲಪೂರ್ತಿ ಈ ಪವಿತ್ರ ಪ್ರವಾದಿಯ ಅನುಗ್ರಹಗಳು ಪ್ರಕಟಗೊಳ್ಳುತ್ತಾ ಇರಬೇಕು. ಮತ್ತು ಯಾವಾಗಲೂ ಅವನ ಪ್ರಕಾಶ ಅವನ ಪ್ರಸಿದ್ಧಿಯ ತೇಜಸ್ಸು ವಿರೋಧಿಗಳಿಗೆ ಅಪರಾಧಿಯನ್ನಾಗಿ ಮತ್ತು ನಿರುತ್ತರಗೊಳಿಸುತ್ತಿರಬೇಕು. ಈ ಉದ್ದೇಶಕ್ಕಾಗಿ ಅಲ್ಲಾಹನು ಈ ಉತ್ತುಂಗ ಗುಣಗಳ ವ್ಯವಸ್ಥೆ ಮಾಡಿಟ್ಟದನು. ಅದರಿಂದ ಸಮುದಾಯ ಜನರು ಪರಿಪೂರ್ಣ ರೀತಿಯಲ್ಲಿ ಈ ಗುಣಗಳನ್ನು ಅತ್ಯಂತ ವಿನಮ್ರದಿಂದ ಅನುಸರಿಸುವವರು ಈ ಗುಣಗಳನ್ನು ಪಡೆಯಲು ಸಂಪೂರ್ಣ ರೀತಿಯಲ್ಲಿ ಈ ಪವಿತ್ರ ಪ್ರವಾದಿ(ಸ) ಅವರಿಗೆ ಶರಣಾಗುತ್ತಾರೆ. ಅಲ್ಲಾಹನು ಅವರಿಗೆ ಒಂದು ಪಾರದರ್ಶಕ ಶೀಶೆಯ ರೀತಿಯಲ್ಲಿ ಪಡೆದು ಈ ಪವಿತ್ರ ಪ್ರವಾದಿ (ಸ) ರವರ ಗುಣಗಳನ್ನು ಅವರ ಮೂಲಕ ಪ್ರಕಟಪಡಿಸುತ್ತಾನೆ. ಅವರಲ್ಲಿ ಉಂಟಾದ ಈ ಎಲ್ಲಾ ಅನುಗ್ರಹಗಳಿಗೆ ಕಾರುಣ್ಯಗಳಿಗೆ ಅವರ ಪರಿಪೂರ್ಣ ಅನುಸರಣೆಯೇ ಕಾರಣವಾಗಿರುತ್ತದೆ. ವಾಸ್ತವದಲ್ಲಿ ಈ ಎಲ್ಲಾ ಪರಿಪೂರ್ಣ ಗುಣಗಳಿಗೆ, ಎಲ್ಲಾ ಸ್ತುತಿಗೆ ಕಾರಣ ಪವಿತ್ರ ಪ್ರವಾದಿ(ಸ) ರವರು ಆಗಿರುತ್ತಾರೆ. ಅವರ ಅನುಯಾಯಿಗಳು ಅವರ ಈ ಗುಣಗಳಿಗಾಗಿ ವಾರಸುದಾರರಾಗಿರುತ್ತಾರೆ. **(ಬರಾಹೀನೆ ಅಹ್ಮದಿಯಾ ಭಾಗ–3, ರೂಹಾನಿ ಖಝಾಈನ್ ಸಂಪುಟ–1, ಪುಟ–268, ಅಡಿಟಿಪ್ಪಣಿ–10)**

**ಹಝ್ರತ್ ರಸೂಲುಲ್ಲಾಹ್(ಸ) ರವರ ಎದೆಗೂಡಿನ ಹೃದಯವು ಎಲ್ಲ ಆದಿ ಅಂತ್ಯದವರ ಎದೆ ಹೃದಯಗಳಿಂದಲೂ ಅಪ್ರತಿಮ, ಪರಿಶುದ್ಧ, ಮುಗ್ಧ ಹಾಗೂ ಅಪ್ರತಿಮ ಪ್ರಕಾಶಮಯವಾಗಿತ್ತು.**

ಏಕೆಂದರೆ ಹಝ್ರತ್ ರಸೂಲುಲ್ಲಾಹ್(ಸ) ತನ್ನ ಆಧ್ಯಾತ್ಮಿಕ ಪರಿಶುದ್ಧತೆ ಹಾಗೂ ಹೃದಯ ವೈಶಾಲ್ಯ ಮತ್ತು ಮಾನ, ಲಜ್ಜೆ, ಸತ್ಯಸಂಧತೆ ಅಲ್ಲಾಹನ ಮೇಲೆ ಭರವಸೆ, ನಿಷ್ಠೆ ಹಾಗೂ ದೈವಿಕ ಪ್ರೇಮದ ಎಲ್ಲ ಗುಣಗಳಲ್ಲಿಯೂ ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಅನುಗ್ರಹಿತ, ಉನ್ನತ ಮಹೋನ್ನತ, ಪ್ರಾವಿಣ್ಯತೆ, ಶ್ರೇಷ್ಠ ಹಾಗೂ ಗೌರವಾನ್ವಿತ ಸ್ಥಾನ ಹೊಂದಿದ್ದರು. ಆದುದರಿಂದ ಅಲ್ಲಾಹನು ಅವರಿಗೆ ಸುಗಂಧಮಯ ವಿಶಿಷ್ಟ ಮಹೋನ್ನತ ಗುಣಗಳಿಂದ ಎಲ್ಲರಿಗಿಂತ ಅಧಿಕ ಸುಗಂಧಿಸಿದನು. ಅವರ ಎದೆಗೂಡು ಮತ್ತು ಹೃದಯವು ಎಲ್ಲ ಆದಿ ಅಂತ್ಯದವರ ಎದೆ ಹೃದಯಗಳಿಂದಲೂ ಅಪ್ರತಿಮ ವೈಶಾಲ್ಯ, ಪರಿಶುದ್ಧ, ಮುಗ್ಧ ಹಾಗೂ ಅಪ್ರತಿಮ ಪ್ರಕಾಶಮಯವಾಗಿತ್ತು. ಆದುದರಿಂದ ಅವರು ಎಲ್ಲಾ ಆದಿ ಅಂತ್ಯದವರಲ್ಲಿ ಉಂಟಾದ ವಹಿ (ದೇವಾವಾಣಿ) ಗಿಂತ ಶಕ್ತಿಯುತ, ಪ್ರಾವಿಣ್ಯತೆ ಹೊಂದಿದ ಶ್ರೇಷ್ಠ, ಪರಿಪೂರ್ಣ ದೈವಿಕ ಗುಣಗಳನ್ನು ಪ್ರದರ್ಶಿಸುವ ಒಂದು ಅತ್ಯಂತ ಸ್ವಚ್ಛ ಮತ್ತು ವಿಶಾಲ ಕನ್ನಡಿಯಂತಾದರು. ಅದೇ ಕಾರಣದಿಂದ ಪವಿತ್ರ ಖುರ್‌ಆನ್ ಮಹೋನ್ನತವಾದ ಅನುಗ್ರಹಗಳನ್ನು ಹೊಂದಿದೆ. ಅದರ ತೀಕ್ಷಣವಾದ ಬೆಳಕು ಮತ್ತು ಉಜ್ವಲ ಕಿರಣಗಳ ಮುಂದೆ ಎಲ್ಲಾ ಗತಕಾಲದ ಗ್ರಂಥಗಳ ಪ್ರಕಾಶ ಕುಂದಿ ಹೋಗಿವೆ. **(ಸುರ್ಮಾ ಚಶ್ಮೆ ಆರಿಯಾ, ರೂಹಾನಿ ಖಝಾಯಿನ್, ಸಂಪುಟ– 2, ಪುಟ–71)**

ಸರ್ವಶಕ್ತನಾದ ಅಲ್ಲಾಹನು ನಮಗೆ ಹಝ್ರತ್ ಪೈಗಂಬರ್(ಸ) ಅವರ ಉತ್ತುಂಗ ಸ್ಥಾನಮಾನವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ನೀಡಲಿ. ಮತ್ತು ನಮಗೆ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ನಿಜವಾದ ಪ್ರೀತಿ ಮತ್ತು ವಾತ್ಸಲ್ಯವನ್ನು ಹೊಂದುವಂತೆ ಮಾಡಲಿ ಮತ್ತು ನಿಮ್ಮ ಬೋಧನೆಗಳನ್ನು ಪ್ರೀತಿಯಿಂದ ಅನುಸರಿಸುವಂತೆ ಮಾಡಲಿ. ಆಮೀನ್. **(ಮನ್ಸೂರ್ ಅಹ್ಮದ್ ಮಸ್ರೂರ್)**

...*...*...*...

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 01-08 August 2024, Issue No. 31-32

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ–30ರ ಉಳಿದ ಭಾಗ ಮುಂದುವರಿಸಲಾಗಿದೆ)*

**30 ಆಗಸ್ಟ್ 2023 ಬುಧವಾರ**

ಹುಝೂರೆ ಅನ್ವರ್(ಅಬಿಅ) ಮುಂಜಾನೆ 5.40 ಕ್ಕೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಂತರ ಹುಝೂರೆ ಅನ್ವರ್(ಅಬಿಅ) ತಮ್ಮ ವಸತಿಯತ್ತ ತೆರಳಿದರು. ಮುಂಜಾನೆ ಹುಝೂರೆ ಅನ್ವರ್(ಅಬಿಅ) ಕಚೇರಿ ಅಂಚೆಗಳನ್ನು, ಪತ್ರಗಳನ್ನು ಮತ್ತು ವರದಿಗಳನ್ನು ಪರಿಶೀಲಿಸಿದರು ಮತ್ತು ನಿರ್ದೇಶನಗಳನ್ನು ನೀಡಿದರು. ಹೀಗೆ ಹುಝೂರ್ ಅನ್ವರ್ ಕಚೇರಿಯ ನಾನಾ ಕಾರ್ಯಗಳಲ್ಲಿ ತೊಡಗಿದ್ದರು.

**ಮಸ್ಜಿದ್ ಸಾದಿಖ್‌ನ ಉದ್ಘಾಟನಾ ಸಮಾರಂಭ**

ಇಂದು Karben ನಗರದಲ್ಲಿ "ಮಸ್ಜಿದ್ ಸಾದಿಖ್" ನ ಉದ್ಘಾಟನಾ ಸಮಾರಂಭದ ಕಾರ್ಯಕ್ರಮವಿತ್ತು. ಹುಝೂರೆ ಅನ್ವರ್(ಅಬಿಅ) 4 ಗಂಟೆ 50 ನಿಮಿಷಕ್ಕೆ ತಮ್ಮ ವಸತಿಯಿಂದ ಹೊರಗೆ ಆಗಮಿಸಿದರು ಮತ್ತು ಫ್ರೆಂಕ್‌ಫರ್ಟ್‌ನಿಂದ Karbeen ಗೆ ಪ್ರಯಾಣ ಬೆಳೆಸಿದರು. ಇಲ್ಲಿಂದ Karben ನಗರಕ್ಕಿರುವ ದೂರ 19 ಕಿ.ಮೀ ಆಗಿದೆ. 17 ನಿಮಿಷದ ಪ್ರಯಾಣದ ನಂತರ 5 ಗಂಟೆ 7 ನಿಮಿಷಕ್ಕೆ ಹುಝೂರೆ ಅನ್ವರ್(ಅಬಿಅ) "ಮಸ್ಜಿದ್ ಸಾದಿಖ್" ತಲುಪಿದರು. ಅವರಿಗಾಗಿ ಈ ದಿನ ಅತ್ಯಂತ ಹರ್ಷದಾಯಕ ಹಾಗೂ ಅನುಗ್ರಹಪೂರ್ಣ ದಿನವಾಗಿತ್ತು. ಹುಝೂರೆ ಅನ್ವರ್(ಅಬಿಅ)ರ ಪವಿತ್ರ ಪಾದಗಳು ಈ ಭೂಮಿಯ ಮೇಲೆ ಎರಡನೆಯ ಸಲ ಬಿದ್ದಿದ್ದವು. ಇದಕ್ಕಿಂತ ಮೊದಲು 17 ಜೂನ್ 2014 ರಂದು ಹುಝೂರೆ ಅನ್ವರ್(ಅಬಿಅ) ಇಲ್ಲಿ ಬಂದು ಮಸ್ಜಿದ್ ಸಾದಿಖ್‌ನ ಅಡಿಗಲ್ಲು ಹಾಕಿದ್ದರು.

ಇಂದು ಪ್ರತಿಯೊಬ್ಬರು ಅತ್ಯಂತ ಸಂತೋಷದಲ್ಲಿದ್ದರು. ಹುಝೂರೆ ಅನ್ವರ್(ಅಬಿಅ) ವಾಹನದಿಂದ ಹೊರಗೆ ಬರುತ್ತಲೇ ಜಮಾಅತ್‌ನ ಬಾಂಧವರು ಹರ್ಷಿತರಾಗಿ ಹುಝೂರೆ ಅನ್ವರ್(ಅಬಿಅ) ಘೋಷಣೆಗಳನ್ನು ಕೂಗಿದರು. ಬಲಕ ಬಲಕಿಯರು ಗುಂಪುಗಟ್ಟಿ ಸ್ವಾಗತ ಗೀತೆಗಳನ್ನು ಹಾಡಿದರು. ಈ ಸಂದರ್ಭದಲ್ಲಿ Karben ನಗರದ ಅಧ್ಯಕ್ಷರಾದ ಸನ್ಮಾನ್ಯ ಆತಿಫ್ ಶೆಹಝಾರ್ ವರ್ಕ್ ಸಾಹಿಬ್, ರೀಜ್ನಲ್ ಅಮೀರ್ ಮುಝಫ್ಫರ್ ಅಹ್ಮದ್ ಭಟ್ಟಿ ಸಾಹಿಬ್ ಮತ್ತು ಇಲ್ಲಿಯ ಮುರಬ್ಬಿಯರಾದ ತಹಸೀನ್ ರಶೀದ್ ಸಾಹಿಬ್ ಹುಝೂರೆ ಅನ್ವರ್(ಅಬಿಅ) ಅವರಿಗೆ ಸುಸ್ವಾಗತ ಕೋರಿದರು.

ಅನಂತರ ಹುಝೂರೆ ಅನ್ವರ್(ಅಬಿಅ) ಮಸೀದಿಯ ಸಭಾಂಗಣಕ್ಕೆ ಆಗಮಿಸಿದರು ಮತ್ತು ಝುಹರ್ ಮತ್ತು ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ಅದಾದ ತಕ್ಷಣ ಮಸೀದಿಯ ಉದ್ಘಾಟನೆ ನೆರವೇರಿತು. ಹುಝೂರೆ ಅನ್ವರ್(ಅಬಿಅ) ಆಗಮನಕ್ಕಿಂತ ಮುಂಚೆ ಸಮಾರಂಭದಲ್ಲಿ ಸೇರಿದ ಅತಿಥಿಗಳೆಲ್ಲ ತಮ್ಮ ಆಸನಗಳಲ್ಲಿ ಕುಳಿತುಕೊಂಡಿದ್ದರು. ಇಂದಿನ ಈ ಸಮಾರಂಭದಲ್ಲಿ 91 ಅತಿಥಿಗಳು ಭಾಗವಹಿಸಿದ್ದರು. ಅವರಲ್ಲಿ ವಿವಿಧ ರಾಜಕೀಯ ಪಕ್ಷಗಳು FDP ಮತ್ತು Die Grunen, SPD, DU Catholic, ರಾಜ್ಯದ ರಾಜಕಾರಿಣಿಗಳು ಮತ್ತು Protestant ನ ಸ್ಥಳೀಯರು morman culture ನ ಪ್ರತಿನಿಧಿಗಳು, ಪೋಲೀಸ್ ಅಗ್ನಿಶಾಮಕದಳ, ವಕೀಲರು, ವಿವಿಧ ಸಾಮಾಜಿಕ ಸೇವೆ ಸಲ್ಲಿಸುವ ಸಂಸ್ಥೆಗಳ ಪ್ರತಿನಿಧಿಗಳು, Sports club ಮತ್ತು ಜೀವನಕ್ಕೆ ಸಂಬಂಧಿಸಿದ ವಿವಿಧ ಭಾಗಗಳ ಅತಿಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ಪ್ರಾರಂಭವು ಪವಿತ್ರ ಖುರ್‌ಆನ್‌ನ ಪಠಣದಿಮದಾಯಿತು. ಅದನ್ನು ಹಾಫಿಝ್ ಬದರ್ ಯಾಸಿರ್ ಅಶ್ರಫ್ ಸಾಹಿಬ್ ನೇರವೇರಿಸಿಕೊಟ್ಟರು. ಸನ್ಮಾನ್ಯ ಯಾಸಿರ್ ಅಹ್ಮದ್ ಸಾಹಿಬ್ ಅವರ ಜರ್ಮನ್ ಭಾಷಾಂತರ ಪ್ರಸ್ತುತಪಡಿಸಿದರು.

ಅದಾದ ನಂತರ ಸನ್ಮಾನ್ಯ ಅಮೀರ್ ಸಾಹಿಬ್ ಜರ್ಮನಿ ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು.

ಅಮೀರ್ ಸಹಿಬ್ ಈ ನಗರದ ಪರಿಚ ನೀಡುತ್ತಾ ಹೇಳಿದರು. 1970 ರಲ್ಲಿ Karben ನಗರ ಉದಯವಾಯಿತು. ಆದರೆ ಈ ನಗರದ ಬೇರುಗಳು ಅದಕ್ಕಿಂತ ಪುರಾತನವಾಗಿದೆ. 1827 ರಲ್ಲಿ ಮೊದಲ ಬಾರಿಗೆ ಈ ನಗರದ ಹೆಸರು ಕಾರ್‌ಬನ್ ಎಂದು ಕೇಳಿಬಂತು.

ಈ ನಗರದಲ್ಲಿ 1987 ರಿಂದ ಅಹ್ಮದಿ ಬಂದು ಸೇರಲಿಕ್ಕೆ ಪ್ರಾರಂಭಿಸಿದರು. ಆದರೆ ಕ್ರಮಬದ್ಧ ರೀತಿಯಲ್ಲಿ ಜಮಾಅತ್ 1998 ರಂದು ಸ್ಥಾಪಿತವಾಯಿತು. ಪ್ರಾರಂಭದಲ್ಲಿ 6 ಕುಟುಂಬಗಳ 25 ಜನರಿಂದ ಜಮಾಅತ್ ಸ್ಥಾಪಿತಗೊಂಡಿತು. ಈಗ ಅದರ ಸಂಖ್ಯೆ 276 ಕ್ಕೆ ತಲುಪಿದೆ.

ಪ್ರಾರಂಭದಲ್ಲಿ ಕೇಂದ್ರಗಳನ್ನಾಗಿ ಮಾಡಿ ಮನೆಗಳಲ್ಲಿ ನಮಾಝ್ ನಿರ್ವಹಿಸುತ್ತಿದ್ದರು. ಅನಂತರ ನಮಾಝ್ ಮತ್ತು ಇನ್ನಿತರ ಸಭೆಗಳಿಗಾಗಿ ಒಂದು ಸಣ್ಣದಾದ ಮನೆ ಬಾಡಿಗೆಗೆ ಪಡೆದುಕೊಂಡರು. ಅದು 2013 ರಿಂದ ಬಳಕೆಯಲ್ಲಿದೆ. ಅನಂತರ ನಗರದ townhall ನ ಕೆಳಗಡೆ ಒಂದು ಜಾಗ ಪಡೆದುಕೊಂಡರು. ಅಲ್ಲಿ ಜಮಾಅತ್ ತಮ್ಮ ಕಾರ್ಯಕ್ರಮಗಳನ್ನು ಆಯೋಜಿಸತೊಡಗಿತು.

2023 ರಲ್ಲಿ ಮಸೀದಿಗಾಗಿ Plot ಪಡೆಯುವ ವಿಷಯವಾಗಿ ಮಾತುಕತೆಯಾಯಿತು ಮತ್ತು ಕಟ್ಟಡ ನಿರ್ಮಾಣಕ್ಕಾಗಿ ಪ್ರಾಥಮಿಕ ಅರ್ಜಿಗೆ ಮಂಜೂರಿ ದೊರೆಯಿತು. 2014 ರಲ್ಲಿ 834 ಚ. ಮೀನ ಒಂದು ಭೂಭಾಗ ಪಡೆದುಕೊಳ್ಳುವ ಭಾಗ್ಯ ದೊರೆಕಿತು.

Karben ನಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತ್ ಹಲವು ಸಾಮಾಜಿಕ ಹಿತಕ್ಕಾಗಿ ಮಾಡುವ ಕಾರ್ಯಗಳಿಂದಾಗಿ ಹೆಸರು ಪಡೆದಿದೆ. 2013 ರಲ್ಲಿ ನಮ್ಮ ಯುವಕರ ಉಪಸಂಘಟನೆ ಕಾರ್‌ಬನ್ ನಗರದ ಕಸ ಮತ್ತು ಕೊಳೆ ತೆಗೆಯುವ ಕಾರ್ಯದಲ್ಲಿ ತೊಡಗಿತ್ತು. ಹೀಗೆ ಪ್ರತಿ ಹೊಸ ವರ್ಷ ದಿನದಂದು ಈ ಕಾರ್ಯ ಪ್ರಾಮಾಣಿಕವಾಗಿ ಮಾಡಿಕೊಂಡು ಬಂದಿದ್ದಾರೆ.

ಹುಝೂರೆ ಅನ್ವರ್(ಅಬಿಅ) 7 ಜೂನ್ 2014 ರಂದು ಇಲ್ಲಿ ಆಗಮಿಸಿ ಮಸ್ಜಿದ್ ಸಾದಿಖ್‌ಗೆ ಅಡಿಗಲ್ಲು ಹಾಕಿದರು. ನಮಾಝ್ ಸಭಾಂಗಣ ಜೊತೆಯಲ್ಲಿ ಒಂದು ವಿವಿಧೋದ್ದೇಶಿತ ಕೋಣೆ ನಿರ್ಮಾಣ ಮಾಡಲಾಯಿತು. ಈ ಎರಡರ ನಿರ್ಮಾಣ ವಿಸ್ತೀರ್ಣ 126 ಚ.ಮೀ ಆಗಿದೆ. ಇದಲ್ಲದೆ ಒಂದು ಕಚೇರಿ (Office) ಸಹ ಇದೆ. ಇನ್ನು ಕೆಲವು ಸಣ್ಣ ಕೋಣೆಗಳಿವೆ. ಅದು ಕಚೇರಿ ಕೆಲಸಗಳ ನಿಮಿತ್ತ ಬಳಸಲಾಗುತ್ತದೆ. ಮಸೀದಿಗೆ ಲಗತ್ತಿಸಿ ಒಂದು ಅಡುಗೆ ಕೋಣೆ ಮತ್ತು ಅತಿಥಿಗೃಹವಿದೆ. ಗುಂಬಜನ ವಿಸ್ತೀರ್ಣ 6 ಮೀಟರ್ ಇದೆ. ಎರಡು ಗೋಪುರಗಳನ್ನು ನಿರ್ಮಿಸಲಾಗಿದೆ. ಪ್ರತಿಯೊಂದರ ಎತ್ತರ 7 ಮೀಟರ್ ಇದೆ. ಈ ಮಸೀದಿಯ ನಿರ್ಮಾಣ ವೆಚ 7 ಲಕ್ಷ 50 ಸಾವಿರ ಯುರೋ ಒಳಗೂಡಿ ಪರಿಪೂರ್ಣವಾಯಿತು.

ಅಮೀರ್ ಸಾಹಿಬರ ಪರಿಚಯ ಭಾಷಣದ ನಂತರ Natalie pawlik ಸಾಹಿಬ ಅವರ ಜರ್ಮನ್ ಸಂಸದ್ ಸದಸ್ಯರಾಗಿರುವವರು ತಮ್ಮ ಪರಿಚಯ ಭಾಷಣ ಮಾಡುತ್ತಾ ಹೇಳಿದರು. His Holiness ಅವರ ಜೊತೆಯಲ್ಲಿ ಸಲಾಂ ಅರ್ಪಿಸುತ್ತೇನೆ. ಅದೇ ರೀತಿಯಲ್ಲಿ ನೆಷ್ನಲ್ ಅಮೀರ್ Abdulah wagishausar ಸಾಹಿಬ್ ಮತ್ತು ಮೇಯರ್ ಸಾಹಿಬ್ ಮತ್ತು ಎಲ್ಲಾ ಆದರಣೀಯ ಅತಿಥಿಗಳಿಗೂ ಸಲಾಂ ಅರ್ಪಿಸುತ್ತೇನೆ.

ನಂತರ ಅವರು ಹೇಳಿದರು. ಮೊಟ್ಟ ಮೊದಲಿಗೆ ತಮ್ಮ ಆಮಂತ್ರಣಕ್ಕೆ ನಾನು ಧನ್ಯವಾದಗಳನ್ನು ಹೇಳುತ್ತೇನೆ. ತಾವು ಈ ಶುಭ ಸಂದರ್ಭದಲ್ಲಿ ನನಗೆ ಸಂಬೋಧಿಸಲು ಅವಕಾಶವನ್ನು ನೀಡಿದ್ದೀರಿ. ಈ ಮಸೀದಿ ಉದ್ಘಾಟನೆಯಿಂದಾಗಿ ಅಹ್ಮದಿಯಾ ಮುಸ್ಲಿಂ ಸದಸ್ಯರು ಶಾಂತರೀತಿಯಲ್ಲಿ ತಮ್ಮ ಚಟುವಟಿಕೆಗಳನ್ನು ನಡೆಸಬಹುದಾಗಿದೆ ಮತ್ತು ಅದರಲ್ಲಿ ತಾವುಗಳು ಒಟ್ಟುಗೂಡಿ ಆರಾಧನೆ ಮಾಡಬಹುದಾಗಿದೆ. **(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.